ಶ್ರೀ ಗಣೇಶ ಶಾರದ ಗುರುಭ್ಯೋ ನಮಃ

# ನಾದಾರ್ಚನೆ ಬರಹ ಸಂಗ್ರಹ

ನಾದಾರ್ಚನೆಯ ಸದಸ್ಯರಾದ ಸಂಧ್ಯಾರವರು ಬರೆದ ಲೇಖನಗಳು, ಕವನಗಳು ಮತ್ತು ಚುಟುಕಗಳನ್ನು ಸಂಗ್ರಹಿಸುವ ಒಂದು ಪ್ರಯತ್ನವಿದು. ಅವರ ಬರವಣಿಗೆಯಲ್ಲಿ ನವಿರಾದ ಹಾಸ್ಯ, ಜೀವನಾನುಭವ, ನೋವು, ನಲಿವಿನಿಂದ ತುಂಬಿದ ಕಿವಿಮಾತುಗಳಲ್ಲದೆ ಸುಂದರವಾದ ಪದಗಳ ಮೂಲಕ ಹೇಳಿರುವ ಬುದ್ಧಿವಾದವೂ ತುಂಬಿದೆ.

1. ಅಜ್ಜಿ

ಅಜ್ಜಿಯಾಗುವುದು ಜೀವನದ ಒಂದು ಸುಂದರ ಹಂತ
ನಂತರ ದೈಹಿಕವಾಗಿ, ಮಾನಸಿಕವಾಗಿ ಅಜ್ಜಿ ಬಜ್ಜಿಯಾಗುವುದು ಬದುಕಿನ ದುರಂತ
ಅರಿವಾಯಿತು ಈಗಲೇ ಬೇಕಾಗಿರುವುದು ಶಕ್ತಿ ಮೊದಲಿಗಿಂತ
ಬೇಡಿದೆ ಭಗವಂತನಲ್ಲಿ ತಪ್ಪದೇ ದಯೆತೋರು ಅಂತ
ನೀಡಿದ್ದಾನೆ ಆ ಕರುಣಾಮಯಿ ಅದನ್ನು ಎಂದಿಗಿಂತ
ಕೆಲವೊಮ್ಮೆ ಗಾಬರಿಯಾಗುತ್ತೇನೆ ಮುಂದೇನು ಅಂತ
ಆದರೆ ಗೊತ್ತು ನನಗೆ ನನ್ನ ಪ್ರೀತಿಯ ಬಂಧುಬಾಂಧವರ ಪ್ರೀತಿಯ ಶಕ್ತಿ
ನನ್ನನ್ನು ಸೋಲಲು ಬಿಡುವುದಿಲ್ಲ ಅಂತ
ಮನಸ್ಸು ಹೇಳುತ್ತದೆ, ನಾನೊಂದು ದಿನ ಆಗಬಹುದು ಸೋತು ಗೆದ್ದವಳು ಅಂತ

2. ಬಾಂಧವ್ಯ

ಇಂದು ಬೆಳಿಗ್ಗೆ ನನ್ನ ಅಣ್ಣನ ಮಕ್ಕಳೊಡನೆ ಮಾತಾಡುತ್ತಿದ್ದುದು ಖುಷಿ ಕೊಡುತ್ತಿತ್ತು ನನಗೆ
ಮನಸ್ಸು ಎಳೆದುಕೊಂಡು ಹೋಗುತ್ತಲೇ ಇತ್ತು, ಆ ಅಮೂಲ್ಯ ಬಾಂಧವ್ಯದ ಕಡೆಗೆ
ಓಗೊಡಲೇ ಬೇಕಿತ್ತು ಕರ್ತವ್ಯದ ಕರೆಗೆ
ಓಡಿಹೋಗಲೇ ಬೇಕಿತ್ತು ಅಡಿಗೆಮನೆಯ ಕಡೆಗೆ
ಸಂಪೂರ್ಣ ಸಮಾಧಾನವೊಂದು ದೊರಕಿತ್ತು ಕೊನೆಗೆ
ಆ ಮಕ್ಕಳ ಪ್ರೀತಿ, ಆ ಭಗವಂತ ನನಗೆ ನೀಡಿದ ಅತ್ಯುತ್ತಮ ಕೊಡುಗೆ

### 3. ಬುದ್ಧಿವಾದ

ಹಿರಿಯರು ಕಿರಿಯರಿಗೆ ಬುದ್ಧಿ ಹೇಳುವುದು ಎಲ್ಲರಿಗೂ ತಿಳಿದಿರುವ ವಿಷಯ. ಬುದ್ಧಿ ಹೇಳಲು ಯಾವ Qualification ಆಗಲೀ, Best academic record ಗಳದ್ದಾಗಲೀ ಅಗತ್ಯವಿಲ್ಲ. ಹಿರಿಯರು ತಮ್ಮ ಹಿರಿತನ ಒಂದರಿಂದಲೇ ಕಿರಿಯರಿಗೆ ಅತ್ಯುತ್ತಮ ಮಾರ್ಗದರ್ಶಕರು ಆಗಬಲ್ಲವರಾಗಿರುತ್ತಾರೆ. ಕೆಲವು ಕಿರಿಯರು ಬೆರಳೆಣಿಕೆಯಷ್ಟು ತಪ್ಪು ಮಾಡಿದರೆ, ಇನ್ನು ಕೆಲವರು ತಪ್ಪುಗಳ ಸರಮಾಲೆಯನ್ನೇ ಮಾಡುತ್ತಿರುತ್ತಾರೆ. ಇದನ್ನು ಗಮನಿಸಿದ ಸುತ್ತಲಿನವರಿಗೆ ಇವರು ಬಿಡಿಸಲಾರದ ಒಗಟಿನಂತೆ ಕಾಣುತ್ತಾರೆ. ಇದರ ಅರ್ಥ ಅವರನ್ನೆಲ್ಲಾ ತಿದ್ದಬೇಕಾದ ಸ್ಥಾನದಲ್ಲಿರುವವರು ಮೌನವಾಗಿದ್ದಾರೆ ಎಂದಲ್ಲ. ತಪ್ಪುಗಳನ್ನು ಸಹಿಸಲಾಗದಿರುವುದೇ ಹಿರಿತನದ ಮೊದಲ ಲಕ್ಷಣ. ಆದರೆ ಬುದ್ಧಿ ಹೇಳುವುದರಲ್ಲೂ ವೈವಿಧ್ಯತೆಗಳಿರುತ್ತವೆ. ಕೆಲವು ಹಿರಿಯರ ಹುಟ್ಟು ಗುಣವೇ ಮೃದುತ್ವ. ಅವರಿಗೆ ಅದರಲ್ಲೇ ನಂಬಿಕೆ, ಆತ್ಮವಿಶ್ವಾಸ. ನಯವಾಗಿ ಹೇಳುವುದು ಅವರ ಪಾಲಿಗೆ ಅನಿವಾರ್ಯವೆಂದಲ್ಲ. ಅದು ಅವರ ಸಂಸ್ಕಾರ, ಬೆಳೆದು ಬಂದ ರೀತಿ. ಇನ್ನು ಕೆಲವರು ಒರಟಾಗಿ ಹೇಳುತ್ತಾರೆ. ಅದು ಅವರ ಸ್ವಭಾವ. ಇಲ್ಲಿ ಯಾವುದು ಸರಿ ಯಾವುದು ತಪ್ಪು ಎನ್ನುವುದು ಗಣನೆಗೆ ಬರುವುದಿಲ್ಲ. ಹೇಳುವವರಲ್ಲಿ ವಿಭಿನ್ನತೆ ಇದ್ದಂತೆ ಕೇಳುವವರಲ್ಲೂ ನಾನಾ ರೀತಿಗಳಿವೆ. ಹೇಳುವವರು ಎಷ್ಟು ಹೇಳುತ್ತಾರೆ? ಹೇಗೆ ಹೇಳುತ್ತಾರೆ? ಏಕೆ ಹೇಳುತ್ತಾರೆ? ಅಥವಾ ಹೇಳಲು ಹಿಂಜರಿಯುತ್ತಾರೋ ಎಂಬುದು ಸಹಾ ಅವರವರ ಅನುಭವದ ಮೇಲೆ ಆಧಾರಿತವಾಗಿರುತ್ತದೆ. ಅಂಥಹಾ ಅನುಭವಗಳನ್ನು ಮೂರು ವಿಭಾಗಗಳಾಗಿ ವಿಂಗಡಿಸಬಹುದು.

ಮೊದಲನೆಯದು Best experience. ಇಲ್ಲಿ ಕಿರಿಯರು ಹಿರಿಯರಿಗೆ ಗೌರವ ತೋರಬೇಕೆಂಬ ತಿಳುವಳಿಕೆಯೊಂದಿಗೆ ವಿಧೇಯತೆಯನ್ನು ಬೆರೆಸಿ, ಬುದ್ಧಿವಾದಗಳನ್ನು ಚಾಚೂತಪ್ಪದೆ ಪಾಲಿಸುವ ಸದ್ಗುಣ ತೋರಿಸಿ, ಸಾರ್ಥಕ ಬದುಕನ್ನು ತಾವು ಕಂಡುಕೊಳ್ಳುವುದರ ಮೂಲಕ, ಇತರರ ಮೆಚ್ಚಿಗೆಗೆ ಪಾತ್ರರಾಗಬಲ್ಲ ಅರ್ಹತೆಯುಳ್ಳವರಾಗಿರುತ್ತಾರೆ. ಕುರುಕ್ಷೇತ್ರವಾಗಬಲ್ಲಂತ ಮನೆಯನ್ನೂ ಸಹಾ ತಮ್ಮ ಸಹನೆಯ ಮೂಲಕ ಶಾಂತಿನಿಕೇತನವನ್ನಾಗಿಸುತ್ತಾರೆ.

ಎರಡನೆಯದು Medium experience. ಇಲ್ಲಿ ಕಿರಿಯರು ಸ್ವಭಾವದಲ್ಲಿ ಒಳ್ಳೆಯವರೇ ಆಗಿದ್ದರೂ ಸಹಾ ಅವರ ವ್ಯಕ್ತಿತ್ವದ ಸ್ವರೂಪ ಬೇರೆಯಾಗಿರುತ್ತದೆ. ನನ್ನ ಜೀವನ ನನ್ನದು ಎಂಬ ಭಾವನೆ. ಅಂದರೆ ಬೇರೆ ಯಾರ ಸಲಹೆ, ಅಭಿಪ್ರಾಯ, ಬುದ್ಧಿವಾದ ಇವರಿಗೆ ಅಗತ್ಯವಿರುವುದಿಲ್ಲ. ನನ್ನ ತೀರ್ಮಾನಗಳೆಲ್ಲವೂ ನನ್ನ ವೈಯಕ್ತಿಕ ವಿಚಾರಗಳು ಎಂದು ನಿರ್ಧರಿಸಿ, ಬೇರೆಯವರು ಇವರ ವಿಷಯಕ್ಕೆ ಪ್ರವೇಶಿಸುವುದನ್ನು ನಯವಾಗಿಯೇ ನಿರಾಕರಿಸಿರುತ್ತಾರೆ. ಆದರೆ ಹಿರಿಯ ಜೀವಿಗಳಿಗೆ ಸುಮ್ಮನಿರಲಾಗದೇ ಬುದ್ಧಿ ಹೇಳುವುದನ್ನು

ನಿಲ್ಲಿಸುವುದೂ ಇಲ್ಲ, ಕಿರಿಯರು ಕೇಳುವುದನ್ನು ಆರಂಭಿಸುವುದೂ ಇಲ್ಲ. ಇದನ್ನು ಸಹಿಸಲು ಇಬ್ಬರಿಗೂ ಕಷ್ಟವಾದರೂ ಕ್ರಮೇಣ ಇದಕ್ಕೆ ಹೊಂದಿಕೊಂಡು ಹೋಗುವ ಪರಿಸ್ಥಿತಿ ಅನಿವಾರ್ಯವಾಗುತ್ತಾ ಹೋಗುತ್ತದೆ.

ಮೂರನೆಯದು, Worst experience. ಇದು ಭಯಾನಕವೋ, ದುರಂತವೋ ತಿಳಿಯದಾಗಿರುತ್ತದೆ. ಇಲ್ಲಿ ಬುದ್ಧಿಹೇಳಿದ ಪರಿಣಾಮ ಕಾಲ ಕೆಳಗೆ ಹಾಯಾಗಿ ಬಿದ್ದಿದ್ದ ನೆಮ್ಮದಿಯನ್ನು ಕೈಯ್ಯಾರೆ ಹೊಡೆದು, ಬಡಿದು, ಚಚ್ಚಿ, ಬೀದಿಗೋಡಿಸಿದೆನಲ್ಲಾ ಎಂದು ಪರಿ ಪರಿಯಾಗಿ ಪರಿತಪಿಸಿ, ಪಶ್ಚಾತ್ತಾಪದ ಬೆಂಕಿಯಲ್ಲಿ ಬೇಯುವಂತಾಗಿ, ಸಿಗದ ಶಾಂತಿಯನ್ನು ಗಲಿಬಿಲಿಯಿಂದ ಹುಡುಕುತ್ತಾರೆ. ಫಲ ಕಣ್ಣೀರು ಮಾತ್ರ. ಅಗತ್ಯ ವಿಶ್ರಾಂತಿ ಪಡೆದ ನಂತರ, ಮಗುವಿನ ಮುಖ ನೋಡಿದಾಕ್ಷಣ ಪ್ರಸವವೇದನೆಯನ್ನು ಮರೆಯುವ ತಾಯಿಯಂತೆ, ಮರೆವು ಕೂಡಾ ಭಗವಂತನ ವರಪ್ರಸಾದವೆಂದು ಭಾವಿಸಿ, ಹಳೆಯ ಕಹಿಗಳನ್ನು ಸ್ವಲ್ಪವಾದರೂ ಮರೆತು, ಕ್ಷಮಿಸಿ ಎಂದು ಯಾರೂ ಕೇಳದಿದ್ದರೂ, ಮನಸ್ಸಿನಿಂದಲೇ ತಾನೇ ಕ್ಷಮಿಸುವ ಔದಾರ್ಯ ತೋರಿ, ಮತ್ತೆ ಛಲಬಿಡದ ತ್ರಿವಿಕ್ರಮನಂತಾಗಿ, ಇನ್ನಾದರೂ ಸಫಲತೆಯನ್ನು ಕಾಣಬೇಕೆಂದು, ಹೊಸ ಅನ್ವೇಷಣೆಯ ಮಾರ್ಗದತ್ತ ಮುಖಮಾಡುವ ಉತ್ಸಾಹಿಯಾಗುತ್ತಾರೆ ಕೆಲವೊಮ್ಮೆ. ಹಣೆ ಬರಹಕ್ಕೆ ಹೊಣೆ ಯಾರು? ಪಾರ್ವತೀ ರಮಣ ಭಿಕ್ಷೆಯ ತಿರಿದುಂಡ ಎಂಬ Philosophical ಭಾವನೆಗೆ ಬೀಳುತ್ತಾರೆ ಮಗದೊಮ್ಮೆ. ಆದರೆ ಅಲ್ಪಾಯುಷಿ ಎಂಬ ಹಣೆಬರಹ ಹೊತ್ತುತಂದ ಮಾರ್ಕಂಡೇಯನು ನಂಬಿದಂಥಾ ಸಾಕ್ಷಾತ್ ಈಶ್ವರನು ಅವನ ಹಣೆಬರಹವನ್ನು ತನ್ನ ಕರುಣೆಯ ಮೂಲಕವೇ ಅಳಿಸಿ, ಅಲ್ಲಿ ಚಿರಂಜೀವಿಯಾಗು ಎಂಬ ಹೊಸ ಬರಹ ಬರೆಯಲಿಲ್ಲವೇ? ಹಣೆಬರಹ ಬರೆಯುವುದು ಬ್ರಹ್ಮನ ಕೆಲಸವಾದರೂ Every rule has an exception ಎಂದು ಆ ಶಿವ ಸಾಬೀತುಪಡಿಸಿದ ಈ ಕಥೆಯನ್ನು ತಾಯಿಯಿಂದ ಕೇಳಿ ಬೆಳೆದವರಲ್ಲವೇ ಇಂದಿನ ಹಿರಿಯರೆಲ್ಲರೂ? ಆ ಭಗವಂತನನ್ನೇ ಶರಣಾಗಿ, ಎಲ್ಲರಿಗೂ ಸದ್ಬುದ್ಧಿ ನೀಡಿ, ಕುಟುಂಬದ ಸಾಮರಸ್ಯದ ಮಹತ್ವವನ್ನು ಎಲ್ಲರೂ ಅರಿಯುವಂತೆ ಮಾಡಿ, ತನ್ಮೂಲಕ ತಾವೂ ಸಂತೋಷದಿಂದಿದ್ದು, ತಮಗೆ ಸಂಬಂಧ ಪಟ್ಟವರೆಲ್ಲರೂ ಸಂಭ್ರಮಿಸುವಂತೆ ಮಾಡು ಎಂದು ಬೇಡುತ್ತಾ, ಅದೇ ನಂಬಿಕೆಯೊಂದಿಗೆ ಸುದಿನಗಳನ್ನು ನಿರೀಕ್ಷೆ ಮಾಡುತ್ತಾ ದಿನ ದೂಡುವುದು ಎಲ್ಲ ಹಿರಿಯರೂ ಅನುಸರಿಸಲೇ ಬೇಕಾದ ಸೂಕ್ತ ಮಾರ್ಗವಲ್ಲವೇ? ನಿಮ್ಮ ವಿಮರ್ಶಾತ್ಮಕ ಅಭಿಪ್ರಾಯಗಳಿಗೆ ಕುತೂಹಲದಿಂದ ಕಾಯುತ್ತಿರುತ್ತೇನೆ.

## 4. Free time

ನಾದಾರ್ಚನೆ ಕುಟುಂಬದ ನನ್ನ ಪ್ರೀತಿಯ ಬಂಧುಗಳೇ ನೀವು ಕೇಳಿದಿರಿ ನಿನ್ನ free time ಯಾವುದೆಂದು ಪ್ರಶ್ನೆ ಅತ್ಯಂತ ಸರಳವಾದರೂ ನನಗನಿಸಿದ್ದು ಇಂದು ನನ್ನ ಪಾಲಿಗೆ ಇದೊಂದು ಯಕ್ಷಪ್ರಶ್ನೆ ಎಂದು

ಕಾರಣ ನನಗೇ ಖಚಿತತೆ ಇಲ್ಲದ ವಿಷಯಕ್ಕೆ ನಾ ಹೇಗೆ ಉತ್ತರಿಸಲಿ?
ಫ್ರೀ ಸಿಕ್ಕಿದರೂ ಅದು ಉಳಿಯುವುದೋ ಅಳಿಯುವುದೋ ಎಂದೂ ಸಹಾ ತಿಳಿಯದ್ದನ್ನು ನಾ ಹೇಗೆ ಹೇಳಲಿ?
ಹಾಡಿನ ಸಾಲೊಂದು ಬಂದು ಅಪ್ಪಳಿಸಿತು ಕಿವಿಯಲಿ
ಅದನ್ನು ನಿಮಗೆಲ್ಲಾ ತಿಳಿಸದೇ ನಾನು ಹೇಗಿರಲಿ?
"ಬಂದದ್ದೆಲ್ಲಾ ಬರಲಿ ಗೋವಿಂದನ ದಯೆಯಿರಲಿ"

5. ಹೊಗೆ

ಎಂತಹಾ ಕಷ್ಟದ ಸಂದರ್ಭದಲ್ಲೂ ಕಂಡುಬರುತ್ತಿತ್ತಂತೆ, ಹಿಂದಿನವರ ಮುಖದಲ್ಲಿ ಎಂದೂ ಮಾಸದ ಹೂನಗೆ
ಸಾವಿರಾರು ಸುಖಗಳ ಮಧ್ಯದಲ್ಲೂ, ಕಂಡುಬರುತ್ತಿದೆ, ಇಂದಿನವರ ಮುಖದಲ್ಲಿ ಅಸಮಾಧಾನದ ಹೊಗೆ
ತಿಳಿಯುತ್ತಿಲ್ಲ ಇದರ ಪರಿಹಾರ ಹೇಗೆ?

6. ಕನಸು

ಊಹೆಯಲ್ಲಿತ್ತು ನನಗೆ ನೂರೆಂಟು ಕನಸು
ವಾಸ್ತವದಲ್ಲಿ ಆಗಲಿಲ್ಲ ಎಂಟೂ ಸಹ ನನಸು
ತಾಳ್ಮೆಯಿಂದ ಹೃದಯ ಹೇಳಿತು ನಿಧಾನಿಸು
ಕಂಗೆಟ್ಟ ಮನಸ್ಸು ಹೇಳಿತು ಪ್ರತಿಭಟಿಸು
ಎಲ್ಲಾ ಒಳಿತಾಗಲೆಂದು ದೇವನೇ ನೀ ಹರಸು
ಹೇ ಭಗವಂತಾ ತಪ್ಪದೇ ನೀ ಎನ್ನ ಕರುಣಿಸು
ಈ ಬೇಡಿಕೆಯನ್ನು ಮರೆಯದೇ ನೆರವೇರಿಸು
ನಿನ್ನ ದಯೆಯನ್ನು ನನಗೂ ಸ್ವಲ್ಪ ಕಾಯ್ದಿರಿಸು
ಎಂದಿಗೂ ಬೇಡ ನಿನಗೆ ನನ್ನಲ್ಲಿ ಮುನಿಸು
ಕರೋನಾ ಪರಿಹರಿಸಿ ಜಗತ್ತನ್ನೇ ನಗಿಸು
ನೀನೊಲಿದಾಗ ಆಗುವುದು ನನ್ನೆಲ್ಲಾ ಕನಸು ನನಸು
ಈ ನನ್ನ ಪ್ರಾರ್ಥನೆಯನ್ನು ಸ್ವೀಕರಿಸು
ನನ್ನ ಆತ್ಮೀಯರೆಲ್ಲರಿಗೂ ಸಂತೋಷದೂಟ ಬಡಿಸು

ಎಲ್ಲಾ ಸಮಸ್ಯೆ ಬಗೆಹರಿಸು

ನಿನ್ನ ಪ್ರೀತಿಯ ಜ್ಯೋತಿಯಿಂದ ಎಲ್ಲರ ಬಾಳು ಬೆಳಗಿಸು

**7. ಕರ್ಕಶ**

ನಿಮಗೆಲ್ಲ ನೆನಪಿದೆಯೇ ಈ ಮಾತು

ನಾದಾರ್ಚನೆಯಲ್ಲಿ ಕೇಳಿಬಂದಥಾ ಮಾತು

ಅಪ್ಪಿ, ಅರ್ಚು ಎದುರಿಗೆ ಹಾಡಲು ಸಂಕೋಚ ಎಂಬ ಮಾತು

ನಾನೆಷ್ಟು ಕರ್ಕಶವಾಗಿ ಬೇಕಾದರೂ ಅವರೆದುರಿಗೆ ಹಾಡಬಲ್ಲೆ

ಅವರ ಹೃದಯದ ವೈಶಾಲ್ಯತೆಯ ಆಳವನ್ನು ನಾ ಬಲ್ಲೆ

ಎಂದೋ ಎಲ್ಲೋ ಓದಿದ್ದೊಂದು ಸಾಲನ್ನು ಈಗ ಹೇಳಬಲ್ಲೆ ಆಂಗ್ಲ ಭಾಷೆಯಲ್ಲೆ

Music attracts all but selects few

**8. ಕರೋನಾ ಪರಿಣಾಮ**

ರಂಗು ರಂಗಿನ ಸೀರೆಯುಟ್ಟು ಹೋಗುತ್ತಿದ್ದೆ

ಅತ್ತಿಗೆ ಹಾಗೂ ಸಮೂಹದೊಡನೆ ವಿಧವಿಧವಾದ ಹೋಟೆಲ್ ಗಳಿಗೆ

ಮಾಸಲು ಬಣ್ಣದ ನೈಟಿಯಲ್ಲೀಗ ಹೆಜ್ಜೆಹಾಕುತ್ತಿರುತ್ತೇನೆ

ಸದಾ ಅಡಿಗೆಮನೆ ಕಡೆಗೆ

**9. ಮದುವೆ**

ಎಲ್ಲರ ಪಾಲಿಗೂ ತಮ್ಮ ತಮ್ಮ ಮದುವೆ ಅನ್ನುವ ಸಂದರ್ಭ ಒಂದು ಹಬ್ಬದ ಸಡಗರದ ಭಾವನೆ ಕೊಟ್ಟಿರತ್ತೆ.

ಆದರೆ ಫಲಿತಾಂಶ varies from person to person.

ಅದನ್ನ ನಾಲ್ಕು ಗಾದೆಗಳನ್ನ ಬಳಸ್ತಾ ಹೇಳಕ್ಕೆ ಇಷ್ಟಪಡ್ತೀನಿ.

ಮದುವೆ ಎನ್ನೋದು “ರೊಟ್ಟಿ ಜಾರಿ ತುಪ್ಪಕ್ಕೆ ಬಿತ್ತು” ಅನ್ನೋ above average result ಪಡೀದಿದ್ರೂ ಪರವಾಗಿಲ್ಲ,

“ರೋಗಿ ಬಯಸಿದ್ದೂ ಹಾಲು ಅನ್ನ, ವೈದ್ಯ ಹೇಳಿದ್ದೂ ಹಾಲು ಅನ್ನ” ಅನ್ನೋ ಅಂತ average result ಆದ್ರೂ ಸಿಕ್ಕಿದರೆ ಚೆನ್ನಾನೇ ಹೊರತು, “ಮಂಗನ ಕೈಗೆ ಮಾಣಿಕ್ಯ” ಕೊಟ್ಟಂಗೆ ಆಯ್ತಲ್ಲಾ, “ಗಿಣಿ ಸಾಕಿ ಗಿಡುಗನ ಕೈಗೆ” ಕೊಟ್ಟಂಗೆ ಆಯ್ತಲ್ಲಾ ಅಂತ, ಪಶ್ಚಾತ್ತಾಪ ಆಗೋ ಹಾಗೆ below average result ಯಾರಿಗೂ ಸಿಗದೇ ಇರಲಿ.

ಕೊನೆಯದಾಗಿ, ನಿರಪರಾಧಿಗೆ ಶಿಕ್ಷೆ ಆಯ್ತಲ್ಲಾ ಅಂತ ಪಶ್ಚಾತ್ತಾಪ ಪಡೋ ಹಾಗೆ ಯಾರಿಗೂ ಆಗಬಾರದು.

ಯಾರಿಗಾದರೂ ಆಗಿದ್ದಲ್ಲಿ, ಅದನ್ನೆಲ್ಲಾ ಆ ಕರುಣಾಮಯಿಯಾದ ಭಗವಂತನು, ಈ ಕರೋನಾ ಜೊತೆಗೆ ಸರಿಪಡಿಸಲಿ ಅಂತ ಕಳಕಳಿಯಿಂದ ಪ್ರಾರ್ಥಿಸುತ್ತಾ, ನನ್ನ ಲೇಖನಿಗೆ ವಿಶ್ರಾಂತಿ ನೀಡುತ್ತಿದ್ದೇನೆ.

**10. ಅಮ್ಮ**

ಮಾತೃ ದೇವೋ ಭವ, ತಾಯಿಗಿಂತ ದೇವರಿಲ್ಲ, ಜನನಿ ತಾನೇ ಮೊದಲ ಗುರುವು, ಇನ್ನೂ ಮುಂತಾದ ತಾಯಿಯ ಮಹತ್ವವನ್ನು ತಿಳಿಸಿಕೊಡುವ ಅನೇಕ ಮಾತುಗಳು ಹಿಂದಿನಿಂದ ಇಂದಿನವರೆಗೆ ಎಲ್ಲರ ಮಾನ್ಯತೆ, ಮೆಚ್ಚಿಗೆ ಪಡೆದಿದೆ ಎಂಬುದರ ಬಗ್ಗೆ ಎರಡನೇ ಮಾತಿಲ್ಲ. ಯಾವುದೋ ಒಂದು ಟಿವಿ ಕಾರ್ಯಕ್ರಮದಲ್ಲಿ ಸಹಾ ನಾನು ನೋಡಿದ್ದೆ. ಭಾಷೆ ಯಾವುದಾದರೂ ಆಗಿರಲಿ ಹಾಡು ತಾಯಿಯ ಬಗ್ಗೆ ಆಗಿದ್ದರೆ ಅದು famous ಆಗದೇ ಇರುವುದೇ ಇಲ್ಲ ಎಂದು SPB ಅವರು ಹೇಳಿದ್ದನ್ನ. ಅಕ್ಕ, ತಂಗಿ, ಅಣ್ಣ, ತಮ್ಮ, ಅಪ್ಪ, ಅಮ್ಮ, ಗಂಡ, ಹೆಂಡತಿ, ಮಕ್ಕಳು, ದೊಡ್ಡಮ್ಮ, ದೊಡ್ಡಪ್ಪ, ಚಿಕ್ಕಮ್ಮ, ಚಿಕ್ಕಪ್ಪ, ಅತ್ತೆ, ಮಾವ ಮುಂತಾದ ಅನೇಕ ಸಂಬಂಧಗಳನ್ನು ಪಟ್ಟಿ ಮಾಡಿದರೆ, TOP-1 ಸ್ಥಾನ ಸಿಗುವುದು ತಾಯಿ ಪದಕ್ಕೆ. ಎಲ್ಲವೂ ಸರಿ ನಾನೊಮ್ಮೆ ಇದರ ಬಗ್ಗೆ ಚಿಂತನೆ ಮಾಡಲು ಆರಂಭಿಸಿದಾಗ, ನನ್ನ ಯೋಚನಾಲಹರಿ ತುಂಬಾ ದೊಡ್ಡದಾಯಿತೇನೋ ಗೊತ್ತಿಲ್ಲ. ಆದರೂ ಅದರ ಬಗ್ಗೆ ನಿಮಗೂ ತಿಳಿಸಬೇಕು ಎನ್ನಿಸುತ್ತಿದೆ. ಹಾಗಾಗಿ ಅದರ ಪ್ರಾರಂಭ ಮಾಡುತ್ತಿದ್ದೇನೆ.

ತಾಯಿಯ ಪಾತ್ರವನ್ನು ಮೂರು ಅಧ್ಯಾಯಗಳಾಗಿ ವಿಂಗಡಿಸಿದ್ದೇನೆ.

ಮೊದಲನೆ ಅಧ್ಯಾಯ:

ಸಾಮಾನ್ಯವಾಗಿ ಪ್ರತಿ ಹೆಣ್ಣಿಗೂ ತಾನು ತಾಯಿಯಾಗುತ್ತೇನೆ ಎಂಬ ಸುದ್ದಿ ತಿಳಿದಾಗ, ಆಕೆ ಪಡುವ ಸಂಭ್ರಮವನ್ನು ವರ್ಣಿಸಲು ಪದಗಳೇ ಸಾಲದು ಎಂಬಂತಾಗುತ್ತದೆ. ಆಕೆಯ ಸಂತೋಷಕ್ಕೆ ಉದಾಹರಣೆಯನ್ನು ನೀಡಲು ಸಹಾಯಕವಾಗುವಂತಹ ಹಳೆಯ ಹಿಂದಿ ಸುಮಧುರ ಹಾಡಿನ ಸಾಲುಗಳು ಈ

ಸಂದರ್ಭಕ್ಕೆ ನನಗೆ ನೆನಪಿಗೆ ಬರುತ್ತಿದೆ. ಅದು " ರೋಮ್ ರೋಮ್ ಬಹೆ ಸುರ್ ಧಾರಾ, ಅಂಗ್ ಅಂಗ್ ಭಜೆ ಶಹೆನಾಈ , ಸಾರಾ ಜೀವನ್ ಮಿಲೆ ಎಕ್ ಪಲ್ ಮೆ, ಜಾನೆ ಕೈಸೆ ಘಡಿ ಏ ಆಈ". ಅಂದರೆ ಅವಳ ಸಂತೋಷ ಮುಗಿಲು ಮುಟ್ಟುತ್ತದೆ. ತಾಯಿ ತನ್ನ ಸಮಯದ ಸಿಂಹಪಾಲನ್ನು ಮಗುವಿನ ಬಗ್ಗೆ ಕೇಂದ್ರೀಕರಿಸುತ್ತಾಳೆ. ಮಗುವಿನ ರಕ್ಷಣೆ ತನ್ನೊಬ್ಬಳಿಂದಲೇ ಸಾಧ್ಯ ಎಂದು ತನ್ನೆಲ್ಲಾ ಆಲೋಚನೆಗಳೂ ಮಗುವಿನ ಬಗೆಗೆ ಮಾಡುತ್ತಾಳೆ. ಒಟ್ಟಿನಲ್ಲಿ ಮಗುವಿನ ನಿರೀಕ್ಷೆಯೇ ತನ್ನ ಜೀವನದ ಪರಮೋದ್ದೇಶ ಎಂದುಕೊಳ್ಳುತ್ತಾಳೆ. ಮಗುವಿಗೆ ಜನ್ಮವಿತ್ತ ಕ್ಷಣದಲ್ಲಿ ಅದನ್ನು ನೋಡಿ ತನ್ನ ನೋವನ್ನೆಲ್ಲ ಮರೆಯುತ್ತಾಳೆ. ಮುಂದೆಂದಾದರೂ ಸಿಗಲೂಬಹುದಾದ ನೋವಿನ ಬಗ್ಗೆ ಅರಿವಿಲ್ಲದೇ, ತಾಯಿಯ ಪದವಿ ಪ್ರಪಂಚದ ಅತ್ಯುನ್ನತ ಪದವಿಯೇನೋ ಎಂಬಂತೆ ಬೀಗುತ್ತಾಳೆ. ಅವಳ ಪ್ರಪಂಚವೇ ಆ ಮಗುವಿನ ಲಾಲನೆ, ಪಾಲನೆ ಸಹಜವಾಗಿ ಆಗುತ್ತದೆ. ನಿದ್ರಾಹೀನ ರಾತ್ರಿಗಳಲ್ಲಿ, ನಿದ್ರೆಯ ಅವಶ್ಯಕತೆಯನ್ನೇ ಮರೆಯುತ್ತಾಳೆ. ತಾಯ್ತನದ ಅನೇಕ ಸೋಜಿಗಗಳಲ್ಲಿ ಇದೂ ಒಂದು ಇರಬಹುದು. ಮಗು ಹುಟ್ಟಿದಾಗ ಅಳುತ್ತದೆ. ಬಹುಶಃ ಮಗು ಅತ್ತಾಗ, ಅದನ್ನು ಮೊದಲಸಲ ನೋಡಿದಾಗ ತಾಯಿ ನಗುತ್ತಾಳೆ. ಮಗು ಅತ್ತು ತಾಯಿ ನಗುವುದು, ಅವಳ ಇಡೀ ಜೀವನದಲ್ಲಿ ಅದೊಂದೇಸಲ ಮಾತ್ರ. ಇನ್ನುಳಿದಂತೆ ಅವಳು ತನ್ನ ಇಡೀ ಜೀವನವನ್ನು ಆ ಮಗುವಿನ ನಗುವಿಗಾಗಿ ಅಂದರೆ, ಅದರ ಸುಖ ಸಂತೋಷಕ್ಕಾಗಿಯೇ ಮುಡುಪಾಗಿಡುತ್ತಾಳೆ. ಆ ಮಗುವಿನ ಆಟ, ಪಾಠ, ಅದರ ಕೆಲಸಗಳೆಲ್ಲವೂ ಅವಳಿಗೆ ಹಬ್ಬದಂತಹ ಸಡಗರವೇ ಹೊರತು ಎಂದೂ ಬೇಸರವಲ್ಲ. ತನ್ನ ಮಗುವಿನ ಲಾಲನೆ, ಪಾಲನೆ, ವಿದ್ಯಾಭ್ಯಾಸ, ಒಟ್ಟಿನಲ್ಲಿ ಆ ಮಗು ಸ್ವಾವಲಂಬಿಯಾಗುವಂತೆ ಮಾಡಲು, ಸಮಾಜದ ಉತ್ತಮ ವ್ಯಕ್ತಿಯಾಗುವಂತೆ ಮಾಡುವುದರಲ್ಲಿ, ಉಳಿದೆಲ್ಲಾ ಜೀವನದ ಏರುಪೇರುಗಳು ಏನೇ ಇದ್ದರೂ ಹೇಗೇ ಇದ್ದರೂ ಸಹಿಸಿಕೊಳ್ಳುತ್ತಾಳೆ. ಅವರವರ ಶಕ್ತ್ಯಾನುಸಾರ ಈ ಹಂತವನ್ನು ತಾಯಿ ತಲುಪಿ ಯಶಸ್ಸು ಕಾಣುವುದು ಒಂದು ನೆಮ್ಮದಿಯ ನಿಟ್ಟುಸಿರು ಬಿಡುವ ಘಟ್ಟವನ್ನು ತಲುಪಿದಂತಾಗುತ್ತದೆ. ಅಂದರೆ ಮಕ್ಕಳು ವಿದ್ಯೆ ಕಲಿತು ಅದಕ್ಕೆ ತಕ್ಕ ವೃತ್ತಿಯನ್ನು ಪಡೆಯುವುದು ಒಂದು ಹಂತ. ಅಂದು ತಾಯಿಗೆ ನಿರಾಳ. ಕೆಲಕಾಲ ಅವಳಿಗೆ ಒಂದು ರೀತಿಯ ವಿಶ್ರಾಂತಿ, ನೆಮ್ಮದಿ, ಸಂತೋಷ, ಸುಖ. ನಂತರ ಪ್ರಾರಂಭವಾಗುವುದು ಹೊಸಾ ಅಧ್ಯಾಯ, ಅದೇ ಎರಡನೇ ಅಧ್ಯಾಯ.

ಅದೇನೆಂದರೆ ತಮ್ಮ ಮಕ್ಕಳ ಮದುವೆ ಬಗ್ಗೆ ಆಲೋಚನೆ. ತಮ್ಮ ಮಕ್ಕಳಿಗೆ ಸೂಕ್ತ ಜೀವನ ಸಂಗಾತಿ ಸಿಗಬೇಕೆಂಬ ಆಸೆ, ಸಹಜವಾಗಿ ಸಿಕ್ಕೇ ಸಿಗುತ್ತಾರೆಂಬ ನಂಬಿಕೆ, ಸಿಗದೇ ಇರುವ ಸಾಧ್ಯತೆಯೂ ಕೆಲವು ಬಾರಿ ಇರಬಹುದು ಎಂದು ತಾಯಿಯ ಅರಿವಿಗೆ ಸಾಮಾನ್ಯವಾಗಿ ಬರುವುದಿಲ್ಲ. ತನ್ನ ಮಕ್ಕಳೇ ಪ್ರಪಂಚದ ಅತ್ಯಂತ ಸುಖವಂತರಾಗಿರುವ ವ್ಯಕ್ತಿಗಳಲ್ಲಿ ಒಬ್ಬರು, ಎಂಬಂತೆ ತಾಯಿಯ ಭಾವನೆ ಇರುತ್ತದೆ.

ಕಾರಣ ಅವಳ ಮತ್ತು ಆ ಮಗುವಿನ ಸಂಬಂಧ ಹಾಗೂ ಸುದೀರ್ಘ ವರ್ಷಗಳ ಕಾಲ ತಾನು ಆ ಮಕ್ಕಳನ್ನು ಬೆಳೆಸಿದ ರೀತಿ, ಅವಳ ಆ ಅನಿಸಿಕೆಗೆ ಕಾರಣವಾಗುತ್ತದೆ. ಈ ಕಾರಣದಂದಲೇ ಅವಳಿಗೆ ತನ್ನ ಮಕ್ಕಳ ಜೀವನ ಸಂಗಾತಿಯ ಅನ್ವೇಷಣೆಯನ್ನು ಆರಂಭಿಸಿದಾಗ, ಒಬ್ಬೊಬ್ಬರಲ್ಲಿ ಏನಾದರೂ ಸಣ್ಣ ಪುಟ್ಟ minus point ಗಳು ಕಂಡುಬಂದರೂ, ಅವರನ್ನು ತಾಯಿಯ ಮನಸ್ಸು ನಿರಾಕರಿಸುತ್ತದೆ. ಕೆಲವೊಮ್ಮೆ ಅನೇಕ minus point ಗಳು ಒಂದೇ ವ್ಯಕ್ತಿಯಲ್ಲಿ ಇರಬಹುದು, ನಮ್ಮ ಪ್ರಯತ್ನ ಮೀರಿ ಅಂತವರೇ ನಮಗೆ ಸಿಗುವ ಸಾಧ್ಯತೆ ಇರಬಹುದು ಎಂಬ ಆಲೋಚನೆ ಅವಳಿಗೆ ಬರುವುದೇ ಇಲ್ಲ. ಇನ್ನು ಕೆಲವು case ಗಳಲ್ಲಿ, ಸ್ವಲ್ಪ compromise ಮಾಡಿಕೊಳ್ಳಲೂ ಸಹ ಮನಸ್ಸು ಒಪ್ಪದೇ, ಮುಂದಿನ ಅನ್ವೇಷಣೆಯಲ್ಲಿ ತೊಡಗುತ್ತಾರೆ. ಮುಂದೆ ಜಯ ಸಿಕ್ಕರೆ ಪರವಾಗಿಲ್ಲ, ಹಳ್ಳಕ್ಕೆ ಬಿದ್ದರೆ ಎತ್ತುವವರ್ಯಾರು ಎಂಬಂತೆ ಆಗಬಾರದಲ್ಲವೇ. ಕೊನೆಗೆ Qualification, Beauty, Job, salary, Age, Horoscope, Family background etc etc, ಹೀಗೆ ಅನೇಕ ವಿಚಾರಗಳ ಅಧ್ಯಯನ ನಡೆಸಿ, ಇದೇ ತನ್ನ ಮಕ್ಕಳಿಗೆ ಸೂಕ್ತವಾದದ್ದು ಎಂದು ಸಡಗರಿಸುತ್ತಾಳೆ. ಇದೆಲ್ಲದರಿಂದ ತನ್ನ ಮಕ್ಕಳ ಮುಂದಿನ ವೈವಾಹಿಕ ಜೀವನದ 95% ಸುಖವನ್ನು ತಾನೇ Fix ಮಾಡಿದಂತೆ ಸಂಭ್ರಮಿಸುತ್ತಾಳೆ. ಇದು ತಪ್ಪು ಎಂದು ಹೇಳಲಾಗದಿದ್ದರೂ, ಇದೆಲ್ಲಕ್ಕೂ ಮೀರಿದ ವಿಚಾರ ಬೇರೊಂದಿದೆ. ಇದು ಮಕ್ಕಳಿಗೆ ಸಿಕ್ಕ ಜೀವನ ಸಂಗಾತಿಗಳ ಸ್ವಭಾವ. ಅಲ್ಲಿ ಮಾತಿನಲ್ಲಿ, ಸ್ವಭಾವದಲ್ಲಿ ಮೃದುತ್ವ, ಕುಟುಂಬದ ಸದಸ್ಯರೊಡನೆ ಸಾಮರಸ್ಯ, ಸೌಹಾರ್ದತೆ, ಪ್ರೀತಿ, ವಿಶ್ವಾಸಗಳಲ್ಲಿ ನಂಬಿಕೆ, ಸಹೃದಯತೆ, ಸನ್ನಡತೆ, ಶಾಂತಿ, ಸಹನೆ, ತ್ಯಾಗ, ಕರ್ತವ್ಯದ ಅರಿವು, ಬಾಂಧವ್ಯದ ಬೆಸುಗೆ, ಕಷ್ಟದ ಕೆಲವು ಸಂದರ್ಭದಲ್ಲಿ ಬೇಕಾದಂತ ಸ್ಪಂದನೆ, ಬಂಧು ಬಾಂಧವರಲ್ಲಿ ಪ್ರೀತಿ, ಮುಂತಾದ ಉದಾತ್ತ ಭಾವನೆಗಳೇ ಮುಂದಿನ ಸುಖಮಯ ಜೀವನಕ್ಕೆ ಬುನಾದಿಯಾಗಬಲ್ಲ ಅಂಶಗಳು. ಇದರ ಬಗ್ಗೆ ಎಂದರೆ, ನಮ್ಮ ಕುಟುಂಬಕ್ಕೆ ಬಂದಂತಹ ಅಥವಾ ನಮಗೆ ಸಿಕ್ಕಿದಂತಹ ವ್ಯಕ್ತಿಗಳು ಹೇಗಿರುತ್ತಾರೆ ಎಂಬುದರ ಬಗ್ಗೆ ಯಾರಿಗೂ ಮೊದಲೇ ಹೆಚ್ಚಿನ ಅರಿವು ಇರುವುದಿಲ್ಲ. ಈ ಅಂಶಗಳಲ್ಲಿ ಯಾರು ಗೆಲುವು ಕಾಣುತ್ತಾರೋ ಅದು 95% ಸುಖವೇ ಹೊರೆತು, ನಾವು ಕಲೆಹಾಕಿದ ಮಾಹಿತಿಗಳು ಜೀವನಕ್ಕೇ ಹೊರತು, ಜೀವದ ಸಮಾಧಾನಕ್ಕಲ್ಲ ಎಂಬ ಅರಿವು ನಿಧಾನವಾಗಿ ಮೂಡುತ್ತದೆ. ಇಲ್ಲಿ ನಾನು ಎಲ್ಲರನ್ನೂ Generalise ಮಾಡುತ್ತಿಲ್ಲ. ಪರೀಕ್ಷೆಯ ಫಲಿತಾಂಶದಂತೆ ಇಲ್ಲಿಯೂ ಸಹಾ ವೈವಿಧ್ಯತೆ ಇರುತ್ತದೆ. ಕೆಲವರು ಈ ವಿಷಯದಲ್ಲಿ 100% success ಆಗಿರಲೂಬಹುದು. ಪರೀಕ್ಷೆ ಬರೆಯುವುದರಲ್ಲಾದರೂ, ನಮ್ಮ ಶ್ರಮಕ್ಕೆ, ಬುದ್ದಿಗೆ ತಕ್ಕ ಅಂಕಗಳು ಸಿಗುತ್ತವೆ. ಜೀವನದ ಪರೀಕ್ಷೆಯಲ್ಲಿ ಸಿಗುವ ಅಂಕವನ್ನು ಆ ಅದೃಷ್ಟದೇವತೆ ನಮಗೆ ಕೊಡುತ್ತಾಳೋ, ಆ ಭಗವಂತ ನೀಡುತ್ತಾನೋ, ಕಂತೆಗೆ ತಕ್ಕ ಬೊಂತೆ ಎಂಬಂತೆ ಅದೂ ಸಹ ನಮ್ಮ ಬುದ್ದಿಮತ್ತೆಯನ್ನೋ ಅಥವಾ ಮೂರ್ಖತನವನ್ನು ಅವಲಂಬಿಸಿರುತ್ತದೋ ಗೊತ್ತಿಲ್ಲ. Rank

ಬರಬೇಕಾದವರು Fail ಆಗದಿದ್ದರೆ ಸಾಕು. ಕಾರಣ ಜೀವನದ ಪರೀಕ್ಷೆಗೆ Re total, Revaluation ಇಂತಹ ಸೌಲಭ್ಯಗಳಿಲ್ಲ.

ಈಗ ಮೂರನೇ ಅಧ್ಯಾಯ. ಇಲ್ಲಿ, ತಾಯಿಗೆ ತಮ್ಮ ಮಕ್ಕಳ ಮದುವೆ ಮುಗಿದ ಹಂತವಾಗಿರುತ್ತದೆ. ತಮ್ಮ ತಮ್ಮ ಮಕ್ಕಳ ಕಷ್ಟಸುಖಗಳಿಗೆಲ್ಲಾ ತಾನೆಷ್ಟು ಸಹಕಾರಿಯಾಗಬಲ್ಲೆ ಎಂಬುದೊಂದೇ ಮತ್ತೆ ಅವಳ ಜೀವನದ ಮುಖ್ಯಭಾಗವಾಗಿರುತ್ತದೆ. But case differs. ಕೆಲವು caseಗಳಲ್ಲಿ ಮಕ್ಕಳಿಗೆ Financial support ಅಗತ್ಯವಾಗಿರುತ್ತದೆ. ಅಲ್ಲಿ ತನ್ನಿಂದ ಆದರೆ ತಾಯಿ ನಿರಾಕರಿಸುವುದಿಲ್ಲ. ಕೆಲವು ಬಾರಿ ಅಂತಹ support ಕೊಡುವುದು ತಾಯಿಗೆ ಕಷ್ಟವಾಗಬಹುದು. ಆದರೆ ಕಷ್ಟಪಟ್ಟಾದರೂ ತನ್ನಿಂದ ಆಗುವ ಸಹಾಯವನ್ನು ಮಾಡಲು ಅವಳು ಹಿಂಜರಿಯುವುದಿಲ್ಲ. ಇನ್ನು ಕೆಲವು caseಗಳಲ್ಲಿ ಮಕ್ಕಳಿಗೆ Physical support ಬೇಕಾಗಬಹುದು. ಕೆಲವರಿಗೆ ಅದನ್ನು ಸುಲಭವಾಗಿ ಮಾಡಲು ಆರೋಗ್ಯ, ವಯಸ್ಸು, ಉಳಿದವರ ಸಹಕಾರ ಇರಬಹುದು. ಇನ್ನು ಕೆಲವರಿಗೆ ಎಷ್ಟೇ ನೋವಿದ್ದರೂ, ನೋವಿನ ಜೊತೆಗೆ ಬದುಕಲು ಕಲಿಯುತ್ತಲೇ, ಮಕ್ಕಳಿಗಾಗಿ ಎಲ್ಲವನ್ನೂ ಉತ್ಸಾಹದಿಂದಲೇ ಸಹಿಸಿಕೊಳ್ಳುತ್ತಾರೆ. ಒಟ್ಟಿನಲ್ಲಿ, ಮಕ್ಕಳ ಸುಖದಲ್ಲೇ ತನ್ನ ಸುಖ ಕಾಣುತ್ತಾಳೆ ತಾಯಿ. ಅವರ ಕಷ್ಟಕ್ಕೆ ಮರುಗುತ್ತಾಳೆ. ತಮ್ಮ ಮಕ್ಕಳಿಗಾಗಿ, ಅವರ ಜೀವನ ಸಂಗಾತಿಗಳಿಗಾಗಿ, ತನ್ನ ಕೈಲಾಗುವ ಎಲ್ಲಾ ಸಹಕಾರ ನೀಡುವ ತಾಯಿಯ ಹೃದಯ ಬಯಸುವುದು, ನಿರೀಕ್ಷಿಸುವುದು, ಅಪೇಕ್ಷೆಪಡುವುದು, ಹೊಸ ಸದಸ್ಯರನ್ನೂ ಸೇರಿದಂತೆ, ಕುಟುಂಬದ ಪ್ರತಿಯೊಬ್ಬರಿಂದ, ಒಂದು ನವಿರಾದ, ಹಿತವಾದ ಪ್ರೀತಿಯ ಎಳೆಯನ್ನು ಮಾತ್ರ. ಇದನ್ನು ಪಡೆದ ತಾಯಿ ನಿಜವಾಗಿಯೂ ಧನ್ಯಳು. ಇದರಿಂದ ವಂಚಿತರಾದವರೂ ಸಹ ಇದ್ದಾರೆ. ತನ್ನ ನೋವನ್ನು ಯಾರಲ್ಲೂ ಹಂಚಿಕೊಳ್ಳದೆ, ಕಣ್ಣಲ್ಲಿ ತೆಳುವಾಗಿ ಆಗಾಗ ತುಂಬಿದ ಕಂಬನಿಯನ್ನು ಒರೆಸುವ ಕೈಗಳಿಗಾಗಿ ಆಸೆಪಟ್ಟು, ನಿರಾಸೆ ಹೊಂದಿ, ಯಾರಿಗೂ ಕಾಣದಂತೆ ತನ್ನ ಕಣ್ಣೀರನ್ನು ತಾನೇ ಒರೆಸಿಕೊಂಡು, ನಗುವ ಪ್ರಯತ್ನದಲ್ಲಿ, ತನ್ನುಳಿದ ಜೀವನವನ್ನು ಕಳೆಯುವ ತಾಯಿಯರೂ ಇದ್ದಾರೆ. ಇಂತಹ ಪರಿಸ್ಥಿತಿಯಲ್ಲಿರುವ ತಾಯಿಯರು ಯಾರಾದರೂ ನನ್ನ ಗಮನಕ್ಕೆ ಬಂದಾಗ, ನನ್ನ ಮನಸ್ಸಿನಲ್ಲಿ ಒಂದೇ ಒಂದು ಪ್ರಶ್ನೆ ಮೂಡುತ್ತದೆ. ಈ ಅಸಹಾಯಕತೆ, ಇದೇನಾ ಇಡೀ ಜಗತ್ತು ಒಪ್ಪಿಕೊಂಡು, ಕೊಂಡಾಡುತ್ತಿರುವ ತಾಯಿಯ ಮಹತ್ವ?

ನನ್ನ ಸಂಶಯವನ್ನು ನಿವಾರಿಸಬಲ್ಲವರು ನಿಮ್ಮಲ್ಲಿ ಯಾರಾದರೂ ಇರಬಹುದು, ಇದ್ದೇ ಇರುತ್ತೀರ ಎಂಬ ನಂಬಿಕೆಯಿಂದ ಕಾಯುತ್ತಿದ್ದೇನೆ.

ಸರ್ವೇಜನಾ ಸುಖಿನೋ ಭವಂತು.

**11. ವಿಪಂಚಿಯ ಮೂಗುತಿ**

ಲಕ್ಷ್ಮಿಯೋ, ಪಾರ್ವತಿಯೋ, ಸರಸ್ವತಿಯೋ, ಧರೆಗಿಳಿದ ರತಿಯೋ, ಹೇ ಸೌಂದರ್ಯವತಿ

ಹೆಚ್ಚಿಸಿತು ನಿನ್ನಂದವನ್ನು ನೂರ್ಪಟ್ಟು ನಿನ್ನ ಮೂಗುತಿ

ವಿದೇಶದಲ್ಲೂ ಉಳಿಸಿದೆ ಭಾರತೀಯ ಸಂಸ್ಕೃತಿ

ಪಡೆದಿರುವೆ ನೀನು ಗಾನ ನಾಟ್ಯದಲ್ಲೂ ಪರಿಣತಿ

ಸಲ್ಲುತ್ತದೆ ನಿನ್ನನ್ನು ಹೀಗೆ ಬೆಳೆಸಿದ ಆ ನಿನ್ನ ತಾಯಿಗೆ ಈ ಎಲ್ಲ ಕೀರುತಿ

**12. ಮೌನ**

ಜೀವನದ ಯಾವ ಸಂದರ್ಭದಲ್ಲೂ ಖಂಡಿತಾ ಮೌನವಾಗಿ ಇರಬೇಕಾದ ಅಗತ್ಯ ಇಲ್ಲ. ನಮ್ಮ ಅಭಿಪ್ರಾಯ, ಅನಿಸಿಕೆ, ನಮ್ಮ ಪ್ರಕಾರ ಯಾವುದು ತಪ್ಪು, ಅದು ಏಕೆ ತಪ್ಪು, ಯಾವುದು ಸರಿ, ಅದು ಹೇಗೆ ಸರಿ, ಎಂಬುದನ್ನೆಲ್ಲಾ ನಾವು ತಿಳಿಸಲೇಬೇಕಾಗುತ್ತದೆ. ಆದರೆ ಎದುರಿನವರು ಅದನ್ನು ಹೇಗೆ ತೆಗೆದುಕೊಳ್ಳುತ್ತಾರೋ ಅದು ನಮ್ಮ ಕೈಯ್ಯಲ್ಲಿ ಇರುವುದಿಲ್ಲ. ಭಿನ್ನಾಭಿಪ್ರಾಯಕ್ಕೆ ಒಂದೇ ಕಾರಣ, ಅದೇನೆಂದರೆ, ಜೀವನವನ್ನು ನಾವು ನೋಡುವ Angle ನಲ್ಲೇ ಅವರು ನೋಡುವುದಿಲ್ಲ. Under any circumstance, ಅವರು ನೋಡುವ Angleಅನ್ನು, ನಾವು Admit ಮಾಡಿಕೊಳ್ಳಕ್ಕೆ ನಮಗೆ ಕಷ್ಟವಾಗುತ್ತದೆ. ಕೆಲವು case ಗಳಲ್ಲಿ, ನಾವು ಅವರನ್ನು ಪ್ರೀತಿಯಿಂದಲೇ ನಮ್ಮ ಕಡೆಗೆ ಎಳೆದುಕೊಳ್ಳಬಹುದು. ಕಾರಣ ಅವರ ವ್ಯಕ್ತಿತ್ವದಲ್ಲಿ, ಆ ಒಂದು Flexibility ಇರತ್ತೆ. ಪ್ರೀತಿಗೆ ಸೋಲುತ್ತಾರೆ. Actually ಅದು, ಸೋಲಲ್ಲ, ಅವರ ನಿಜವಾದ ಗೆಲುವು. ಇಲ್ಲಿ ಮೌನಕ್ಕೆ ಕೆಲಸ ಇಲ್ಲ. ಅದು ಬೇಕಾಗಿಲ್ಲ.

ಈಗ ಇನ್ನೊಂದು ತರದ case ಗೆ ಬರೋಣ. ಏನೆಂದರೆ, ಅಲ್ಲಿ ಎದುರಿನವರು ನಮ್ಮ ಕಡೆಗೆ ಬರುವುದಿಲ್ಲ, ಆದರೂ, ಒಂದು ಸ್ಪಷ್ಟವಾದ ಸಮರ್ಥನೆಯನ್ನಾದರೂ ಕೊಡುವ ಪ್ರಯತ್ನವನ್ನು ಮಾಡುತ್ತಾರೆ. ನಾವೇ ಸೋಲುತ್ತಲೋ, Adjust ಆಗ್ತಾನೋ, Compromise ಆಗ್ತಾನೋ, ಹೋಗ್ತೀವಿ. ಇಲ್ಲಿ, ಮೌನವೂ ಪ್ರಯೋಜನವಿಲ್ಲ, ಮಾತೂ ಪ್ರಯೋಜನವಿಲ್ಲ. ವಸ್ತುಸ್ಥಿತಿಯನ್ನು Practical ಆಗಿ ನೋಡೋ ಪ್ರಯತ್ನ ಮಾಡಿ, Gradual ಆಗಿ Admit ಮಾಡಿಕೊಳ್ಳುತ್ತಾ, ಹೊಂದಿಕೊಂಡು ಹೋಗುವ ಪ್ರಯತ್ನವನ್ನು ನಾವು ಆರಂಭಿಸಬೇಕಾಗುತ್ತದೆ, ಬೇರೆ ದಾರಿಯಿಲ್ಲದೇ.

ಮೇಲಿನ ಎರಡು case ಓಕೆ, ಆದರೇ ಮೂರನೇ case ಇದೆ ನೋಡಿ, **Horrible!** ಇಲ್ಲಿ ಸಮಸ್ಯೆ ಬರುವುದು, ಮೂರ್ಖರಿಂದ. ಸಮಸ್ಯೆ Wise people ಗಳಿಂದ ಬಂದರೆ, ತುಂಬ ಬೇಗ ಅವರೇ

ಎಚ್ಚೆತ್ತುಕೊಳ್ಳುತ್ತಾರೆ. That's why, we call them wise. ಆದರೆ, Fools ಗಳಿಂದ ಆಗುವ ಸಮಸ್ಯೆಗಳಲ್ಲಿ, Fools ಹಾಯಾಗೇ ಇರುತ್ತಾರೆ. ಆದರೆ, ಸುತ್ತಲಿರುವವರನ್ನೆಲ್ಲಾ ಸಂಕಷ್ಟಕ್ಕೆ ಸಿಲುಕಿಸುತ್ತಾರೆ. ಸಮಸ್ಯೆ Solve ಆಗುವ ಬದಲು, ಜಟಿಲವಾಗುತ್ತಾ ಹೋಗುತ್ತದೆ. ಕಾರಣ ನಿಮಗೆ ಗೊತ್ತೇ? ಕಾರಣ ಇಷ್ಟೇ. Fools think that they are wise. ಇಂತಹ ಮೂರ್ಖರ ಸಹವಾಸದಲ್ಲಿ, ದಿಗ್ಭ್ರಮೆ ಉಂಟಾಗಿ, ಮೌನ ಅಗತ್ಯ ಅಲ್ಲ, ಅನಿವಾರ್ಯ ಎಂಬ, ನಮಗೆ ಸರಿಯಾಗಿ ಸ್ಪಷ್ಟತೆ ಇಲ್ಲದ ತೀರ್ಮಾನಕ್ಕೆ ನಾವು ಬಂದು ನಿಲ್ಲುವ ಸಂದರ್ಭ ಬಂದೊದಗುತ್ತದೆ. ಸರಿ ತಪ್ಪುಗಳ ಪರಿಜ್ಞಾನವನ್ನೇ ನಮ್ಮಲ್ಲಿ ಕಳೆದುಹಾಕುವ ಶಕ್ತಿ ಈ ಮೂರ್ಖರದ್ದು. ಇಷ್ಟೆಲ್ಲಾ ಆದರೂ ಈ ಮೌನದಲ್ಲಿ ಕೆಲವು ವಿಶೇಷತೆಗಳಿವೆ. ಎಷ್ಟು ದಿನ ಈ ಮೌನವನ್ನು ಕಾಪಾಡಿಕೊಳ್ಳುತ್ತೇವೆ ಎಂಬುದಕ್ಕೆ ಮಾತ್ರಾ Last date ಇಲ್ಲ. Life long ಕಾಪಾಡಿಕೊಳ್ಳುವ ಮಹಾನುಭಾವರು ಇರಬಹುದೇನೋ ಗೊತ್ತಿಲ್ಲ. ಅಂತಹ Strong determination ಕಷ್ಟ. ಇದು ಅಗತ್ಯಾನಾ ಎಂಬ ಪ್ರಶ್ನೆನೂ ಏಳತ್ತೆ, ತಪ್ಪಲ್ಲವಾ ಎಂಬ ಸಂದೇಹಾನೂ ಬರುತ್ತದೆ.

ಇನ್ನೊಂದು Category ಯಾರಪ್ಪಾ ಅಂದ್ರೆ, ಅವರಿಗೆ ಮೌನಕ್ಕಿಂತ ಮಾತಿನ ಸಡಗರವೇ ಪ್ರಿಯವಾದದ್ದು. ಆದರೆ ಅವರು ಎಷ್ಟೇ ಒಳ್ಳೇ ಮಾತುಗಳನ್ನಾಡಿದರೂ, ಅದು ಪ್ರಯೋಜನಕ್ಕೆ ಬರಲಿಲ್ಲವಲ್ಲಾ ಎಂದು ಬೇಸತ್ತು, ಮೌನವನ್ನು ಆಶ್ರಯಿಸುತ್ತಾರೆ. ಆದರೆ, ಇದನ್ನೇ ಎದುರಿನವರು Taken for granted ಅಂತ ಮಾಡಿಕೊಂಡು, Misuse ಮಾಡಿಕೊಂಡು, Undue advantage ಅನ್ನು ಮಿತಿಮೀರಿ ಬಳಸಿಕೊಂಡಾಗ, ಆ ಮೌನಿಯ ಮೌನದ ಕಟ್ಟೆ ಒಡೆದುಹೋಗುತ್ತದೆ. "ಮೂಗನ ಕಾಡಿದರೇನು, ಸವಿಮಾತನು ಆಡುವನೇನು" ಎಂಬಂತಿದ್ದ ಆ ಮೌನಿಯು, ಕವಿಗಳನ್ನು ಮೀರಿಸುವಷ್ಟು ಪದಗಳನ್ನು ಬಳಸಲು ಸಮರ್ಥನಾಗುವ ಸಂದರ್ಭ ಬಂದೊದಗುತ್ತದೆ. ನಿರರ್ಗಳವಾದ, ಅರ್ಥಪೂರ್ಣವಾದ, ಅಗತ್ಯವಾದ, ದೀರ್ಘಕಾಲದಿಂದ Accumulate ಆಗಿದ್ದ ಮಾತುಗಳೆಲ್ಲವೂ, ಏಕಕಾಲದಲ್ಲಿ, ಅವನ ಗಂಟಲಿನಿಂದಲ್ಲ, ಹೃದಯಾಂತರಾಳದಿಂದ ಹೊರಚಿಮ್ಮುತ್ತದೆ. ಅಷ್ಟುದಿನದ ಮೌನವ್ರತ ವ್ಯರ್ಥವಾದದ್ದು ಎಂಬ ತಿಳುವಳಿಕೆಯೊಂದಿಗೆ, ಸಂಪೂರ್ಣ ಅರಿವಿನೊಂದಿಗೆ, ಮೌನಿ, ಮೂರ್ಖನನ್ನು ಎಚ್ಚರಿಸಬೇಕಾಗುತ್ತದೆ. ಇದು ತಡವಾಯಿತಲ್ಲಾ ಎಂದು ಅನಿಸಿದರೂ, Better late than never ಎಂದು ತನಗೆ ತಾನೇ ಸಮಾಧಾನ ಮಾಡಿಕೊಳ್ಳಲು ಯತ್ನಿಸುತ್ತಾನೆ, ಮೌನಿ. ಈ ಮೌನವನ್ನು, ಮೊದಲೇ ಮುರಿದಿದ್ದರೆ, ಇಷ್ಟು ದೀರ್ಘಕಾಲ ಅನುಭವಿಸಿದ ನೋವನ್ನು ತಪ್ಪಿಸಬಹುದಾಗಿತ್ತಲ್ಲಾ ಎಂಬ ಭಾವನೆಯೊಂದಿಗೆ, ಯಾರಲ್ಲೂ ಹೇಳಿಕೊಳ್ಳದೆ, ಒಳಗೊಳಗೇ ಒದ್ದಾಡುತ್ತಾನೆ. ಮುಂದಿನ ಫಲಿತಾಂಶಕ್ಕಾಗಿ ಕಾಯುತ್ತಾನೆ. ಆದರೆ ಇದಕ್ಕೆ ಒಂದು Exact result date ಇಲ್ಲವಾದ್ದರಿಂದ, ಪ್ರತಿದಿನ, ಪ್ರತಿಕ್ಷಣ, ಫಲಿತಾಂಶದತ್ತ ಅವನ ಹದ್ದಿನ ಕಣ್ಣು

ಇಡುವಂತಾಗುತ್ತದೆ. ಕೊನೆಯದಾಗಿ ಒಂದು ಮಾತು. ಈ ಮೌನಿ, ಮೌನವನ್ನು ಆಶ್ರಯಿಸಿದ್ದಾಗ, ಬಾಯಿ ಸುಮ್ಮನಿತ್ತೇ ಹೊರತು, ಹೃದಯದಲ್ಲಿ ಮಾತ್ರಾ ಭಾವನೆಗಳ ಅಲೆಗಳ ತರಂಗಗಳೇ ಪ್ರವಾಹದಂತೆ, ಹುಚ್ಚೆದ್ದು ಕುಣಿದು, ಪ್ರವಾಹ ನಿಂತ ಸಮುದ್ರದ ಗಂಭೀರದ, ಶಾಂತತೆಯಂಥ, ಹಾಯಾದ ಸ್ಥಿತಿಯನ್ನು ಮನಸ್ಸು ಬಯಸುತ್ತಿರುತ್ತಿತ್ತು. ಮೌನ ಮುರಿದ ಮೇಲೆ, ಅದರ ಸತ್ಪರಿಣಾಮವನ್ನು ಕಾಣುವಂತೆ ಮಾಡು ಭಗವಂತಾ, ಎಂದು ಪರಿತಪಿಸಬೇಕಾಯ್ತು. ಎಲ್ಲದಕ್ಕೂ, ಕಾಲಾವಕಾಶ ಬೇಕು, ಎಷ್ಟು ಕಾಲವೋ ಗೊತ್ತಿಲ್ಲ, ಎಂದುಕೊಳ್ಳುವಂತೆ ಆಗುತ್ತದೆ ಅವನ ಸ್ಥಿತಿ. ಆದರೆ, ಜೀವನ ಮೂರು ಗಂಟೆಯ ಸಿನಿಮಾ ಅಲ್ಲ. ಒಂದು ಗಂಟೆಯಲ್ಲಿ ಓದಬಹುದಾದ ಪುಸ್ತಕವೂ ಅಲ್ಲ. ಆರಂಭದಿಂದ ಅಂತ್ಯದವರೆಗೂ, ಲೆಕ್ಕವಿಡಲಾಗದಷ್ಟು ಪರೀಕ್ಷೆಗಳು. ಹಾಗಾಗಿ ಎಲ್ಲಾ ಫಲಿತಾಂಶಗಳನ್ನೂ ಕಾಲವೇ ಹೇಳಬೇಕು,

ಕಾಲಾಯ ತಸ್ಮೈ ನಮಃ.

13. ಮುದ್ದು ಅಪ್ಪಿ, ಪ್ರೀತಿ ಅರ್ಚು

ನಿಮ್ಮಂಥ ಮುತ್ತಿನಂಥ ಮಕ್ಕಳನ್ನು ಪಡೆದಿದ್ದಾರೆ ನಿಮ್ಮಮ್ಮ ಲತೆ
ಹಾಗಾಗಿ ಅವರಿಗಿಲ್ಲ ಯಾವುದೇ ಕೊರತೆ
ಕಾರಣ ನಿಮ್ಮ ಸಂಗೀತದ ಮಧುರತೆ
ಮೀರಿಸಿದ ನಿಮ್ಮ ಸಹೃದಯದ ಸುಕೋಮಲತೆ
ಕಾರಣವಿರಬೇಕು ಇದಕ್ಕೆ ಪರಿಶುದ್ಧ ಅನುವಂಶೀಯತೆ
ಬಯಸುತ್ತೇನೆ ಎಲ್ಲರಿಗೂ ಸಿಗಲಿ ನಿಮ್ಮಂಥವರ ಜೊತೆ
ಆಗ ಆಗುತ್ತದೆ ಅವರ ಬದುಕೊಂದು ಸುಂದರ ಕವಿತೆ
ಆಗದಿರಲಿ ನನ್ನಾಸೆ ಬರೀ ಕಲ್ಪನೆಯ ಕಥೆ

14. ಮುದ್ದು ಅಪ್ಪಿಗೆ ಪ್ರೀತಿ ಅತ್ತೆಯಿಂದ

ಪ್ರೀತಿಯ ಅಪ್ಪಿಮಣಿಗೆ,

ನಿನ್ನ ಸೋದರತ್ತೆ ಸಂಧ್ಯನ ಆಶೀರ್ವಾದಗಳು. ಪತ್ರ ಬರೆಯುವುದೇ ಮರೆತು ಹೋಗಿರುವ ಈ ಕಾಲದಲ್ಲಿ ನಿನಗೊಂದು ಪತ್ರ ಬರೆಯಬೇಕೆಂದೆನಿಸಿ, ವಿಭಿನ್ನ ಶೈಲಿಯಲ್ಲಿ ಅಂದರೆ ನನ್ನ ಮನಸ್ಸಿನ ಮಾತುಗಳಿಗೆ

ಹೊಂದುವ ಸಿನಿಮಾ ಹಾಡುಗಳನ್ನು ಆಯಾ ಸಂದರ್ಭಕ್ಕೆ ಹೋಲುವಂತೆ ಬಳಸಿ ಬರೆದಿದ್ದೀನಿ, ನೀನು ಹೇಗಿದ್ದರೂ ಮೆಚ್ಚುತ್ತಿ ಎನ್ನುವ ಸಂಪೂರ್ಣ ಭರವಸೆಯಿಂದ. ಮೊದಲಿಗೆ,

| | | |
|---|---|---|
| | ನಿನ್ನ ಮಾತುಗಳು ನೆನಪಾದಾಗ ನನಗನಿಸುವುದು | ಜೇನಿನ ಹೊಳೆಯೋ ಹಾಲಿನ ಮಳೆಯೋ ಸುಧೆಯೋ ಅಪ್ಪಿಯ ಸವಿನುಡಿಯೋ |
| | ನೀನು ಬರುವ ದಿನ ಹತ್ತಿರ ಬಂದಾಗ | ಎಂದು ನಿನ್ನ ನೋಡುವೆ ಎಂದು ನಿನ್ನ ಸೇರುವೆ, ನಿಜ ಹೇಳಲೇನು ನನ್ನ ಜೀವ ನೀನು |
| | ನಿನಗೆ Award ಗಳು ಬಂದ ಸುದ್ಧಿ ತಿಳಿದಾಗ | ಗಗನವು ಎಲ್ಲೋ ಭೂಮಿಯು ಎಲ್ಲೋ ಒಂದೂ ಅರಿಯೆ ನಾ |
| | ನಿನ್ನ ಇತರ Achievements ಬಗ್ಗೆ ತಿಳಿದಾಗ | ಇದು ಎಂಥಾ ಭಾಗ್ಯವೋ ಇದು ಎಂಥಾ ಪುಣ್ಯವೋ |
| 5. | ನೀನು ನಾದಾರ್ಚನೆ ಕಾರ್ಯಕ್ರಮದ ಕೇಳುಗಳಾಗಿ ಬಂದು ಒಮ್ಮೊಮ್ಮೆ ಅಪರೂಪಕ್ಕೆ ನಿದ್ದೆ ಎಂದಾಗ | ಲಾಲಿ ಲಾಲಿ ಸುಕುಮಾರಿ ಲಾಲಿ ಮುದ್ದು ಬಂಗಾರಿ |
| 6. | ನನ್ನ ವಾಗ್ದಾನ | ಭೂಲೇಗಾ ದಿಲ್ ಜಿಸ್ ದಿನ್ ತುಮ್ಹೆ, ವೊ ದಿನ್ ಜಿಂದಗಿ ಕಾ ಆಖರೀ ದಿನ್ ಹೋಗಾ |
| 7. | ನನಗೆ ನಿನ್ನ ಮೇಲಿನ ಪ್ರೀತಿ ಎಷ್ಟೆಂದರೆ | ಚಿತಾ ಮೆ ಜಲ್ ಕರ್ ಬಿನಾ ಮಿಠೇಗೀ, ಸದಾ ರಹೀ ಹೈ ಸದಾ ರಹೇಗೀ |
| 8. | India ಗೆ ನೀನು ಬಂದಾಗ ನಾನು ನಿನ್ನ ನೋಡಿದ ತಕ್ಷಣ ನನಗನಿಸುವುದು | ಇಂದು ಆನಂದ ನಾ ತಾಳಲಾರೆ ಚೆನ್ನ ಮಾತಲ್ಲಿ ನಾ ಹೇಳಲಾರೆ |
| 9. | ಮೈಸೂರುನಲ್ಲಿ ನಾನು ನಿನ್ನ ಜೊತೆ ಓಡಾಡುವ ಸಂದರ್ಭ ಬಂದಾಗ | ಇಂದು ಬಾನಿಗೆಲ್ಲ ಹಬ್ಬ ಗಾಳಿ ಗಂಧಕೂ ಹಬ್ಬ, ಇಂದು ಭೂಮಿಗೆಲ್ಲ ಹಬ್ಬ ವಿಶ್ವ ಕುಲಕೂ ಹಬ್ಬ |
| 10. | ನೀನು ಭೂಮಿಗೆ ಬಂದಾಗ ನನಗನಿಸಿದ್ದು | ನೀನು ಬಂದ ಮೇಲೆ ತಾನೇ ಇಷ್ಟು ಚಂದ ಈ ಬಾಳು |
| 11. | ನಿನ್ನ Birthday ಬಂದಾಗ | ನಗು ನಗುತಾ ಬಾಳೂ ನೀನು ನೂರು ವರುಷ, ಎಂದೂ ಹೀಗೆ ಇರಲಿ ಇರಲಿ ಹರುಷ ಹರುಷ |

| | | |
|---|---|---|
| **12.** | ನಿನ್ನ ಪ್ರೀತಿಯ ಆಳವನ್ನು ಅರಿತಾಗಲೆಲ್ಲಾ ನನಗನಿಸುವುದು | ದೇವರ ವರವೋ ಪುಣ್ಯದ ಫಲವೋ ಕಾಣೆನು, ನಿನ್ನ ನಾ ಪಡೆದೆನು ಓ.. |
| **13.** | ಭೀಕರ ಕರೋನ ಕಾಲದಲ್ಲಿ ನನ್ನ ಮನಸ್ಸು ನಿನಗಾಗಿ ಹೇಳಿದ್ದು | ಹಿಂದೆ ನಿನ್ನ ಸಲಹಿದರ್ಯಾರು ಮುಂದೆ ನಿನ್ನ ಸಲಹುವರ್ಯಾರು, ಅಂದಿಗು ಇಂದಿಗು ಎಂದಿಗೂ ನಂದಿ ವಾಹನನಿದ್ದಾನೆ, ಗೌರಿಕಾಂತನಿದ್ದಾನೆ, ಗೌರಿವಲ್ಲಭನಿದ್ದಾನೆ, ಸುಖ ಸಂಪೂರ್ಣನಿದ್ದಾನೆ |
| **14.** | ನಿನ್ನ ಹಾಡೆಂದರೆ ನನಗೆ | ಸಂಪಿಗೆ ಮರದ ಹಸಿರೆಲೆ ನಡುವೆ ಕೋಗಿಲೆ ಹಾಡಿತ್ತು |
| **15.** | ನನ್ನಾಶೀರ್ವಾದ ನಿನಗೆ | ಹರನ ಕರುಣೆ ಎಂದೂ ನಿನ್ನ ರಕ್ಷಿಸಲಿ ಮಗುವೆ |

ಹೃತ್ಪೂರ್ವಕ ಧನ್ಯವಾದಗಳು. ಆದರೆ ನಿನಗಲ್ಲ ಅಪ್ಪಿ. ನಿನ್ನಂತಹಾ ಬೆಲೆಕಟ್ಟಲಾರದ ಮಾಣಿಕ್ಯವನ್ನು ನನಗೆ ನೀಡಿದ ನಿನ್ನಮ್ಮನಿಗೆ.

Bye ಅಪ್ಪಿ,

ಇಂತಿ ನಿನ್ನ ಪ್ರೀತಿಯ ಅತ್ತೆ,

ಸಂಧ್ಯ

**15.** ಮನೆಗೆ ಬಂದ ಮದುವೆ

ನಮ್ಮೆಲ್ಲರ ನೆಚ್ಚಿನ ಅಚ್ಚುಮೆಚ್ಚಿನ ಗೆಳತಿ, ಕೆ.ಜಿ.ಲತಳ ಮಗಳ ಮದುವೆಯ ಸಂಕ್ಷಿಪ್ತ ವಿವರವನ್ನು, "Just informed you, for virtual Blessing, because of Corona problem" ಎಂಬ ಸಾಲುಗಳನ್ನು ಓದಿದಾಗ, ಇದೇನಪ್ಪಾ ಇದು, ನಿಜವಾದ ಲಗ್ನಪತ್ರಿಕೆಯನ್ನು, ಕೈ ತುಂಬಾ ಹಿಡಿದುಕೊಂಡು, ಕಣ್ತುಂಬಾ ನೋಡಿ, ಮದುವೆಯ ಮಮತೆಯ ಕರೆಯೋಲೆ ಎಂಬ ಸಾಲುಗಳನ್ನೆಲ್ಲಾ ಓದಿ, ಸಂತಸ ಪಡುತ್ತಿದ್ದ ಭಾಗ್ಯ ಈಗೆಲ್ಲಿ ಹೋಯಿತು? ಎಂದು ಆ ತಕ್ಷಣಕ್ಕೆ ಬೇಸರವಾಯಿತು. "ಕಾಲವನ್ನು ಹಿಡಿಯೋರು ಯಾರೂ ಇಲ್ಲ, ಗಾಳಿಯನ್ನು ತಡೆಯೋರು ಯಾರೂ ಇಲ್ಲ" ಅಲ್ಲವೇ? ದಿನಗಳು ಓಡಿ ಬರುತ್ತಿರುತ್ತವೆ. ಈ ದಿನ ಬೆಳಗ್ಗೆ, ಎಂದಿನಂತೆ ಮೊದಲು ನಾನು Calendar ಕಡೆ ನೋಡಿದೆ.

**28-10-2020** ಎಂದು ನೋಡಿದ ತಕ್ಷಣವೇ, ತಾನಾಗಿ ನೆನಪಾಗಿದ್ದು, ಇವತ್ತು ಕೆ.ಜಿ.ಲತಳ ಮಗಳು, ಪೃಥ್ವಿಯ ಮದುವೆ ಎಂಬ ಮುಖ್ಯವಾದ ವಿಷಯ. ಆದರೆ ಹೋಗುವ ಹಾಗಿಲ್ಲವಲ್ಲಾ ಎಂಬ ಬೇಸರವೂ ಜತೆಗೂಡಿತು. ಸ್ವಲ್ಪ ಸಮಯದ ನಂತರ ಬೀರು ತೆಗೆದೆ. ಗುಲಾಬಿ, ಕನಕಾಂಬರ ಬಣ್ಣದ ದಪ್ಪ ರೇಷ್ಮೆ

ಸೀರೆಗಳು "ನನ್ನನ್ನು ಉಡು" ಎಂದೂ, "ಮಲ್ಲಿಗೆಗಿಂತಾ ಮೃದುವಾಗಿದ್ದೀನಿ, ನನ್ನನ್ನು ಉಡು" ಎಂದು ವಿಧ ವಿಧವಾದ ಬಣ್ಣದ ಮೈಸೂರು ಸಿಲ್ಕ್ ಸೀರೆಗಳೂ, ನನ್ನನ್ನು ಕೇಳಿದಂತೆ ಭಾಸವಾಯಿತು. "ಅಯ್ಯೋ, ಮೂರ್ಖಶಿಖಾಮಣಿಗಳಿರಾ, ನಿಮ್ಮಿಂದ ಪ್ರಯೋಜನವಾಗುತ್ತಿದ್ದ ಕಾಲ ಸದ್ಯಕ್ಕೆ ಮಾಯವಾಗಿದೆ. ಮದುವೆಗೆ ಹೋಗದೇ ಮನೆಯಲ್ಲಿ ಇರಬೇಕಾದ ಇಂದಿನ ಪರಿಸ್ಥಿತಿಗೆ, ನಿಮಗಿಂತ ಮಾಸಲು ಬಣ್ಣದ ನೈಟಿಯೇ ಹೆಚ್ಚು ಆರಾಮವಾಗಿರುತ್ತದೆ", ಎಂದು ನಾನು ಉತ್ತರಿಸಿದ್ದು, ಅನಿವಾರ್ಯವಾಗಿತ್ತಾದರೂ ಬೇಸರ ತಂದಿತ್ತು. ಸ್ವಲ್ಪ ಸಮಯದ ನಂತರ ಅಡಿಗೆ ಮಾಡಲು, ಅಡಿಗೆಮನೆಗೆ ಹೋದೆ. ಅಲ್ಲಿ ಪಾತ್ರೆಗಳನ್ನು ಕೈಗೆ ತೆಗೆದುಕೊಂಡೆ. "ಏ ಪೆದ್ದಿ, ಇವತ್ತು ಅಡಿಗೆಗೆ ರಜಾ ಅಲ್ಲವಾ? ಪಂಚಭಕ್ಷ್ಯ ಪರಮಾನ್ನ, ವಿಧ ವಿಧವಾದ, ರುಚಿ ರುಚಿಯಾದ ರಸದೌತಣ ಸಿಗುವ ದಿನವಲ್ಲವೇ ಇಂದು?" ಎಂದು ಅವುಗಳು ನನ್ನನ್ನು ಕೆಣಕಿದಂತಾಯಿತು. "ಮೂರ್ಖತನದಲ್ಲಿ ಸೀರೆಗಳ ಜೊತೆ ಸ್ಪರ್ಧೆ ನಡೆಸುತ್ತಿದ್ದೀರಾ ನೀವು? ಅಡಿಗೆಮನೆಗೆ ಬೀಗ ಜಡಿದು, ಆರಾಮವಾಗಿರುವ ದಿನ, ಸಧ್ಯಕ್ಕಿಲ್ಲ. Immunity ಹೆಚ್ಚಿಸುವ ಆಹಾರ ತಯಾರಿಸಿ, ಮನೆಯಲ್ಲೇ ಕೂತು, ತಿನ್ನುವ ಕಾಲ ಇದು, ಎನ್ನುವ ಜ್ಞಾನ ನಿಮಗಿಲ್ಲವೇ?" ಎಂದು ಅವುಗಳನ್ನು ಬೈದಿದ್ದು ನನಗೆ ಅನಿವಾರ್ಯವಾಗಿತ್ತು. ಬೇಸರವು, ಕರೆಯದಿದ್ದರೂ ತಾನಾಗಿ ಬಂದು, ಮನಸ್ಸಿನ ತುಂಬಾ ತುಂಬಿತು. ಮನೆಯ ಮುಂದೆ ಸ್ಥಿರವಾಗಿ ನಿಂತಿದ್ದ ಕಾರು ಕರೆಯಿತು. "ಬಾ, ಮದುವೆ ಮನೆಗೆ ಕರೆದುಕೊಂಡು ಹೋಗುತ್ತೀನಿ" ಎಂದು. "ನೀನು, ನಿಂತಲ್ಲೇ ನಿಂತಿರುವುದಷ್ಟೇ ಇಂದಿನ ಪರಿಸ್ಥಿತಿಗೆ ಕ್ಷೇಮ. ಸುಮ್ಮನೆ Flash Back ದಿನಗಳನ್ನು ನೆನೆಸಿಕೊಂಡು, ಏನೇನೋ ಹೇಳಬೇಡ. ಸ್ಥಿತಪ್ರಜ್ಞನಂತಿರು." ಎಂದು ಅದಕ್ಕೂ ಬುದ್ಧಿ ಹೇಳಿದೆ. ಅದೂ ಸಹ ತಪ್ಪದೇ ಬೇಸರವನ್ನೇ ತಂದಿತು. ಮನೆಯಲ್ಲಿ ಕುಳಿತು, ಮದುವೆ ನೋಡಬಹುದಾದ ಅವಕಾಶವನ್ನಂತೂ, ಗೆಳತಿ ಒದಗಿಸಿದ್ದಳು. ಪಾಲಿಗೆ ಬಂದಿದ್ದು ಪಂಚಾಮೃತ ಎಂದುಕೊಂಡು, ಮದುವೆಗೆ ಹೋಗಲಾಗುತ್ತಿಲ್ಲವಲ್ಲಾ ಎಂಬ ಬೇಸರದೊಂದಿಗೆ, ಮದುವೆ ನೋಡಲಾರಂಭಿಸಿದರೆ, ಪಂಚಾಮೃತವೇ ಪಾಲಿಗೆ ಬಂದಷ್ಟು ಖುಷಿಯಾಯಿತು. ಹೊಸ ರೀತಿಯ ವೀಕ್ಷಣೆ, ಸಂಭ್ರಮಿಸುವಂತೆ ಮಾಡಿತು. ವಧುವಿನ ಮುದ್ದು ಮುಖವಂತೂ, ಮದುವೆ ಮನೆಯ ಕಳೆಯನ್ನೇ ಇಮ್ಮಡಿಗೊಳಿಸಿತ್ತು. ಆರಾಮವಾಗಿ, Sofa ಒರಗಿಕೊಂಡು, Fan ಕೆಳಗೆ ಕುಳಿತು, ಆರಂಭದಿಂದ ಕೊನೆಯವರೆಗೂ, ಸಾವಕಾಶವಾಗಿ ನೋಡಿದ, ಹೊಸಾ ಅನುಭವಕ್ಕೆ, ಮನಸ್ಸು ಸಂಭ್ರಮಿಸಿತು. ಏನೇನೋ ಹಿಂದಿನಂತೆ ಇಂದು ಸಾಧ್ಯವಾಗಲಿಲ್ಲ ಎಂದು ಯೋಚಿಸಿ, ಬೇಸರಿಸಿದ ಮನಸ್ಸು, ಈ ಹೊಸ ವಿಧಾನದ ಮದುವೆ ವೀಕ್ಷಣೆಯಲ್ಲಿ, ಏನೇನು ಸಾಧ್ಯವಾಗುತ್ತಿದೆ ಎಂದು, ಅಸಾಮಾನ್ಯರಂತೆ ಯೋಚಿಸಲು ಪ್ರೇರೇಪಿಸಿತು. ನಾವೇನಾದರೂ ಆ ಮದುವೆಮನೆಗೆ ಹೋಗಿದ್ದರೆ, ಅಲ್ಲಿ ಒಬ್ಬರಾದಮೇಲೊಬ್ಬರಂತೆ ಎಲ್ಲಾ ಪರಿಚಿತರನ್ನೂ ಮಾತಾಡಿಸುತ್ತಾ, ಊಟಕ್ಕೆ Rush ಆಗಿ ಬಿಡತ್ತೆ, ಆಮೇಲೆ

Late ಆಗತ್ತೆ, ಆದ್ದರಿಂದ ಸ್ವಲ್ಪ Dining hall ಕಡೇನೂ ಗಮನಕೊಡೋಣ ಅಂತ ಹೋಗಿ, ಊಟ ಮುಗಿಸಿ ಬರುವ ಗಡಿಬಿಡಿಯಲ್ಲಿ, ಮದುವೆಯನ್ನು ಚೂರುಪಾರು ಅಲ್ಪಸ್ವಲ್ಪ ಮಾತ್ರಾ ನೋಡಲು ಸಾಧ್ಯವಾಗುತ್ತಿತ್ತು. ಆದರೆ, ಚಾಚೂ ತಪ್ಪದೆ ಮದುವೆಯ ಕಲಾಪವನ್ನು, ನಾವು ವೀಕ್ಷಿಸಿದ ಪ್ರಥಮ ಮದುವೆ ಇದು ಎಂಬ ಹೆಗ್ಗಳಿಕೆ ಈ ಮದುವೆಯದ್ದಾದರೆ, ಅದು ನಮಗೆ ಎಷ್ಟು ಖುಷಿ ಕೊಟ್ಟಿತು ಎನ್ನುವುದು ಈ ಮದುವೆಯ ಮತ್ತೊಂದು ಮುಖ್ಯ ಅಂಶವಾಯಿತು. ಇಷ್ಟು ಅಲ್ಲದೆ, ಮದುವೆ ನೋಡುವಾಗ, ಅದನ್ನು ನೋಡುತ್ತಿರುವ ನಮ್ಮ ಇತರ ಸ್ನೇಹಿತರೂ, ಬಂಧುಬಾಂಧವರೊಡನೆ ಅದರ ಬಗ್ಗೆ, Phone ಮೂಲಕ ಮಾತಾಡುತ್ತಾ, Enjoy ಮಾಡಲು ಸಾಧ್ಯವಾಗಿದ್ದೂ ಸಹಾ ಮತ್ತೊಂದು ಹೊಸಾ ಸಂತೋಷದ ಅನುಭವವನ್ನೇ ತಂದುಕೊಟ್ಟಿತು. ಇದೆಲ್ಲವೂ ಅಲ್ಲದೆ, ಈ ಕರೋನಾ ಪರಿಸ್ಥಿತಿಯಲ್ಲಿ, ಇಂತಹಾ ಅತ್ಯಂತ ವಿಶೇಷ ದಿನವಾದ ಇಂದೂ ಸಹಾ ನಾವು “Stay at Home” ನಿಯಮ ಪಾಲಿಸಿ, ಆಟೋ, ಬಸ್ಸು, ರೈಲು, ವಿಮಾನ, ಕಾರುಗಳ ಪ್ರಯಾಣವನ್ನು Avoid ಮಾಡಿ, ಮತ್ತೆ ಮದುವೆ ಮನೆಯಲ್ಲಿ ನಾವೆಲ್ಲಾ ಒಟ್ಟಾಗಿ ಸೇರುವುದನ್ನೂ ಸಹಾ Avoid ಮಾಡಿ, ಕರೋನಾ ಹೆಚ್ಚು ಹರಡದಂತೆ ಮಾಡಿ, ನಾವೂ ಒಂದು ಸತ್ಕಾರ್ಯಕ್ಕೆ ಸಹಕರಿಸಿದೆವಲ್ಲಾ ಎಂಬ ತೃಪ್ತಿಯ ಭಾವ ಕೂಡಾ, ಮದುವೆಗೆ ಹೋಗಲಾಗಲಿಲ್ಲವಲ್ಲಾ ಎಂಬ ಬೇಸರವನ್ನು ಅಳಿಸಿ ಹಾಕಿ, ಸಂಪೂರ್ಣ ಸಮಾಧಾನ ಸಂತೋಷಗಳನ್ನು ತಂದುಕೊಟ್ಟಿತು. ಮದುವೆ ಮನೆಯನ್ನೇ ಮನೆಗೆ ತಂದುಕೊಟ್ಟ ನಮ್ಮ ಪ್ರೀತಿಯ ಕೆ.ಜಿ.ಲತನಿಗೆ, Mobile, T.V, ಅಂದರೆ Mediaಗೆ, ಒಟ್ಟಿನಲ್ಲಿ, ಈ ಅದ್ಭುತವಾದ Technologyಗೆ, ಮನಸ್ಸು ಹೇಳಿತು ಒಂದು ಅರ್ಥಪೂರ್ಣ ಪದ “ಧನ್ಯವಾದ”.

ಈಗ ಒಂದು ಪುಟ್ಟ ಕವನ - ಗೆಳತಿ.

ನಾವು ಮದುವೆ ಮನೆಗೆ ಬರದಂತೆ ಬೇಸರ ಮಾಡಿತು ಕರೋನ

ಮದುವೆ ಮನೆಯನ್ನೇ ಮನೆಗೆ ತಂದುಕೊಟ್ಟು ಖುಷಿಪಡಿಸಿದೆ ನಮ್ಮೆಲ್ಲರ ಮನ

ಯಾರಿಹರು ನಿನಗೆ ಸಮಾನ

ಈ ಲೇಖನವೇ ಒಂದು virtual Blessing, From Sandhya and Latha.

**Thanks K.G**

**16.** ನಮನ – ಮೂರು ಅಧ್ಯಾಯಗಳಲ್ಲಿ

ಮೊದಲನೇ ಅಧ್ಯಾಯ:

ನಮನ ಕಲ್ಪನೆಯ ಕಥೆಯಲ್ಲ. ಮನಕಲಕುವ ಸತ್ಯ ಕಥೆ. ಈ ಕಥೆಯ ಆರಂಭವನ್ನಾಗಲೀ, ಅಂತ್ಯವನ್ನಾಗಲೀ ನೀವ್ಯಾರೂ ಊಹಿಸಲು ಅಸಾಧ್ಯ. ಇದು ನನ್ನ ಅನುಭವದ ಕಥೆಯಾದ್ದರಿಂದ, ನಾನೇ

ನಿಮಗೆ ಹೇಳಬೇಕು. ನಮ್ಮ ಮಕ್ಕಳು ವಿದ್ಯಾವಂತರಾಗಬೇಕೆಂಬ ಆಸೆ ಎಲ್ಲಾ ತಾಯಂದಿರಿಗೂ ಸಹಜ. ನಾಲ್ಕನೇ ತರಗತಿಗೆ ಬಂದಾಗಿನಿಂದ, ಅಲ್ಲಿಯವರೆಗೂ ಚೆನ್ನಾಗಿ ಓದುತ್ತಿದ್ದ ನನ್ನ ಮಗನಿಗೆ, ಇದ್ದಕ್ಕಿದ್ದಂತೆ ಓದಿನಲ್ಲಿ ಆಸಕ್ತಿ ಕಡಿಮೆಯಾಗಲು ಆರಂಭವಾಗಿ, ಆ ಸಮಸ್ಯೆಗೆ ಕಾರಣವೂ ತಿಳಿಯದಂತಾಗಿ, ಬೃಹದಾಕಾರವಾಗಿ ದಿನೇ ದಿನೇ ಬೆಳೆದ ಸಮಸ್ಯೆ, ನನ್ನನ್ನು ಗಾಬರಿಗೊಳಿಸಿತಾದರೂ, ಪರಿಹರಿಸಲೇ ಬೇಕಾಗಿ, ಅದಕ್ಕೆ ಪಟ್ಟ ಪ್ರಯತ್ನಗಳು ಒಂದೆರಡಲ್ಲ, ನೂರಾರು. ಶಾಲೆಯ ಶಿಕ್ಷಕರೊಡನೆ ಚರ್ಚೆ, ಜ್ಯೋತಿಷ್ಯರ ಭೇಟಿ, ಮನಃಶಾಸ್ತ್ರಜ್ಞರ ಸಲಹೆ, Tuition ಗಳ ವ್ಯವಸ್ಥೆ, ಒಳ್ಳೇ ಮಾತುಗಳಿಂದ, ಬುದ್ಧಿವಾದಗಳಿಂದ, ವಿವಿಧ ಶಿಕ್ಷೆಗಳಿಂದ, ತಿದ್ದಲು ಮಾಡಿದ ಪ್ರಯತ್ನಗಳನ್ನೇನಾದರೂ ನಾನು ಈಗ ವಿವರವಾಗಿ ಹೇಳಲು ಹೊರಟರೆ, ಅದೇ ಒಂದು ಪುಸ್ತಕವಾಗುತ್ತದೆ. ಇಷ್ಟೆಲ್ಲಾ ಪ್ರಯತ್ನಗಳನ್ನು ನಡೆಸಿದ್ದು, ಒಂದೆರಡು ವಾರಗಳಲ್ಲಲ್ಲ, ತಿಂಗಳುಗಳಲ್ಲಲ್ಲ, ವರ್ಷಗಳಲ್ಲಲ್ಲ, ಸತತವಾಗಿ ಎಂಟು ವರ್ಷಗಳು. ಸಿಕ್ಕ ಫಲ ಸೊನ್ನೆ. ಆ ಎಂಟು ವರ್ಷಗಳಲ್ಲಿ, ನಾನು ಕಣ್ಣೀರು ಹಾಕದ ದಿನ ಒಂದೇ ಒಂದೂ ಇರಲಿಲ್ಲ. L.K.G ಇಂದ ಹತ್ತನೆಯ ತರಗತಿಯ ತನಕ, ಅವನ ಶಾಲೆಯ ಎಲ್ಲಾ ಶಿಕ್ಷಕರನ್ನೂ ಭೇಟಿಯಾಗಿದ್ದೆ. ಪ್ರತೀ ಪೋಷಕರ ಸಭೆಗೂ ತಪ್ಪದೇ ಹೋಗಿದ್ದೆ. ಎಲ್ಲರಿಂದಲೂ ಬರುತ್ತಿತ್ತು ಒಂದೇ ಉತ್ತರ. ಅವನು ತುಂಬಾ ಒಳ್ಳೇ ಹುಡುಗ. ಅವನೇ ಮನಸ್ಸು ಮಾಡಬೇಕು. ಬೇರೆಯವರಿಂದ ಅವನ ಸಮಸ್ಯೆ ಪರಿಹಾರ ಅಸಾಧ್ಯ. ಎಷ್ಟೋ ಶಿಕ್ಷಕರನ್ನು ಮನೆಗೆ ಆಹ್ವಾನಿಸಿ, ಬುದ್ಧಿ ಹೇಳಿಸಿದ್ದೆ. ಇನ್ನೊಂದು, ಜಗತ್ತಿನಲ್ಲೇ ನಾನು ಕಂಡರಿಯದ ವಿಷಯವೆಂದರೆ, ತಿದ್ದಲು ಹೋದಷ್ಟೂ, ಅವನಿಂದ ದೊಡ್ಡ ಗಲಾಟೆ ನಡೆಯುವುದು ಮಾತ್ರಾ ತಪ್ಪದೇ ನಡೆಯುತ್ತಿತ್ತು. ಒಂದುಸಲ ನನ್ನ ಅತ್ತಿಗೆ ಲತನಿಗೆ ಅದನ್ನು ನೋಡಿಯೇ ಹೆದರಿ ಜ್ವರ ಬಂದಿತ್ತು. ಅಂತೂ ಇಂತೂ, ಹೇಗೋ ಹತ್ತನೆಯ ತರಗತಿಯ ತನಕ ತಳ್ಳಿಕೊಂಡು ಬಂತು, ಅದೇ ರೀತಿಯ ಸಮಸ್ಯೆಯೊಡನೆ. ಶಾಲೆಗೆ ಹೋಗುವುದರಲ್ಲೂ ಆಸಕ್ತಿ ಕಡಿಮೆಯಾಯಿತು. ನಮ್ಮ ಪ್ರಯತ್ನಗಳ ವಿಫಲತೆ ಹೆಚ್ಚಾಯಿತು. S.S.L.C ದಾಟಲು ಅಸಾಧ್ಯ ಎಂಬ ಸ್ಥಿತಿಗೆ ಬಂದು, ಮೊದಲನೇ ವರ್ಷ ಹಾಳಾಯಿತು. ನನ್ನ ಯೋಚನೆ ತಾರಕಕ್ಕೇರಿತು. ದುಃಖಕ್ಕೆ ಮಿತಿ ಇರದಂತಾಯಿತು. ಹೆತ್ತ ತಪ್ಪಿಗೆ ನೀವೇ ಸಾಯೋ ತನಕ ಅನ್ನ ಹಾಕಿ, ಚೆನ್ನಾಗಿದ್ದಾನೆ, ಸಿನಿಮಾಗೆ ಸೇರಿಸಿ, ಕೊನೇತನಕ Body guard ಆಗಿ ನೇಮಿಸಿಕೊಳ್ಳಿ, ಇಂತಹ ಚುಚ್ಚುಮಾತುಗಳು ಕೆಲವರಿಂದ ನನಗೆ ಸಿಕ್ಕರೆ, ವಿದ್ಯೆ ಇಲ್ಲದಿದ್ದರೇನು, ಹುಡುಗನಿಗೆ ಯಾವ ಕೆಟ್ಟ ಬುದ್ಧಿ ಇಲ್ಲ, ಒಳ್ಳೇಯವನು, ಅದನ್ನಾದರೂ ಅರಿತು ಸಮಾಧಾನವಾಗಿರಿ ಎಂಬ ಮಾತು ಕೆಲವರಿಂದ. ಅವನಿಗೊಂದು ಭವಿಷ್ಯ ಬೇಡವೇ? ನಾನು ಒಳ್ಳೆಯವನು ಎಂದು ಹೇಳಿದರೆ, ಯಾರಾದರೂ ಸಂಬಳ ಕೊಡುತ್ತಾರೆಯೇ? ಅಥವಾ ಬುದ್ಧಿವಂತನೆಂದರೆ, Knowledge without certificate ಏನು ಮಾಡಕ್ಕೆ?, ಎಂದು ದುಃಖದಿಂದ ಹುಚ್ಚು ಹಿಡಿದಂತಾಗಿತ್ತು ನನಗೆ. ಇಲ್ಲಿಗೆ ಮೊದಲನೇ ಅಧ್ಯಾಯ ಮುಗಿಯಿತು.

ಎರಡನೇ ಅಧ್ಯಾಯ:

ನನ್ನಿಂದಲೂ, ಯಾರಿಂದಲೂ ಬಗೆಹರಿಸಲಾಗದ ಸಮಸ್ಯೆಯಿಂದ ಕಂಗಾಲಾಗಿದ್ದೆ. ನನ್ನ ಕೆಲವು ಸ್ನೇಹಿತರೂ, ಬಂಧು ಬಾಂಧವರೂ, ಹಿತೈಷಿಗಳ ಪ್ರಯತ್ನವೂ ಸಹಾ ನಡೆಯುತ್ತಿದ್ದರೂ, ವೈದ್ಯರ ಪ್ರಯತ್ನದ ನಂತರವೂ ವಾಸಿಯಾಗದ ಕಾಯಿಲೆಯಂತಾಗಿತ್ತೇ ಹೊರತು, ಬೇರೇನೂ ಅಶಾ ಭಾವನೆ ಕಂಡುಬರುತ್ತಿರಲಿಲ್ಲ. ನನ್ನ ಅಣ್ಣನ ಮಗಳು ಅಪರ್ಣ ಅದೇ ಸಮಯಕ್ಕೆ ಬಂದಳು, ಅಮೆರಿಕದಿಂದ. ಅವಳನ್ನು ಕಂಡರೆ ನನ್ನ ಮಗನಿಗೆ ಇಷ್ಟ. ಅವಳನ್ನು ನೋಡಲು, ಅವರ ಮನೆಗೆ ಹೋಗುತ್ತಿದ್ದ. ಅವಳನ್ನು ಕಂಡರೆ ಎಷ್ಟೇ ಇಷ್ಟವಿದ್ದರೂ, ಓದು ಬರಹದ ವಿಷಯದಲ್ಲೇನೂ ವಿಧೇಯತೆ ಇರಲಿಲ್ಲ. ಬರೀ ಅವಳ ಜೊತೆ ಮಾತಾಡಿಕೊಂಡು, ಅಲ್ಲಿ ಇಲ್ಲಿ ಓಡಾಡಿಕೊಂಡು ಇರುವುದಕ್ಕೆ ಮಾತ್ರ ಸೀಮಿತವಾದ ಇಷ್ಟ ಅದಾಗಿತ್ತು. ಅತ್ತಿಗೆ ಲತಾ ಹೊಸಾ ತರದ ಆಲೋಚನೆ ಮಾಡಿದರಂತೆ. ತುಂಬಾ ಓದಲು ಖಂಡಿತಾ ಇವನಿಗೆ ಆಸಕ್ತಿ ಇಲ್ಲ. ಈಗ ಅವನಿಂದ ಅದು ಸಾದ್ಯವೂ ಇಲ್ಲ. ಬದಲಾಗಿ, ಎಲ್ಲಾ Subject ಗಳಲ್ಲೂ, Just pass ಆಗುವಂತೆ ಮಾಡಬೇಕಾದರೆ, ಎಷ್ಟು ಮತ್ತು ಹೇಗೆ ಓದಿಸಬೇಕೆಂಬ ಲೆಕ್ಕಾಚಾರ ಹಾಕಿ, ಅದಕ್ಕೆ ಬೇಕಾದ ಸಿದ್ಧತೆ ಮಾಡಿಕೊಂಡು, ನನ್ನ ಮಗನಿಗೆ ಪಾಠ ಮಾಡಲು ಆರಂಭಿಸಿದರೆ, ನಿರೀಕ್ಷಿಸಿದ ಪ್ರತಿಕ್ರಿಯೆ ಅವರಿಗೆ ಅವನಿಂದ ಸಿಗದೆ, ಆದರೂ ಬಿಡದಂತೆ ಪ್ರಯತ್ನ ಮುಂದುವರೆಸಿ, ಅವರಿಗೆ ನಿದ್ದೆ ಬರುವಷ್ಟು ಆಯಾಸವಾದಾಗ, ಅಪರ್ಣನಿಂದ ಆ ಪ್ರಯತ್ನ ಮುಂದುವರೆದು, ಅವಳಿಗೂ ಅದೇ ಅನುಭವವಾಗಿ, ಅವಳೂ ನಿದ್ರಿಸುವ ಹೊತ್ತಿಗೆ, ಮತ್ತೆ ಲತಾ ಆ ಪ್ರಯತ್ನ ಮುಂದುವರಿಸಿ, ಅವರಿಬ್ಬರೂ ಕಷ್ಟಪಟ್ಟರೂ, ಅದರಿಂದ ನನಗೆ ಒಳ್ಳೆಯದಾಗಲಿ ಎಂದು ಶ್ರಮಿಸುವುದನ್ನು ಪ್ರತೀದಿನ ಮುಂದುವರಿಸುತ್ತಲೇ ಬಂದು, ಇಷ್ಟೂ ಸಾಲದೆಂಬಂತೆ, ಅವರಿಬ್ಬರೂ ಸೇರಿ, ಅವನನ್ನು ಶೃಂಗೇರಿಗೆ ಉದ್ದೇಶಪೂರ್ವಕವಾಗಿ ಕರೆದುಕೊಂಡು ಹೋಗಿ, ಆ ತಾಯಿಯಲ್ಲಿ ಭಕ್ತಿಭಾವದಿಂದ ಪರಿ ಪರಿಯಾಗಿ ವರವನ್ನು ನನಗಾಗಿ ಬೇಡಿ ಬಂದರು. S.S.L.C pass ಆಗದಿದ್ದರೆ, ಮುಂದಿನ ವಿದ್ಯೆಗೆ ಅವಕಾಶವೇ ಇಲ್ಲವಲ್ಲಾ, ಅದು ಅಲ್ಲಿಗೇ ನಿಲ್ಲುತ್ತದೆ. ಲತನ ಪ್ರಯತ್ನಕ್ಕೆ ಫಲ ದೊರಕೇ ಬಿಟ್ಟಿತು. ಅವನು S.S.L.C pass ಆದ. ನಾನು ಅನುಭವಿಸಿದ ಬೃಹದಾಕಾರದ ಸಮಸ್ಯೆಗಳಿಂದ, pass ಎಂಬ ಶಬ್ದವು ನನಗೆ First rank ಗೆ ಸಮಾನವಾಗಿತ್ತು. ಕುರುಡನಿಗೆ ಕಣ್ಣು ಬಂದಂತಾಗಿತ್ತು. ಮರಳುಗಾಡಿನಲ್ಲಿ ಸಾಗರವನ್ನು ಕಂಡಂತಾಯಿತು. ನಿಜವಾದ ಶಿಕ್ಷಕರೆಂದರೆ ಲತಾ. ಮನೆಯಿಂದಲೇ, ಪೋಷಕರ ಪಾತ್ರದಿಂದಲೇ ಸಿದ್ದವಾಗಿ, ಬುದ್ಧಿವಂತರಾಗಿ ಬಂದ ಮಕ್ಕಳನ್ನು, ಉತ್ತೇಜಿಸಿ, ಪ್ರೋತ್ಸಾಹಿಸುವ ಶಿಕ್ಷಕರಿಗಿಂತಲೂ, ಪೋಷಕರ ಕಣ್ಣೀರನ್ನು

ತಮ್ಮ ಎರಡೂ ಕೈಗಳಿಂದ, ಸಹೃದಯದಿಂದ, ಒರೆಸುವಂತಹಾ ಲತನಂತಾ ಶಿಕ್ಷಕರು ಹೆಚ್ಚು ಅಭಿನಂದನಾರ್ಹರಲ್ಲವೇ. ಇಲ್ಲಿಗೆ ಎರಡನೇ ಅಧ್ಯಾಯ ಮುಗಿಯಿತು.

ಮೂರನೆಯ ಅಧ್ಯಾಯ:

ನನ್ನ ಮಗನನ್ನು First P.U.C ಗೆ ಸೇರಿಸಲಾಯಿತು. ಲತಾ Family ಜೊತೆಗೆ ಅವನ ಬಾಂಧವ್ಯ ಬೆಳೆಯಲಾರಂಭಿಸಿತು. ಕಾಲೇಜಿನ ಶಿಕ್ಷಕರೊಬ್ಬರು ನನಗೆ ಹೇಳಿಕಳಿಸಿದರು. ನನಗೆ ಭಯ ಆಯಿತು. ವಿದ್ಯೆಯಲ್ಲಿ ಆಸಕ್ತಿ ಇಲ್ಲದವರನ್ನು ಏಕೆ ಕಾಲೇಜಿಗೆ ಸೇರಿಸಿದಿರಿ? ಎಂದು ಕೇಳಬಹುದು. ಏನೆಂದು ಉತ್ತರಿಸಲಿ ಎಂಬ ಬೇಸರದಿಂದಲೇ ಹೋದೆ. ಅವರು, Madam, ನಿಮ್ಮ ಮಗ Test ನಲ್ಲಿ ನೂರಕ್ಕೆ ನೂರು ಅಂಕ ತೆಗೆದುಕೊಂಡಿದ್ದಾನೆ. ಎಲ್ಲಿ Marks cut ಮಾಡಲಿ ಅಂತ ಗೊತ್ತಾಗ್ತಿಲ್ಲ. Test ನಲ್ಲಿ ನೂರಕ್ಕೆ ನೂರು ಕೊಟ್ಟರೆ Principal object ಮಾಡ್ತಾರೆ. ಎಲ್ಲರೂ Time ಸಾಲಲಿಲ್ಲ ಅಂದ್ರು. ಇವನು Choice ಕೊಟ್ಟಿದ್ದನ್ನೂ ಬರೆದು ಇಟ್ಟಿದ್ದಾನೆ. ಪುಣ್ಯಾತ್ಮ ಅಲ್ಲೂ, ಒಂದೂ ತಪ್ಪು ಮಾಡಿಲ್ಲ. ಖುಷಿಯಾಗತ್ತೆ. ತುಂಬಾ ಒಳ್ಳೇ ಹುಡುಗ ಎಂದೆಲ್ಲಾ ಹೇಳಿದರು. ನನಗೆ ಕನಸೋ, ನನಸೋ ಗೊತ್ತಾಗಲಿಲ್ಲ. ನನ್ನಿಂದ ಉತ್ತರಿಸಲಾಗಲಿಲ್ಲ. ಅವನಿಗೆ ಪಾಲಿಗೆ ಅಸಾಧ್ಯವಾಗಿದ್ದ S.S.L.C ಯನ್ನು ಅಂದು ಲತಾ ಕೈ ಹಿಡಿದು ದಾಟಿಸದಿದ್ದರೆ, ನನಗೆ ಇದೆಲ್ಲಾ ಕೇಳಿಸಿಕೊಳ್ಳುವ ಅವಕಾಶವಾದರೂ ಸಿಗುತ್ತಿತ್ತಾ ಎಂದೆಲ್ಲ ಯೋಚಿಸಿ, ಕಣ್ತುಂಬಿ ಬಂತು. ಕಾಲೇಜಿನಲ್ಲಿ ನಡೆಸುತ್ತಿದ್ದ ಪೋಷಕರ ಸಭೆಗೆ ತಪ್ಪದೇ ಹೋಗುತ್ತಿದ್ದೆ. ನನ್ನ ಕಿವಿಗೆ ತಲುಪುತ್ತಿತ್ತು, ಎಲ್ಲಾ ಶಿಕ್ಷಕರಿಂದ ಅವನ ಬಗ್ಗೆ ಪ್ರಶಂಸೆಯ ಸುರಿಮಳೆ. ಅಲ್ಲಿನ Lecturers ನನಗೆ ಹೇಳುತ್ತಿದ್ದರು, ಒಳ್ಳೆಯ Behaviour ಹೇಗಿರಬೇಕೋ ಎಂದು ನಾವು ಮಕ್ಕಳಿಗೆ ತಿಳಿಸುವಾಗ, ನಿಮ್ಮ ಮಗನನ್ನೇ Example ಆಗಿ ಹೇಳುತ್ತೇವೆ ಎಂದು. ಗಲಾಟೆ ಗಣೇಶ ಎಂದೇ ಒಂದುಕಾಲದಲ್ಲಿ ಅವನು ಹೆಸರುವಾಸಿಯಾಗಿದ್ದು, ಅಪ್ರಯತ್ನವಾಗಿ ನೆನಪಾಯಿತು. ಲತಾ ಕಲಿಸಿದ ವಿದ್ಯೆಯ ಜೊತೆಗೆ ಇದನ್ನೂ ಅವನಿಗೆ ತಂದುಕೊಟ್ಟಿದೆ ಎಂದು ಸಂತಸವಾಯಿತು. ಯಾರ ಪ್ರಭಾವವೂ ಇಲ್ಲದೆ, ಕೇವಲ ತನ್ನ ಶ್ರಮದಿಂದ, ಅವನು, ತನ್ನ ಕಾಲೇಜಿನಲ್ಲಿ, M Com result ಬರುವುದಕ್ಕೆ ಮುನ್ನವೇ ನಡೆದ Interview ನಲ್ಲಿ, select ಆಗಿ, ಇಂದು ಸಾವಿರಾರು ಮಕ್ಕಳಿಗೆ ಪಾಠಮಾಡುವುದರಲ್ಲಿ ಯಶಸ್ವಿಯಾಗಿದ್ದಾನೆ. ಲತನ ಮನೆಯ ವಾತಾವರಣದಲ್ಲಿ ಹೆಚ್ಚು ಬೆರೆಯುತ್ತಾ ಹೋದಂತೆಲ್ಲಾ, ಸಿಕ್ಕ ಈ ಅಪೂರ್ವ ಯಶಸ್ಸಿಗೆ, ಲತನಿಗೆ ಒಂದು ಕೃತಜ್ಞತೆ ತಿಳಿಸದಿದ್ದರೆ ಆ ಭಗವಂತ ನನ್ನನ್ನು ಮೆಚ್ಚುತ್ತಾನೆಯೇ? ಖಂಡಿತಾ ಇಲ್ಲ. ಇಂದು ನಮ್ಮ ಮನೆಯ ಸಂಪೂರ್ಣ ಜವಾಬ್ದಾರಿ ಅವನ ಮೇಲಿದೆ. ತುಂಬಾ ಶ್ರಮದಿಂದಲೂ, ಸಂತೋಷವಾಗಿಯೂ, ಎಲ್ಲವನ್ನೂ ಅತ್ಯಂತ ಸೊಗಸಾಗಿ ನಿರ್ವಹಿಸುತ್ತಿದ್ದಾನೆ. ಅಂದು ಅವನನ್ನು ಲತಾ, ಅಜ್ಞಾನದಿಂದ ಸುಜ್ಞಾನದ ಕಡೆಗೆ ಕರೆತಂದಿದ್ದರಿಂದ, ಇಂದು ಇಡೀ ಒಂದು ಸಂಸಾರ ನೆಮ್ಮದಿಯಿಂದ ಜೀವನ ಸಾಗಿಸಲು ಸಾಧ್ಯವಾಗಿದೆ.

ಈ ಕಾರಣದಿಂದ ಶಿಕ್ಷಕರ ದಿನಾಚರಣೆಯ ಸಂದರ್ಭದಲ್ಲಿ, ಲತನಿಗೊಂದು ಮನಃಪೂರ್ವಕ ವಿಶೇಷ ನಮನ ಸಲ್ಲಿಸಲು, ಈ ಲೇಖನವನ್ನು ಸಮರ್ಪಿಸುತ್ತಿದ್ದೇನೆ. ಲತನಂತಹ ಬಂಧುವನ್ನು ನೀಡಿದ್ದಕ್ಕಾಗಿ ಭಗವಂತನಿಗೊಂದು ಹೃತ್ಪೂರ್ವಕ ನಮನ.

**17. ನಿವೃತ್ತಿ ಅಲ್ಲಿ ಇಲ್ಲಿ**

ನಿವೃತ್ತಿಯಾದೊಡನೆಯೇ ಕಡಿದು ಹೋಯಿತು ಶಾಲೆಯ ಕೆಲಸಗಳೊಡನೆ ಸಂಪೂರ್ಣ ಸಂಬಂಧ
ಆದರೆ ಗಟ್ಟಿಯಾಗುತ್ತಲೇ ಹೋಗುತ್ತಿದೆ
ಅಡಿಗೆಮನೆ Sink ನ ಒಳಗೆ ದಿನಪೂರ್ತಿ ಬೀಳುವ ಪಾತ್ರೆಗಳೊಡನೆ
ನನ್ನ ಅವಿನಾಭಾವ ಅನುಬಂಧ
ಕೆಲಸದವರ ಕೆಲಸ ಆರಂಭವಾಗುವುದು ಬೆಳಗ್ಗೆ ಆರರಿಂದ
Full time servant ಅನ್ನು ತರಲಿ ಎಲ್ಲಿಂದ?
ಗತಿಯೊಬ್ಬನೇ ಗೋವಿಂದ

**18. ಸೀತಮ್ಮನವರ ಸೊಸೆ**

ಅಮ್ಮಾ, ನಿನಗೆ ಸಿಕ್ಕಿತ್ತು ನಿನ್ನ ಸೊಸೆಯ ಪ್ರೀತಿ, ಗೌರವ, ಒಡನಾಟ, ನಿನ್ನ ಜೀವನದೊಳಗೆ
ವಿದ್ಯಾವಂತೆಯಾದರೂ ರಾಜಕುಮಾರಿಯಂತೆ ಬೆಳೆದುಬಂದಿದ್ದರೂ
ಗರ್ವ ತೋರದೆ ಸರಳವಾಗಿ ಬೆರೆತರು ಉತ್ತಮ ಸ್ನೇಹಿತೆಯಂತೆ
ಎಲ್ಲರೂ ತನ್ನವರೇ ಎಂಬಂತೆ ನಿನ್ನ ಈ ದೊಡ್ಡ ಸಂಸಾರದೊಳಗೆ
ನಿನ್ನ ಸಂಸಾರದ ಸದಸ್ಯರೆಲ್ಲರಿಗೂ ಅಂದಿನಿಂದ ಇಂದಿನವರೆಗೂ ಹಂಚುತ್ತಿದ್ದಾರೆ
ತನ್ನದೇ ಆದ ವಿಶಿಷ್ಟ ರೀತಿಯಲ್ಲಿ ಪ್ರೀತಿ ವಿಶ್ವಾಸದ ಗುಳಿಗೆ
ನಾನು ಅವರ ಬಗ್ಗೆ ಬರೆದ “ವಂದನೆ, ಅಭಿನಂದನೆ”, “ಸ್ನೇಹಸಂಬಂಧ”,
ವಿಶೇಷವಾಗಿ “ನಮನ” ಲೇಖನಗಳು ಮಾತ್ರವೇ,
ನನ್ನಿಂದ ಅವರಿಗೆ ಕೊಡಲು ಸಾಧ್ಯವಾದ ಕೊಡುಗೆ, ನನ್ನ ಪ್ರೀತಿಯ ಜೊತೆಗೆ
ಇಂತಹವರು ನಿಜವಾಗಲೂ ಅಪರೂಪ ಇಂದಿನ ದಿನಗಳಲ್ಲಿ ಈ ಜಗದೊಳಗೆ
“ಸೀತಮ್ಮನವರೇ” ಎಂದು ಹೃದಯಾಂತರಾಳದಿಂದ, ವಿಶ್ವಾಸದಿಂದ, ರಾಗವಾಗಿ ಕರೆಯುತ್ತಿದ್ದ ಅವರಿಗೆ

ನಿರಂತರವಾಗಿ ಇರಲಿ, ಅಮ್ಮಾ, ನಿನ್ನ ಆಶೀರ್ವಾದ ಪ್ರತಿಗಳಿಗೆ
ನನ್ನ ಈ ವಿಶೇಷ ಹಾರೈಕೆಗೆ ಕಾರಣ, ಇದು ಅವರ ಹುಟ್ಟುಹಬ್ಬದ ಶುಭಗಳಿಗೆ
**"Happy Birthday Latha".**

**19. ಸೆರೆಮನೆ**

ದಸರಾ ಹತ್ತಿರ ಬಂದಂತೆ
ನೆನಪಾಗುತ್ತಿದೆ ಪದೇ ಪದೇ
ಅತ್ತಿಗೆಯೊಡನೆ ಸಂಭ್ರಮಿಸಿ ಹೋಗುತ್ತಿದ್ದ ಅರಮನೆ
ಹಾಳು ಕರೋನ ಮಾಡಿತು
ನನಗೆ ಸ್ವಗೃಹವನ್ನೇ ಸೆರೆಮನೆ

**20. ಸ್ಫೂರ್ತಿ**

ನಮ್ಮಮ್ಮ ಹಾಡುತ್ತಿದ್ದರು ಹಾಡು ಸಾವಿರಾರು
ನಾನು ಕಲಿಯಲಿಲ್ಲ ಅದರಲ್ಲಿ ಆರು
ನಾದಾರ್ಚನೆಗಾಗಿ ಕಲಿತೆ ನೂರಾರು
ಈಗ ಕಲಿಯಬೇಕೆನಿಸುತ್ತಿದೆ ಇನ್ನೂ ಹಲವಾರು
ಇದಕ್ಕೆ ಸ್ಫೂರ್ತಿ ಲತಾ ಅಲ್ಲದೆ ಬೇರಾರು?
ಗಾದೆಮಾತಿಲ್ಲವೇ, ಹೂವಿನ ಜೊತೆಗೆ ನಾರು
ಈಗಲಾದರೂ ಬುದ್ಧಿಕೊಟ್ಟನಲ್ಲಾ ಆ ದೇವರು

**21. ಸ್ವರ**

ಬದುಕು ಆಗಬೇಕು ಸದಾ ಸಪ್ತಸ್ವರದಂತೆ
ಕೆಲವೊಮ್ಮೆ ಮಾತ್ರ ಅನುಭವವಾಗುತ್ತದೆ ಅಪಸ್ವರದಂತೆ
ನಮ್ಮ ಹಿತೈಷಿಗಳೊಡನೆ ಒಡನಾಟ ಹಾಗೂ
ಭಗವಂತನ ನಾಮಸ್ಮರಣೆ ಇದಕ್ಕೆ ಪರಿಹಾರವಂತೆ

**22. ವಂದನೆ ಅಭಿನಂದನೆ**

**ನಮ್ಮ "ಮಜಾ with ಲತಾ" ಕಾರ್ಯಕ್ರಮದಲ್ಲಿ ನನ್ನ ಮನಮೆಚ್ಚಿದ ಅನುಭವಗಳನ್ನು ಪಟ್ಟಿ ಮಾಡಬೇಕೆನಿಸಿತು.**

Point by point **ಮಾಡಿದ್ದೇನೆ 21** Point **ಗಳನ್ನು.**

- **"ಮಜಾ** with **ಲತಾ" ಕಾರ್ಯಕ್ರಮಕ್ಕೆ ಮೊದಲು ನಾಮಕರಣವಾಗಿರಲಿಲ್ಲ. ಲತನ ಸಲಹೆಯ ಮೇರೆಗೆ, ನನಗೆ ತೋಚಿದ ಸುಮಾರು 20 ಹೆಸರುಗಳನ್ನು ನಾನು ಪಟ್ಟಿ ಮಾಡಿದಾಗ, ಅದರಲ್ಲಿ ಒಂದಾದ "ಮಜಾ** with **ಲತಾ" ಅನ್ನೋ ಹೆಸರನ್ನು ಕೇಳಿ, ಸುನೀತಾ ಒಪ್ಪಿ ಸಡಗರಿಸಿದ್ದು, ನನ್ನ ನೆನಪಿನಂಗಳದಿಂದ ಅಳಿಸಿಹೋಗುವುದಿಲ್ಲ.**
- **ಗುರು ಶಿಷ್ಯರ ಸಂಬಂಧದಲ್ಲಿ ಆರಂಭವಾಗಿದ್ದನ್ನು, ತಾಯಿಮಗಳ ಸಂಬಂಧವೇನೋ ಎಂಬಂತೆ ನಮಗೆ ಅನಿಸುವಂತೆ ಮಾಡುವ, ಲತಾ ಪೂರ್ಣಿಮಾಳ ಅನುಬಂಧದ ಮಾತುಗಳು.**
- **ಸಂಬಂಧದಲ್ಲಿ ಅಕ್ಕ ತಂಗಿಯರಾದರೂ, ಪರಸ್ಪರರಿಗೆ ಮಾತೃಸ್ಥಾನ ತುಂಬಬಲ್ಲಂಥಾ, ಲತಾ ಸುನೀತನ ಮಾತುಗಳಲ್ಲಿ ಕಾಣುವ ಬಾಂಧವ್ಯ.**
- **ಎಲ್ಲರ ಮನಸ್ಸನ್ನೂ ಅತಿ ಶೀಘ್ರವಾಗಿ ತಲುಪಬಲ್ಲ, ಮನಮುದಗೊಳಿಸುವ ವಸಂತನ ಸಹೃದಯದ ಪ್ರೀತಿ ಮಾತುಗಳು.**
- **ಶಿವ ಮೆಚ್ಚುವಂತೆ, ಸತಿಪತಿಗಳೊಂದಾಗಿ ಹಾಡುವ, ಪೂರ್ಣಿಮಾ ಸ್ವಾಮಿ ಜೋಡಿಯ ಹಾಡುಗಳು.**
- **ಭಕ್ತಿಮಾರ್ಗದಲ್ಲಿ ಗುರುಗಳನ್ನು ಅನುಸರಿಸಿ, ಪೂರ್ಣಿಮಾ ಕಲಿತಿರುವ ಅನೇಕ ದೇವರ ಹಾಡುಗಳು ಮತ್ತು ಜತೆಗೆ ಕೆಲವು ಸಿನಿಮಾ ಹಾಡುಗಳು.**
- S. Saraswathi **ಯೇ ನಮ್ಮ ಗುಂಪಿನ** S. Janaki **ಎಂದು ಸುನೀತಳಿಗೆ ನಾನು ಹೇಳುವಂತೆ ಮಾಡುತ್ತಿರುವ, ಲೆಕ್ಕವಿಲ್ಲದ, ಸುಮಧುರ, ಹಿತವಾದ, ಲಾಲಿತ್ಯದಿಂದ ಕೂಡಿದ ಸುನೀತಾ ಹೇಳುವ ಹಾಡುಗಳು.**
- **ಇನ್ನೆಲ್ಲೂ ಕೇಳಿರದ, ಒಂದು ವಿಶೇಷವಾದ** Sweetness **ಇಂದ ಕೂಡಿರುವ, ಲತನ ಧ್ವನಿಯಿಂದ ಬರುವ ಹಾಡುಗಳನ್ನು, ಎಷ್ಟು ಸಲ ಕೇಳಿದರೂ, ಮತ್ತೆ ಮತ್ತೆ ಕೇಳಬೇಕೆನಿಸುವ ಭಾವನೆ.**

- ಹೆಚ್ಚಾಗಿ ದೇವರ ಹಾಡೇ ಕೇಳಿಬರುತ್ತಿದ್ದ ಈ ಕಾರ್ಯಕ್ರಮದಲ್ಲಿ, ಬರೀ ದೇವರ ಹಾಡು ಹಾಡಬೇಕೆಂಬ ನಿರ್ಬಂಧವಿಲ್ಲದೇ, ನೀನು ಏನು ಬೇಕಾದರೂ ಹಾಡು ಎಂದು ಆರಂಭದಿಂದಲೇ ತಿಳಿಸಿ, ಸಿನಿಮಾ ಹಾಡಿಗೂ ಸಹಾ ಸಮಾನ ಅವಕಾಶ ಒದಗಿಸಿಕೊಟ್ಟಿರುವ ಲತನ ಹೃದಯ ವೈಶಾಲ್ಯತೆ.
- ಹಿಂದಿನಿಂದಲೂ ಶ್ರೀಧರನ ಎದುರಿಗೆ ಆಗಾಗ್ಗೆ ಕುಳಿತು, ಆಸೆಯಿಂದ ನಾನು ಕೇಳುತ್ತಿದ್ದ ಹಾಡುಗಳು, ಹಾಳು ಕರೋನಾದಿಂದ Miss ಆಗದಂತೆ ಈಗಲೂ ಕೇಳುವ ಅವಕಾಶ.
- ನನಗೆ ಹೇಳಲು ಕಷ್ಟ, ಆದರೆ ಹಾಡು ತುಂಬಾ ಚೆನ್ನಾಗಿದೆ ಅನ್ನಿಸಿದ್ದನ್ನೆಲ್ಲಾ, ನಾನು Homework, Homework ಅಂತ ಸುನೀತಾಗೆ ಕೊಟ್ಟಾಗ, ಸಂತೋಷದಿಂದ ಅವಳು ಅದಕ್ಕೆ ಒಪ್ಪಿ, ಅದನ್ನು ಹಾಡಿ, ಎಲ್ಲರ ಪ್ರಶಂಸೆ ಪಡೆದಾಗ, ಅದು ನನ್ನ Homework ಎಂದು ನಾನು ಮಧ್ಯೆ ಬಾಯಿ ಹಾಕಿ, ಹೆಮ್ಮೆಯಿಂದ ಬೀಗುವುದು.
- ಸುನೀತಾ ಸಡಗರದಿಂದ, ತಾಳ್ಮೆಯಿಂದ ಎಲ್ಲರನ್ನೂ connect ಮಾಡುವ ಕೆಲಸ ಮಾಡುವುದು. ಏನಾದರೂ ಸಮಸ್ಯೆಗಳು ಉಂಟಾದರೆ, Call cut ಆದರೆ, ಮತ್ತೆ ಮತ್ತೆ ಉತ್ಸಾಹದಿಂದಲೇ, ಸಮಸ್ಯೆ ಪರಿಹರಿಸಿ, ನಮ್ಮೆಲ್ಲರನ್ನೂ ಒಂದುಗೂಡಿಸುವುದು.
- ಹಾಡುವುದಿರಲಿ, ಹಾಡನ್ನು ಗುನುಗುನಿಸುವುದನ್ನೂ ಸಹಾ ವರ್ಷಾನು ಕಾಲದಿಂದ, ಯಾಂತ್ರಿಕ ಜೀವನದಲ್ಲಿ ಮರೆತಿದ್ದ ನನಗೆ, ಹಾಡುವುದರ ಬಗ್ಗೆ ಆಸಕ್ತಿ ಮೂಡಿಸಿದ್ದು.
- ನನ್ನ ತೊದಲು ಹಾಡಿಗೂ ಸಹಾ ಉತ್ತೇಜನ ದೊರೆತಿರುವುದು.
- ಬರವಣಿಗೆಯ ಗಂಧ ಗಾಳಿ ಗೊತ್ತಿಲ್ಲದ ನನಗೆ, ಲೇಖನಗಳನ್ನು ಬರೆಯುವಂತೆ ಸ್ಪೂರ್ತಿ ನೀಡಿದ್ದು.
- ಬರೆದ ಬರವಣಿಗೆಗಳಿಗೆ, ಬೆನ್ನು ತಟ್ಟಿ, ಪ್ರೋತ್ಸಾಹಿಸಿದ್ದು.
- ಆದರೂ ನಾನೆಲ್ಲೋ ಎಡವಿದೆ ಎಂದು ನನಗನಿಸಿದಾಗ, ಮತ್ತೆ ನನ್ನ ಕೈಹಿಡಿದು ನಡೆಸಿದ್ದು.
- ಕರೋನಾದಂತಾ ಕಠಿಣ ಸಮಯದಲ್ಲಿ, ಸತ್ಸಂಗದ ಕಡೆ ಮನಸ್ಸು ವಾಲಿಸಿದ್ದು.
- ಚಿನ್ನಕ್ಕೆ ಮೆರಗು ಕೊಟ್ಟಂತೆ ಈಗ ಸಿಗುತ್ತಿರುವ ವಸಂತಳ ಹಾಡುಗಳು, ಕಾರ್ಯಕ್ರಮದ ಸೊಬಗನ್ನು ಇನ್ನೂ ಹೆಚ್ಚಿಸಿದ್ದು.

- ಕೆಲವು ಹಾಡುಗಳನ್ನು ನಾನು ಹಾಡಿದ ಸಂದರ್ಭದಲ್ಲಿ, ಚೆನ್ನಾಗಿತ್ತು ಎಂಬ ಪ್ರತಿಕ್ರಿಯೆ ಏನೋ ಒಂದು ರೀತಿ ಖುಷಿ ಕೊಡುತ್ತದೆ. ಆದರೆ ಆ ಖುಷಿಯಿಂದ ಮನಸ್ಸು Blank ಆಗಿ, ನಾನು ಏನೂ Reaction ಕೊಡಲಾಗುವುದಿಲ್ಲ. ಆದರೆ ಆ ಅನುಭವ ಮಾತ್ರಾ ತುಂಬಾ ಇಷ್ಟವಾಗುತ್ತದೆ. Eg: ಉಲ್ಲಾಸದ ಹೂಮಳೆ, ಇಂಥಾ ಹಾಡುಗಳು.
- ಇನ್ನೂ ಎಷ್ಟೋ ಹೇಳಬೇಕೆನಿಸಿದರೂ, ಅವೆಲ್ಲಾ, ಮಾತಿಗಾಗಲೀ, ಬರವಣಿಗೆಗಾಗಲೀ ಸಿಗದೆ, ಅನುಭವಿಸಲು ಮಾತ್ರಾ ಸಾಧ್ಯವಾಗುವಂಥಾ ಸದ್ಭಾವನೆಗಳು.

ಇಲ್ಲಿಗೆ ನನ್ನ Point ಗಳೆಲ್ಲಾ ಮುಗಿಯಿತಾದರೂ, Conclusion ಇನ್ನೂ ಉಳಿದಿದೆ. ಅದೇನೆಂದರೆ, ಒಂದು ಕಾರ್ಯಕ್ರಮದ ಯಶಸ್ಸಿಗೆ Team work ಮುಖ್ಯವಾದರೂ, Team ನ ಪ್ರತೀ ಸದಸ್ಯರೂ Involve ಆಗುವಂತೆ, ಸ್ಪೂರ್ತಿ ತುಂಬುವ ಕೆಲಸ, ತಂಡದ ನಾಯಕತ್ವ ವಹಿಸಿದವರದಾಗಿರುತ್ತದೆ. ಈ ದೆಸೆಯಲ್ಲಿ, ನಾನು, ಈ ಕಾರ್ಯಕ್ರಮದ ರೂವಾರಿ, ನನ್ನ ಪ್ರೀತಿಯ ಅತ್ತಿಗೆ ಲತಾರನ್ನು, ಆತ್ಮೀಯತೆಯಿಂದ ವಂದಿಸಲು, ಅಭಿನಂದಿಸಲು ಬಯಸುತ್ತೇನೆ, ಈ ಮಧುರ ಹಾಡಿನ ಸಾಲುಗಳ ಮೂಲಕ.

ಕಣ್ಣಗಳು ವಂದನೆ ಹೇಳಿವೆ, ಹೃದಯವು ತುಂಬಿ ಹಾಡಿದೆ, ಆಡದೆ ಉಳಿದಿಹಾ ಮಾತೂ ನೂರಿದೆ.

**Thank you, Latha, with Love, from Sandhya**

**23.** ವಿಧೇಯತೆ

ಇತ್ತೀಚೆಗೆ, ನನ್ನ ಕಣ್ಣು ಮತ್ತು ಬೆನ್ನು ನೋವು, ನನ್ನನ್ನು ಸ್ವಲ್ಪ ಹೆದರಿಸಿತು. ಬ್ರಹ್ಮ ಬರೆದಿರುವ ಆಯಸ್ಸಿನ ಬಗ್ಗೆ ನಿಖರವಾದ ಮಾಹಿತಿ ಲಭ್ಯವಿಲ್ಲದ ಕಾರಣ, ಇರೋತನಕ ಆರೋಗ್ಯವಾಗಿ ಇರಬೇಕೆಂಬ ಆಸೆಗೆ ಮಿತಿಯಿಲ್ಲ. ಆಸೆಯೇ ದುಃಖಕ್ಕೆ ಕಾರಣವಾಗುವುದೋ ಗೊತ್ತಿಲ್ಲ. ಮಾಡುತ್ತಿರುವಷ್ಟು ಮನೆ ಕೆಲಸಗಳನ್ನು ಸಹಾ ಮಾಡಲಾಗದ Useless fellow ನಾನಾದರೆ ಎಂಬ ಭಾವನೆ ನಡುಕ ಹುಟ್ಟಿಸಿತು. ಉತ್ಸಾಹದಿಂದ ಮತ್ತೆ ಮಾಡಲಾರಂಭಿಸಿದ್ದ ಬರವಣಿಗೆ ಕೆಲಸಕ್ಕಾದರೂ ವಿಶ್ರಾಂತಿ ಕೊಡು ಎಂದು ನನ್ನ ಬುದ್ಧಿ ನನಗೆ ಹೇಳಿತು. ಬುದ್ಧಿಯನ್ನೇನಾದರೂ ಭಗವಂತ ಎಲ್ಲರಿಗೂ ಸಮನಾಗಿ ಹಂಚಿದ್ದಾನೆಯೇ ಇಲ್ಲವಲ್ಲಾ ಆದ ಕಾರಣ ನಾನು, ತಾನಾಗಿಯೇ ಬರದಂಥಾ ಸಮಸ್ಯೆಗಳನ್ನು ಸಹಾ, ಸ್ವತಃ ಕೈಯ್ಯಾರೆ ಕೈಬೀಸಿ ಕರೆದು, ಸ್ವಾಗತಿಸುತ್ತಿರುತ್ತೇನೆ, ಪರಿಣಾಮದ ಅರಿವಿಲ್ಲದೇ. ಇದನ್ನೆಲ್ಲಾ ಯಾಕೆ ಕೊರೆಯುತ್ತಿದ್ದೇನೆ ಎಂದರೆ, ನನ್ನ ತಪ್ಪು ನಿರ್ಧಾರದಿಂದ ಎಷ್ಟೋ ಲೇಖನಗಳನ್ನು ಬರೆಯುವುದು Miss ಆಯಿತೇನೋ ಎನಿಸುತ್ತಿದೆ ಈಗ. "ಮಿಂಚಿಹೋದ ಕಾರ್ಯಕ್ಕೆ ಚಿಂತಿಸಿ ಫಲವಿಲ್ಲ" ಎಂಬ ಮಾತನ್ನು, ಇಡೀ ಜೀವನದಲ್ಲಿ, Apply ಮಾಡುತ್ತಾ

ಬರುತ್ತಿದ್ದೇನೆಯೇ ಹೊರತು, ಮೊದಲೇ ಸರಿಯಾಗಿ Plan ಮಾಡುವ ಪ್ರಯತ್ನ ಮಾಡುವುದನ್ನು ಕಲಿಯಲೇ ಇಲ್ಲ. ಇದೆಲ್ಲವೂ ವಿಧಿಲಿಖಿತ ಎಂದು ಸಮಾಧಾನ ಮಾಡಿಕೊಂಡರೆ, ನನ್ನ ಪೆದ್ದು ಬುದ್ಧಿಯನ್ನು ಇತರರಿಗೆ ಗೋಚರಿಸದಂತಾದರೂ ಕಾಪಾಡಿಕೊಳ್ಳಬಹುದು. ಇದೆಲ್ಲಾ ಇದ್ದಿದ್ದೇ ಇರಲಿ ಬಿಡಿ. ಈಗ ನನಗೆ ನಿಮ್ಮ ಜೊತೆ ಒಂದು ವಿಚಾರ ಹಂಚಿಕೊಳ್ಳಬೇಕೆನಿಸಿದೆ. ಅದೇನೆಂದರೆ, ನಿವೃತ್ತಿಯ ವಯಸ್ಸು ಮೀರಿದ್ದರೂ, ಕಿರಿಯರಿಗಿಂತಲೂ ಹತ್ತುಪಟ್ಟು ಹೆಚ್ಚಾಗಿ ಉತ್ಸಾಹದಿಂದ ಕೆಲಸ ಮಾಡುತ್ತಿದ್ದ ನನಗೆ, ಈ ಕರೋನಾ ಶಾಲೆಗೆ ಹೋಗದಂತೆ ಮಾಡಿತು. ಸ್ವಂತವಾಗಿ ಗಾಡಿ ಓಡಿಸಲು ಬರಲ್ಲ, Walkable distance ನಲ್ಲಿ ಶಾಲೆ ಇಲ್ಲ, Public Transport ನನ್ನ ಗಾಬರಿ ಸ್ವಭಾವಕ್ಕೆ suit ಆಗಲ್ಲ, ಜತೆಗೆ, ಮನೆಯ ಸದಸ್ಯರಿಂದ Stay at Home ನಿಯಮ ಪಾಲಿಸಬೇಕೆಂಬ ನಿರ್ದೇಶನ, ಇದೆಲ್ಲದರಿಂದ ಶಾಲೆಯ ಸಂಪರ್ಕದ ಕೊಂಡಿ ಕಳಚಿ ಬಿತ್ತು. ನೆನ್ನೆ ಸಂಜೆ ನಮ್ಮ Principal ನನಗೆ ಶಾಲೆಗೆ ಸಂಬಂಧಿಸಿದ ಯಾವುದೋ ವಿಚಾರಕ್ಕಾಗಿ Phone ಮಾಡಿದ್ದರು. ಲೋಕಾಭಿರಾಮವಾಗಿ ಮಾತಾಡುತ್ತಾ ಕೇಳಿದರು, ಹೇಗೆ ಮನೆಯಲ್ಲಿ Time pass ಮಾಡುತ್ತಿದ್ದೀರಿ ಎಂದು. ಇದು ಸಹಜವಾದ ಪ್ರಶ್ನೆಯೇ ಆದರೂ, ಏನು ಮಾಡಲಿ ಎಂದು ಯೋಚಿಸುವಂಥ ಸಂದರ್ಭವೇನೂ ಇನ್ನೂ ನನ್ನ ಪಾಲಿಗೆ ಬಂದಿಲ್ಲ, ಎಂದು ಹೇಳಿ, ಮಾಡುತ್ತಿರುವ ಕೆಲಸದ ಪಟ್ಟಿಯನ್ನು ನೀಡಬಹುದಾಗಿತ್ತು. ಆದರೂ, ಏಕೋ ಮನಸ್ಸು ಹಾಗೆ ಹೇಳಲು ನಿರಾಕರಿಸಿತು. Solution ಸಿಗದ Problem, Especially Invited Problem ಬಗ್ಗೆ ಚಿಂತೆ ಮಾಡುತ್ತಾ ಇರುತ್ತೀನಿ ಎಂದು ಎರಡನೇ ಸತ್ಯವನ್ನಾದರೂ ಹೇಳಬಹುದಾಗಿತ್ತು. ಯಾಕೋ ಅನಗತ್ಯ ಎನಿಸಿತು. ನನ್ನ ಘನತೆಯನ್ನು ಹೆಚ್ಚಿಸಿಕೊಳ್ಳುವ ಸಲುವಾಗಿಯೋ, ಅಥವಾ ಹೆಚ್ಚು Scope ತೆಗೆದುಕೊಳ್ಳಲು ಹೋಗಿದ್ದಕ್ಕೋ ಗೊತ್ತಿಲ್ಲ, "Sir, ನಾನು ಈಗ ಕೆಲವು Article ಗಳನ್ನು ಬರೆದೆ. ಸಿನಿಮಾ ಹಾಡು, ದೇವರ ಹಾಡುಗಳನ್ನು ಕಲಿತೆ" ಎಂದೆ. ತಕ್ಷಣ ಅವರು ಉತ್ಸಾಹದಿಂದ ಲೇಖನಗಳ ಬಗ್ಗೆ ಕೇಳಿದರು. ನಾನೂ ಅತ್ಯುತ್ಸಾಹದಿಂದ "ಮದುವೆ" ಮೊದಲ ಲೇಖನವಾದರೆ, "ಬುದ್ಧಿವಾದ, ಮಾತೃಸ್ಥಾನ, ಮೌನ" ಎಂಬುದು ಅನಂತರದ್ದು ಎಂದೆಲ್ಲಾ ಹೇಳಿದೆ. "ಲೇಖನಗಳ ಪುಟಗಳೆಷ್ಟು?" ಎಂದರು. "ಅಯ್ಯೋ, ಅದೆಲ್ಲಾ ಲೆಕ್ಕ ಇಲ್ಲವೇ ಇಲ್ಲ, ಕೆಲವು ಚಿಕ್ಕದು, ಕೆಲವು ದೊಡ್ಡದು, ಮನಸ್ಸಿಗೆ ಬಂದ ಹಾಗೆ" ಎಂದೆ. ಅವರು ನಗುತ್ತಾ, "ಮೇಡಂ, ನನ್ನ ಬಗ್ಗೆಯೂ ಒಂದು ಲೇಖನ ಬರೆಯಿರಿ" ಎಂದರು. ತಕ್ಷಣ ಗಾಬರಿಗೊಂಡು, "Sir, ನೀವು ಅದರಲ್ಲೆಲ್ಲಾ ಅತ್ಯಂತ ಪರಿಣತಿ ಹೊಂದಿರುವವರು, ನಾನು ಸುಮ್ಮನೆ, ನನ್ನ Feelings ನ, ನನಗೆ ತೋಚಿದ ಹಾಗೆ Express ಮಾಡುತ್ತಾ ಹೋಗುತ್ತೇನೆ ಹೊರತು, ಬರವಣಿಗೆಯ ಬಗ್ಗೆ, ಹಾಗೂ ಅದಕ್ಕೆ ಬೇಕಾದಂಥಾ ಅಗತ್ಯ ಜ್ಞಾನ ಸ್ವಲ್ಪವೂ ಇಲ್ಲ" ಎಂದು ಉತ್ತರಿಸಿದೆ. ಅದಕ್ಕೆ ಅವರು "ಪರವಾಗಿಲ್ಲ, ಅಷ್ಟೇ ಸಾಕು, ಆದರೆ, ನೀವು ಈಗಲೇ ಬರೆಯಲು ಖಂಡಿತಾ ಆರಂಭಿಸಲೇ ಬೇಕು" ಎಂದರು. ಅವರ ಮಾತನ್ನಾಗಲೀ,

ಆದೇಶವನ್ನಾಗಲೀ, ಇಡೀ Service ನಲ್ಲಿ ಎಂದೂ, ಉಲ್ಲಂಘಿಸದೇ, ಮನಃಪೂರ್ವಕವಾಗಿ, ಸ್ವ ಇಚ್ಛೆಯಿಂದ, ಸದಾ ವಿಧೇಯಳಾಗಿಯೇ ನಡೆದುಕೊಂಡಿದ್ದುದರ ಪರಿಣಾಮವೋ ಏನೋ, ಕಾಣೆ, ಮನಸ್ಸು, ಶಾಲೆಯ ದಿನಗಳನ್ನು ಮೆಲುಕು ಹಾಕಿ, ಬರವಣಿಗೆಗೆ ಬೇಕಾದ ಅನೇಕ ಅಂಶಗಳನ್ನು ಕಲೆಹಾಕಲು ಪ್ರಾರಂಭಿಸಿತು. ಕೈ ಲೇಖನಿ ಹಿಡಿದುಕೊಂಡಿತು. ಅಂತಿಮವಾಗಿ ಸಿದ್ಧವಾಯಿತು, ಶೀರ್ಷಿಕೆ, "ನಾ ಕಂಡಂತೆ ಪ್ರಾಂಶುಪಾಲರು".

ಲೇಖನ ಆರಂಭಿಸಿದ್ದೇನೆ, ಅತ್ಯುತ್ತಮವಾಗಿ ಮೂಡಿಬರಲಿ ಎಂಬ ಆಸೆ ಬೆಟ್ಟದಷ್ಟು ಇದ್ದರೂ, ಆಸೆ ಫಲಿಸುವಷ್ಟು ಸಾಮರ್ಥ್ಯವೂ ಬೇಕಲ್ಲವೇ? ಕುವೆಂಪುರವರ ಕಿಂದರಿ ಜೋಗಿ ಹಾಡಿನಲ್ಲಿ ಬರುವ, ಶೆಟ್ಟರ ಪರಿಸ್ಥಿತಿಯನ್ನು ವರ್ಣಿಸಿರುವ ಸಾಲುಗಳು ಅಪ್ರಯತ್ನವಾಗಿ ನೆನಪಾಗುತ್ತಿದೆ.

"ಮೆದಳನು ನೀಡದೆ ತಲೆಯನು ಮಾಡಿದ ಕಮಲಜನನ್ನು ಬೈದಾಡಿದರು,
ಬುದ್ಧಿಯ ದಯಪಾಲಿಸು ಎಂದು ವಾಣಿಯ ಪರಿ ಪರಿ ಬೇಡಿದರು".

## 24. ವಿವೇಕ

ವಿವೇಕಶೂನ್ಯರಿಗೆ, ನನ್ನ ವಿವೇಕದಿಂದ ಸಂಪೂರ್ಣ ಪ್ರಮಾಣದ ವಿವೇಕಸ್ಥರನ್ನಾಗಿ ಮಾಡ ಹೊರಟ ನನಗೆ, ಒಮ್ಮೊಮ್ಮೆ ಮನಸ್ಸಿನ ಮೂಲೆಯಲ್ಲೊಂದು ಸಂಶಯ ಕಾಡುತ್ತದೆ, ಅದು ನಾನೆಷ್ಟು ಅವಿವೇಕಿ ಎಂದು. ಆದರೂ ಇನ್ನೊಮ್ಮೆ ಮನಸ್ಸು ಎಚ್ಚರಿಸುತ್ತದೆ, ಪ್ರಯತ್ನ ವಿಫಲವಾದಲ್ಲಿ, ಮರಳಿ ಯತ್ನವ ಮಾಡೆಂದು.

Supplementary ಯಲ್ಲೂ Pass ಆದವರು, ಲೋಕದಲ್ಲಿ ಇದ್ದಾರೆಂದು.

ಲತಾ ಮತ್ತು ಸಂಗಡಿಗರ ನಗು ಇದಕ್ಕೆ ದೊರೆತಾಗ, ಮನಸ್ಸು ಹೇಳುತ್ತದೆ, ಬರವಣಿಗೆ ಸಾರ್ಥಕವಾಯಿತೆಂದು.



ನಾದಾರ್ಚನೆ ತಂಡದ ಮುಖ್ಯಸ್ಥರಾದ ಲತಾರವರು ಬರೆದ ಲೇಖನಗಳಲ್ಲಿ ನಾವು ಒಂದು ವಿಶಿಷ್ಟವಾದ ಶೈಲಿಯನ್ನು ಕಾಣಬಹುದು. ಅವರ ಲೇಖನಗಳು, ಜೀವನದ ಒಂದು ವಿಭಿನ್ನ ದೃಷ್ಟಿಕೋನವನ್ನು ನಮಗೆ ಪರಿಚಯಿಸುತ್ತವೆ. ಪಕ್ಷಪಾತವಿಲ್ಲದೆ ಬರೆಯುವ ರೀತಿ, ದ್ವಂದ್ವ, ಗೊಂದಲವಿಲ್ಲದ ಯೋಚನಾ ಲಹರಿಯನ್ನು ಇವರ ಬರಹಗಳಲ್ಲಿ ಕಾಣಬಹುದು.

**1. ಪತಿ, ಪತ್ನಿ ಔರ್** Woh

Amazon prime video ನಲ್ಲಿ, ಯಾವುದಾದರೂ ಸಿನಿಮಾ ನೋಡೋಣ ಅಂತ search ಮಾಡ್ತಾ ಇದ್ದರೆ, Good News, War, The Family Man, Guest in London, ಶುಭ್ ಮಂಗಲ್ ಜ್ಯಾದಾ ಸಾವ್ಧಾನ್ ಈ ತರಹಾ, ಎಷ್ಟೋ ಸಿನಿಮಾಗಳ ಹೆಸರುಗಳು ಬರ್ತಾ ಇತ್ತು. ಅದರ ಜೊತೆ ಪತಿ ಪತ್ನಿ ಔರ್ Woh ಅಂತ ಕಾಣ್ತು. ಹೆಸರು Familiar ಅನ್ನಿಸ್ತು. ನೆನಪುಗಳನ್ನು ಕೊಡವಿದಾಗ, ಸುಮಾರು ನಲವತ್ತು ವರುಷಗಳ ಹಿಂದೆ ಇದೇ ಹೆಸರಿನ ಸಿನಿಮಾ ನೋಡಿದ್ದು ಜ್ಞಾಪಕಕ್ಕೆ ಬಂತು. ಸರಿ, ಸಿನಿಮಾ ನೋಡೇಬಿಡೋಣ ಅಂತ ಶುರು ಮಾಡಿದ್ದಾಯಿತು. ಪೂರ್ತಿ ನೋಡಿ ಆದಮೇಲೆ, ಒಂದು ಸಲ ಮತ್ತೆ, ಹಳೇ ಪತಿ ಪತ್ನಿ ಔರ್ Woh ನೋಡೋಣ ಅನ್ನಿಸಿ, ಮತ್ತೆ ನೋಡಿದರೆ, ಕಥೆಯ Outline, More or less, Similar ಎನ್ನಿಸಿತು. Solution ಕೊಟ್ಟಿರೋ ರೀತಿ ಮಾತ್ರ ಸ್ವಲ್ಪ Different, ಅಷ್ಟೆ. ಎರಡರಲ್ಲೂ, ಪತಿ, ಪತ್ನಿ ಕಡೆಯಲ್ಲಿ ಜೊತೆಯಾಗಿ, ಸುಖಮಯ ಜೀವನ ನಡೆಸಿದಂತೆ ತೋರಿಸಲಾಗಿತ್ತು. ಮೊದಲು, ಕಾಲಕ್ಕೆ ತಕ್ಕಂತೆ ಬದಲಾಯಿಸಿ ತೆಗೆದಿದ್ದಾರೆ, ಪರವಾಗಿಲ್ಲ ಅಂತ ಅನ್ನಿಸಿದರೂ, ಆಳವಾಗಿ ಯೋಚಿಸಿದಾಗ, ನಲವತ್ತು ವರ್ಷಗಳಾದರೂ, ಇಷ್ಟೇನೇ ಬದಲಾವಣೆ, ಎನ್ನಿಸಿತು. ಹತ್ತು ವರ್ಷ, ಐದು ವರ್ಷಕ್ಕೆಲ್ಲಾ Generation Gap, Thinking Difference ಅಂತೆಲ್ಲಾ ಹೇಳ್ತಾರಲ್ಲಾ, ನಲವತ್ತು ವರ್ಷಕ್ಕೆ ಹಾಗಾದರೆ ಎಷ್ಟಿರಬೇಕಿತ್ತು? ಎನ್ನಿಸಿತು. ನನಗೆ ಮದುವೆಯಾದ ಹೊಸತರಲ್ಲಿ, ನಲವತ್ತನಾಲ್ಕು ವರ್ಷಗಳ ಹಿಂದೆ, In fact ಮದುವೆಗೆ ಮುಂಚಿನಿಂದಲೂ "Woh" ಅನ್ನೋದು ಒಂದು Young Female Character ಅನ್ಕೊಂಡಿದ್ದೆ. ನಿಜ ಹೇಳಬೇಕೆಂದರೆ, "Woh" ಅನ್ನೋದು Young Female Character ಅಥವಾ ಒಂದು Human Being ಆಗಬೇಕು ಅಂತ ಯಾವ ರೂಲ್ ಇಲ್ಲ. ನಿಜಜೀವನದಲ್ಲಿ, there are infinitely many "Woh"s. (Woe, ಅಂತಾನೂ ಇಟ್ಕೊಳ್ಳಿ). Woh1, Woh2, Woh3..... ಹೀಗೆ, Life ನ Different, Different Stageಗಳಲ್ಲಿ, ತರಾವರಿ "Woh"ಗಳು ಎದುರಾಗುತ್ತವೆ. "Woh" can also be a Habit, Thing, Place, etc. ಸಾಮಾನ್ಯವಾಗಿ "Woh" ಪಟ್ಟ, ಪತಿದೇವರ ತಾಯಿಗೆ ಮೊದಲು ಸಿಗುತ್ತದೆ. ತಮ್ಮ ಜೀವನದ ಮೊದಲ ಇಪ್ಪತ್ತೈದು ಮುವ್ವತ್ತು ವರ್ಷ, ತಾಯಿಯೊಡನೆ ಇದ್ದ ಮಗನ ಮೇಲೆ, ತಾಯಿಯ Influence ಸ್ವಲ್ಪ Strong ಆಗಿ ಇರುತ್ತದೆ. ಜೊತೆಗೆ ಆ

ಕಾಲದಲ್ಲಿ External Influence ಸಹಾ ಕಮ್ಮಿ ಇರುತ್ತದೆ. ಹಾಗೆಯೇ, ನನ್ನ ತಾಯಿಯೂ "Woh" ಆಗಬಹುದು. ಯಾಕೆ ಅಂತೀರಾ? ಅವರು ನನಗಿಂತ ಒಂದು ಇಪ್ಪತ್ತು ವರ್ಷ ದೊಡ್ಡವರಾಗಿರುತ್ತಾರಲ್ಲವೆ? ಅವರು ಪತಿಯನ್ನ ನೋಡಿಕೊಳ್ಳುವ ರೀತಿ, ಅವರ ನಡವಳಿಕೆ ಎಲ್ಲಾ ನಮ್ಮ ಪತಿದೇವರಿಗೆ ತುಂಬಾ ಇಷ್ಟ ಆಗ್ತಾ ಇರತ್ತೆ. Changing scenario ಅವರ ತಲೆಗೆ ತುರುಕೋದು ಸ್ವಲ್ಪ ಕಷ್ಟ. Woh2, Woh3 ಗಳು ಪತಿದೇವರ ಅಣ್ಣ, ತಮ್ಮ, ಅಕ್ಕ, ತಂಗಿ, ಸ್ನೇಹಿತರು, ಹೀಗೆ ಯಾರು ಬೇಕಾದರೂ ಆಗಬಹುದು. ಸಾಧಾರಣವಾಗಿ ಮನೆಯ ಕಾರೂ ಒಂದು "Woh" ಆಗಿಬಿಡತ್ತೆ. ಅದರ ಮೇಲಿರುವಷ್ಟು ಕಾಳಜಿ ಇನ್ಯಾತರ ಮೇಲೂ ಇರಲ್ಲ. ಇದಲ್ಲದೆ, ದೇವಸ್ಥಾನ, ಕ್ಲಬ್ಬು ಹೀಗೆ ಬೇಕಾದಷ್ಟು "Woh" ಗಳಿರುತ್ತವೆ. ಈ "Woh" ಗಳ ಕಾಟ ಪತ್ನಿಗೆ ಮಾತ್ರ ಅಲ್ಲ, ಪತಿಗೂ ಇರತ್ತೆ. ಸ್ವಲ್ಪ ಬೇರೆ ತರಹಾ ಅಷ್ಟೆ. ನಮಗೂ ಸಹಾ ಇನ್ಯಾರದೋ ಜೀವನದಲ್ಲಿ "Woh" ಪಟ್ಟ ಸಿಕ್ಕಿರಬಹುದಲ್ಲವೇ? ಏನಂತೀರ?

## 2. FORMAT

ನನ್ನ Student PhD Thesis Correction ಶುರು ಮಾಡಿದ್ದೆ. Complete Thesis, ಒಂದು ದೊಡ್ಡ File ಬಂತು. ನಾನು, Chapter wise Correct ಮಾಡೋದು ಸುಲಭ, Chapter wise separate ಮಾಡಿ ಕಳಿಸು, ಅಂತ mail ಮಾಡಿದೆ. ಸರಿ, ಎರಡು Chapter ಬಂತು. ಒಂದೆರಡು ದಿನ ಬಿಟ್ಟು Correct ಮಾಡೋಣ ಅಂತ mail Box ನಿಂದ Acrobat ಗೆ Import ಮಾಡಿ, iPad ನಲ್ಲಿ ಶುರು ಮಾಡಿದೆ. Comment ಹಾಕೋಣ ಅಂತ ನೋಡಿದರೆ, Highlight ಆಗಲಿಲ್ಲ. Underline ಆಗಲಿಲ್ಲ. Text ಹಾಕಕ್ಕೆ ಆಗಲಿಲ್ಲ. ಅವತ್ತಿಗೆ ನಿಲ್ಲಿಸಿಬಿಟ್ಟು, ಮತ್ತೆ ಎರಡು ದಿನ ಬಿಟ್ಟು ಮಾಡಿದರೆ ಮತ್ತೆ ಅದೇ ಕಥೆ. ಇನ್ನೂ ಒಂದು ಸಲ ಪ್ರಯತ್ನ ಪಟ್ಟು, ಸೋತು, ಮಗಳನ್ನ ಕೇಳಿದೆ. ಅವಳು, App ನ Phone ಗೆ ಹಾಕಿ ನೋಡಮ್ಮಾ ಅಂದ್ಲು. Phone ಗೆ App ನ Download ಮಾಡಿ, ನನ್ನ ಇನ್ನೊಂದು Student ಕಳಿಸಿದ Paper ನೋಡಿದರೆ, Comment Work ಆಗ್ತಿದೆ! ಮತ್ತೊಮ್ಮೆ , iPad ನಲ್ಲಿ App ನ Delete ಮಾಡಿ, Re install ಮಾಡಿ, ಪ್ರಯತ್ನಿಸಿದರೆ, ಮತ್ತೆ ಅದೇ ಕಥೆ. Engineer ತಂಗಿ Phone ಮಾಡಿದಾಗ ಅವಳ ಸಲಹೆ ಕೇಳಿದೆ. ಅವಳು, ಈ Acrobat ಎಲ್ಲಾ ನಾನು Use ಮಾಡಿಲ್ಲವಲ್ಲಾ, ಎಂದಳು. ಅದೇ ಬೇಜಾರಿನಲ್ಲಿ, iPad ನಲ್ಲಿ , ನನ್ನ ಇನ್ನೊಂದು Student ಕಳಿಸಿದ್ದ Paper ನೋಡಿದರೆ, Comment ಬರ್ತಾ ಇತ್ತು. ಆಗ Flash ಆಯಿತು. Mostly Format Change ಆಗಿರಬಹುದು ಅಂತ. PhD Student ಗೆ mail ಮಾಡಿದೆ. "ನೀನು ಕಳಿಸಿರೋ Thesis ದು Format ಏನಾದರೂ Change ಆಗಿದೆಯಾ? ಏಕೆಂದರೆ, ಬೇರೆ Student ಕಳಿಸಿರುವ Paper ನ, Correct ಮಾಡಲು ಸಾಧ್ಯವಾಗುತ್ತಿದೆ,

ನಿಮ್ಮದು ಮಾತ್ರ ಆಗ್ತಿಲ್ಲ, ಸ್ವಲ್ಪ ನೋಡಿ" ಎಂದು. ನಂತರ ಅವನು ನೋಡಿ, Change ಮಾಡಿ, ಕಳಿಸಿದ. ಎಲ್ಲಾ ಚೆನ್ನಾಗಿ Work ಆಯಿತು.

Moral of this Episode: ನಾವು ಎಷ್ಟೇ ಎದುರಿನೋರಿಗೆ Comment ಕೊಡಕ್ಕೆ ಪ್ರಯತ್ನ ಮಾಡಿದರೂ, ಅವರ Format ಸರಿ ಇಲ್ಲದಿದ್ದರೆ ಏನೂ ಪ್ರಯೋಜನವೂ ಆಗಲ್ಲ, Correction ಸಾಧ್ಯವೂ ಇಲ್ಲ. ಶಿವಾನಿ, ಸದ್ಗುರು, ಚಾಗಂಟಿಯವರು, ಇಂತಹಾ ಮಹಾತ್ಮರ ಪ್ರವಚನಗಳನ್ನು ಎಷ್ಟೇ ಕೇಳಿದರೂ, ನಮ್ಮ Format ಸರಿ ಇಲ್ಲದಿದ್ದರೆ? ನಾವು ಜೀವನದಲ್ಲಿ ಎಷ್ಟೋ ಸಲ ಈ ತರಹದ Situation Face ಮಾಡಿರ್ತೀವಿ, ಏನಂತೀರ?

### 3. CRACKS ON FEET

Krack Heel repair, Anti crack Foot protector ಹೀಗೆ, ಬೇಕಾದಷ್ಟು Cream ಗಳು, Callus remover Brush ಗಳು, Machine ಗಳು, Pedicure aids, ಇಂತಹಾ ಅನೇಕ Product ಗಳನ್ನು ನಾವು ನೋಡ್ತಾ ಇರ್ತೀವಿ. ಕಾಲಿನ ಹಿಮ್ಮಡಿ ಒಡೆದಿದ್ದಾಗ, ಅದರೊಳಗೆ ಮತ್ತೆ Dust etc ಹೋದ್ರೆ, ಇನ್ನೂ ಒಡೆಯೋದು ಜಾಸ್ತಿ ಆಗತ್ತೆ. Most ideal situation ಏನಂದ್ರೆ, Full clean and nice ಆಗಿದ್ದು, ಅದರೊಳಕ್ಕೆ Dust etc ಹೋಗಕ್ಕೆ ಆಸ್ಪದ ಇಲ್ಲದಿರುವುದು. ನನಗೆ ಶಿವಾನಿ, ಸದ್ಗುರು ಇಂತಹಾ ಮಹಾತ್ಮರ ಪ್ರವಚನಗಳನ್ನ ಕೇಳಿದಾಗೆಲ್ಲಾ ಅವರು, ನಮಗೆ ಇಂತಹಾ ಉದಾಹರಣೆಗಳನ್ನ ಕೊಟ್ಟು, ನಮ್ಮ ಮನಸ್ಸನ್ನ ಚೆನ್ನಾಗಿ ಇಟ್ಟುಕೊಳ್ಳಕ್ಕೆ ಹೇಳಬಹುದಲ್ಲಾ ಅನ್ನಿಸುತ್ತೆ. ಯಾಕೆಂದರೆ, ಯಾರ ಅಥವಾ ಯಾವ ವಿಚಾರಕ್ಕಾದರೂ ಮನಸ್ಸು ಒಡೆದಿದ್ರೆ, ಅವರ ವಿಷಯದಲ್ಲಿ, ಧೂಳಿನಂತೆ ಇನ್ನಷ್ಟು Negative ಯೋಚನೆಗಳು ಬಂದು ತುಂಬಿಕೊಳ್ಳುತ್ತವೆ. Cream ಹಚ್ಚಿಕೊಳ್ಳೋಣ ಅಂದ್ರೆ, ಜಿಡ್ಡುಮಯ, ಕಾಲು ಕೆಳಗೆ ಇಟ್ಟು ನಡೆಯೋಕ್ಕಾಗಲ್ಲ, ಮಲಗಿದ್ರೆ, ಹಾಸಿಗೆಯೆಲ್ಲಾ Cream ಆಗತ್ತೆ. Avoid ಮಾಡಲು, ಕಾಲಿಗೊಂದು Cover ಹಾಕಬೇಕಾಗತ್ತೆ, ಬಿಸಿನೀರಿಗೆ, ಉಪ್ಪು, ಶಾಂಪು ಹಾಕಿ ತೊಳೆದರೆ, ನೆಲಕ್ಕೆ ಕಾಲಿಟ್ಟ ಕೂಡಲೇ ಧೂಳು ಮೆತ್ತಿಕೊಳ್ಳತ್ತೆ. ಸದಾ ಚಪ್ಪಲಿ ಹಾಕಿ ನಡೆದರೆ, ಅದೂ ಒಳ್ಳೆಯದಲ್ಲ. ಬರೀ ಕಾಲಲ್ಲಿ, ಹುಲ್ಲಿನ ಮೇಲೆ, ಕಲ್ಲುಗಳ ಮೇಲೆ ನಡೆದರೆ, Acupressure ಹಾಗೆ ಕೆಲಸ ಮಾಡಿ, ತುಂಬಾ ಒಳ್ಳೇದಾಗತ್ತೆ ಎನ್ನುವ ಸಲಹೆಗಳು. ಮನಸ್ಸಿಗೆ ಮತ್ತು ಅಂಗಾಲಿಗೆ ಎಷ್ಟು Similarity ಇದೆಯೋ ನೋಡಿ. ಬಿರುಕು ಬಿಟ್ಟಿರುವ ಮನಸ್ಸಿಗೆ ಮುಲಾಮು ಹಚ್ಚಬೇಕು ಅಂದ್ರೆ ಅದಕ್ಕೂ ಸರಿಯಾಗಿ Definition ಇಲ್ಲ. ಒಬ್ಬೊಬ್ಬರಿಗೆ ಒಂದೊಂದು ಮುಲಾಮು ಕೆಲಸ ಮಾಡತ್ತೆ, Like, Meditation, Self-analysis, Positive Thinking, Temple visits, Travelling, Shopping ಹೀಗೆ. ಇಷ್ಟು ಸರಿ, ತುಂಬಾ ಚೆನ್ನಾಗಿ ಪಾದ Clean ಇಟ್ಟುಕೊಂಡ್ರೆ, ಸಣ್ಣ ಕಲ್ಲಿನ ಮೇಲೆ ಕಾಲಿಟ್ಟರೂ ಬ್ರಹ್ಮಾಂಡವಾದ ನೋವು ಬರತ್ತೆ. ಒಡೆದಿರೋ ಕಾಲಿನಲ್ಲಿ ಈ ಸಣ್ಣ ಚೂರು ಒಳಕ್ಕೇ ಹೊರಟುಹೋಗತ್ತೆ

ಅಲ್ಲವಾ? ಮನಸ್ಸನ್ನೂ ವಿಪರೀತ Clean ಮಾಡಿದರೆ, ಸಣ್ಣ ಸಣ್ಣ ವಿಷಯಗಳೂ ವಿಪರೀತ ನೋವು ಕೊಡತ್ತೇನೋ? ಏನಂತೀರ?

## 4. SIDE REACTIONS

Ayurvedic, Homeopathy Medicine ಪದ್ಧತಿಗಳಲ್ಲಿ Side reaction ಗಳು ಇರಲ್ಲ ಅಂತಾರೆ. ಇದು ಪಂಡಿತ ಪಾಮರಾದಿಗಳೆಲ್ಲಾ ಆಡುವ ಮಾತು. Allopathy ಪದ್ಧತಿಯ Side reaction ವಿಷಯ ಎಲ್ಲರಿಗೂ ಗೊತ್ತು. ಸುಮಾರು ಜನರಿಗೆ ಔಷದಿಗಳು ಮತ್ತು ಅವುಗಳ Side reaction ಗಳು ಅನುಭವವೇದ್ಯ. ಈಗಂತೂ ವೈದ್ಯರೇ Side reaction ಬಗ್ಗೆ ತಿಳಿಸ್ತಾರೆ. ಇಷ್ಟಾದರೂ . Allopathy ಏಕೆ Popular ಆಯ್ತು? Probably, ಅದರ Quick Reaction ಮತ್ತು Response ಗಳ ಕಾರಣದಿಂದ ಇರಬಹುದು. ಯಾವಾಗ Reaction ಮತ್ತು Remedy ತುಂಬಾ Quick ಆಗಿ ಆಗತ್ತೋ, Side reaction ಸಹಾ Quick ಆಗತ್ತಲ್ಲವೇ? ತಕ್ಷಣ, ಇದರಿಂದಾನೇ ಅಂತ ಗೊತ್ತಾಗೋ ಅಷ್ಟು Quick ಆಗಿ ಆಗತ್ತೆ. ಸಾಧಾರಣವಾಗಿ ಗೊತ್ತಾಗಿ, ಮತ್ತೆ ಅದಕ್ಕೂ ಔಷದಿ ತೊಗೊಂಡಿದ್ದುಂಟು. ಆದರೇ Ayurvedic, Homeopathy Medicine ಪದ್ಧತಿಗಳಲ್ಲಿ Quick Reaction ಇಲ್ಲ. ವೈದ್ಯರೇ ಹೇಳ್ತಾರೆ, ಇದು ನಿಧಾನವಾಗಿ ಕೆಲಸ ಮಾಡತ್ತೆ ಮತ್ತು ಕಾಯಿಲೆಯನ್ನು ಬೇರು ಸಮೇತ ಹೋಗಲಾಡಿಸತ್ತೆ. Side reaction ಗಳು ಇರುವುದಿಲ್ಲ ಅಂತಾರೆ. Ayurvedic, Homeopathy Medicine ಗಳು ಕೆಲಸ ಮಾಡಲ್ಲ ಅಂತ ನಾನು ಹೇಳ್ತಿಲ್ಲ. ಅದಕ್ಕೆ, ಪಥ್ಯದ ಅವಶ್ಯಕತೆ ಸಹಾ ಇದೆ. ವಾತ, ಪಿತ್ತ, ಕಫ ಈ ತರಹ Distinguish ಮಾಡಿ, ಕೆಲವು ಆಹಾರಗಳನ್ನು ತಿನ್ನಬೇಡಿ ಅಂತ ಹೇಳೋದು ಉಂಟು. Ayurvedic, Homeopathy Medicine ನಲ್ಲಿ ಕಾಯಿಲೆ ವಾಸಿ ಆಗತ್ತೆ, ನಿಧಾನವಾಗಿಯಾದರೂ ಸರಿ, ನಿಜ, ಆದರೆ Side reaction, ಇಲ್ಲ ಅನ್ನುವುದರ ಬಗ್ಗೆ ನನಗೆ Doubt ಗಳಿವೆ. Side reaction ಸಹಾ ಎಷ್ಟು ನಿಧಾನ ಅಂದ್ರೆ ನಮಗೆ ಇದೇ Medicine ನಿಂದ ಬಂದಿದೆ ಅಂತ ಗೊತ್ತಾಗದೇ ಇರುವಷ್ಟು ನಿಧಾನ. ತುಂಬಾ ಸಮಯ ನಾವು ಈ Medication ನಲ್ಲಿ ಇರೋದರಿಂದ ಮತ್ತು ಈ ಸಮಯದಲ್ಲಿ ಬೇರೇ ತರಹದ Exposure ಆಗಿರೋದ್ರಿಂದ, Ayurvedic, Homeopathy Medicine ನಿಂದಾನೇ ಈ Side reaction ಅಂತ ಹೇಳಕ್ಕೆ ಆಗಲ್ಲ. ಯಾವಾಗಲೂ,

ACTIONS AND SIDE REACTIONS ARE EQUAL AND OPPOSITE, ಏನಂತೀರ?

5. ನಾದಾರ್ಚನೆಯ ಮೊದಲ ವರ್ಷ- ಒಂದು ಹಿನ್ನೋಟ

"ನಾದಾರ್ಚನೆ", ನಮ್ಮೆಲ್ಲರಿಗೂ ಮುದ ನೀಡುತ್ತಿರುವ ಎಂಟು ತಿಂಗಳ ಪುಟ್ಟ ಕಂದ. ಇದರ ಜನನವಾಗಿದ್ದು, ಕರೋನಾದ ಲಾಕ್ ಡೌನ್ ನ ಮೊದಲ ಹಂತದಲ್ಲಿ. ಆಗ ನಮ್ಮೆಲ್ಲರ Mind status ಹೇಗಿತ್ತೆಂದರೆ, ಕಂಡು

ಕೇಳರಿಯದ, ಈ ಕರಾಳ ಕರೋನದ ಕಾರಣ, Panic due to Pandemic. ಪುರುಡು ಕಾಲದಲ್ಲಿ ಇದ್ದ ಸದಸ್ಯರು ನಾನು, ನನ್ನ ತಂಗಿ ಸುನೀತಾ. ಇಬ್ಬರೂ ಸೇರಿ, ಹಾಡುಗಳನ್ನು ಹಾಡುವುದು, ಕೇಳುವುದು, ಇಲ್ಲದೇ ಇದ್ದರೆ, ನಿದ್ದೆ ಮಾಡಕ್ಕೇ ಆಗದೇ ಇದ್ದ ಕಾಲ ಅದು. ಹಾಡು, Karaoke, ಹೀಗೆ, ನಮ್ಮ Mind Engage ಮಾಡಿಕೊಂಡಿದ್ದೆವು. ಸಂಗೀತಕ್ಕೆ ಬೇಕಾದ ಶೃತಿ, ತಾಳ, ಲಯ ಯಾವುದೂ ಪೂರ್ತಿಯಾಗಿ ಇಲ್ಲದಿದ್ದರೂ, ಇಬ್ಬರೂ ಸೇರಿ, ಒಬ್ಬರನ್ನೊಬ್ಬರು Encourage ಮಾಡಿಕೊಂಡು, Enjoy ಮಾಡಿದ್ದೇ ಮಾಡಿದ್ದು. ಮೊದಮೊದಲು ನನಗೆ ಗೊತ್ತಿದ್ದ ಹತ್ತು, ಹನ್ನೆರಡು ಹಾಡುಗಳನ್ನ ಹಾಡಲು ಶುರು ಮಾಡಿದೆ. “ಮುನಿಜನ ಮಾನಸ ಮೋಹಿನೀ” ಅಂತ ಹಾಡಿದರೆ, ಮಗುವಿನ ತೊದಲು ನುಡಿಯನ್ನು ಕೇಳಿದ ಆನಂದ, ನಮ್ಮಿಬ್ಬರಿಗೂ. ನಮ್ಮ ಈ ಸಂಭ್ರಮದಲ್ಲಿ ಭಾಗಿಯಾದವರು  ಅಪ್ಪಿ ಮತ್ತು ಅರ್ಚು. ಅವರ Busy Schedule ನಲ್ಲಿ, ಸಮಯ ದೊರೆತಾಗೆಲ್ಲಾ ನಮ್ಮೊಡನೆ Join ಆಗ್ತಾ ಇದ್ದರು. ನಂತರ, ಈ ಸಂಜೆಯ ಕಾರ್ಯಕ್ರಮಕ್ಕೆ ಸಂಧ್ಯ ಮತ್ತು ಪೂರ್ಣಿಮಾ ಸೇರ್ಪಡೆಯಾದರು. ಎಲ್ಲರೂ ಒಂದೊಂದು ಹಾಡು ಕಲಿತು ಹೇಳಬೇಕೆಂದು, ನಮಗೆ ನಾವೇ Task ಗಳನ್ನು Fix ಮಾಡ್ಕೋತಾ ಇದ್ವಿ. ಕರೋನಾದ Exponential ಗಾಬರಿಯಲ್ಲಿದ್ದ ಸಂಧ್ಯಾ ಸಹಾ, ಅವಳ ಜೀವನದಲ್ಲಿ ಮೊದಲ ಬಾರಿಗೆ, ಸೀತಮ್ಮನವರ ಪುಸ್ತಕದಲ್ಲಿದ್ದ ದೇವರ ಹಾಡುಗಳನ್ನು ಮತ್ತು ಅವಳ ನೆನಪಿನ ಭಂಡಾರದಲ್ಲಿ ಅಡಗಿದ್ದ ಅನೇಕ ರಾಜ್ ಕುಮಾರ್ ಹಾಡುಗಳು, ಇತರ ಸಿನಿಮಾ ಗೀತೆಗಳನ್ನು ಹಾಡಕ್ಕೆ ಶುರುಮಾಡಿದಳು. ಪೂರ್ಣಿಮಾ ನಮ್ಮ ಜೊತೆ ಇದ್ದಾಗ ಹೇಳುತ್ತಿದ್ದ ಭಜನೆಗಳನ್ನು ಮತ್ತು ಸ್ವಾಮಿಯವರೊಂದಿಗೆ ದೇವರ ಹಾಡುಗಳನ್ನೂ ಹೇಳಲು ಆರಂಭಿಸಿದಳು. ಎರಡು ತಿಂಗಳಾದಮೇಲೆ, ನಮ್ಮ ಈ ಪುಟ್ಟ ಕಂದನಿಗೆ, ನಾಮಕರಣದ ಶಾಸ್ತ್ರ ಮಾಡಿ, “ಮಜಾ with ಲತಾ” ಅಂತ ಹೆಸರಿಟ್ಟೆವು. Karaoke King ಎಂದೇ ಹೆಸರುವಾಸಿಯಾಗಿರುವ ಶ್ರೀಧರರಾಯರೂ ಸಹಾ, ನಮ್ಮ ಪುಟ್ಟ ಕಂದನ ಆಕರ್ಷಣೆಗೆ ಒಳಗಾಗಿ, ನಮ್ಮ ಗುಂಪಿಗೆ ಸೇರಿದರು. ಶ್ರೀಧರ್ ಅವರು ಬಂದು, Mike ಇಟ್ಟುಕೊಂಡು ಹಾಡುಗಳನ್ನು ಹೇಳಿದಾಗ, ಸುನೀತಳಿಗೆ ಬಂದ Idea, ನನಗೂ ಒಂದು Mike Order ಮಾಡುವುದು. Shopping, ಹೊರಗಡೆ ಓಡಾಟ, ಜನರ ಸಂಪರ್ಕ ಇಲ್ಲದೇ ಬೇಜಾರಾಗಿದ್ದ ನನಗೆ, ಆ ಪುಟ್ಟ ಕೆಂಪು  Mike ತಂದ ಸಂತಸ ಅನಿವರ್ಚನೀಯ. “ಕೆಹನಾ ಹೈ, ಪ್ಯಾರ್ ದಿವಾನಾ ಹೋತಾ ಹೈ” ಹೀಗೆ Karaoke ಕಲಿತು, ಹಾಡಿದ್ದೇ ಹಾಡಿದ್ದು. ನಂತರ, ನಮ್ಮ ಪುಟ್ಟ ಕಂದ ಮಗುಚಿಕೊಂಡಿತು. ಅಂದ್ರೆ, ನಾವು ಹಾಡುವುದು ಮಾತ್ರವಲ್ಲದೆ, ಮೆಲ್ಲ ಮೆಲ್ಲನೆ, ಸಂಧ್ಯಳ ಬುದ್ಧಿವಾದ, ಮಾತೃಸ್ಥಾನ ಇಂತಹ ಬರವಣಿಗೆಗಳನ್ನು ಸವಿಯಲು ಶುರುಮಾಡಿದೆವು. ಮಗುಚಿಕೊಂಡ ಮಗು, ಅಮೆರಿಕದಲ್ಲಿದ್ದ ಸೌಭಾಗ್ಯಳನ್ನೂ ಆಕರ್ಷಿಸಿತು. ಅವಳೂ, Week ends ಗಳಲ್ಲಿ, ಬಿಡುವಾದಾಗೆಲ್ಲಾ ನಮ್ಮ Programme ಗೆ, Join ಆಗುತ್ತಿದ್ದಳು. ಜುಲೈ ತಿಂಗಳ ಮಧ್ಯದಲ್ಲಿ, ಒಂದು ಸಂಜೆ,

ನಾವು ನಮ್ಮ Programme ಗೆ, ವಸಂತಳನ್ನು Chief Guest ಆಗಿ, Invite ಮಾಡಿದೆವು. ನಮ್ಮ ಮೂರು ತಿಂಗಳ ಪುಟ್ಟ ಕಂದ ಅವಳನ್ನೂ ಮೋಡಿ ಮಾಡಿ, ತನ್ನ ಕಡೆಗೆ ಸೆಳೆದುಕೊಂಡಿತು. ಈಗ ಅವಳು ಒಂದು ದಿನವೂ ಈ ಕಂದನ್ನ ಬಿಟ್ಟಿರಲಾರಳು. ಅವಳ ಆಗಮನದಿಂದ, ಸುಶ್ರಾವ್ಯ ಗಾಯನಗಳು ಹಾಗೂ ಸಂಧ್ಯಳ ಬರಹಗಳ ವಿಶ್ಲೇಷಣೆ, ಅವಳದ್ದೇ ಬರಹಗಳು, ಹಾಡುಗಳು ಎಲ್ಲಾದರಿಂದ ಕಾರ್ಯಕ್ರಮಕ್ಕೆ ವಿಶೇಷ ಮೆರುಗು ಬಂದಿತು. ನಮ್ಮ ಕಂದನ ಮೊದಲ ಗಣಪತಿ ಹಬ್ಬದ ಪ್ರಯುಕ್ತ, ಹತ್ತು ದಿನಗಳ ಕಾಲ, ದಿನಾ ಆ ಗಣೇಶನ ಹಾಡುಗಳನ್ನು ಹಾಡಿ, ಸಂಭ್ರಮಿಸಿದೆವು. "ಏಕದಂತಾಯ, ವಕ್ರತುಂಡಾಯ, ಗೌರೀತನಯಾಯ ಧೀಮಹಿ" ಎಂದು ಹಾಡಿ ಹಬ್ಬದ ಆಚರಣೆ ಮಾಡಿದೆವು. ಅನಂತನ ಚತುರ್ದಶಿಗಂತೂ, ಒಂದು Virtual ಕಛೇರಿಯೇ ನಡೆದುಬಿಟ್ಟಿತು. ನಮ್ಮ ಕಂದನ ಹೆಸರು ಸಹ ಬದಲಾಯಿಸಿ "ನಾದಾರ್ಚನೆ" ಅಂತ ನಾಮಕರಣ ಮಾಡಿದೆವು. U.S.A ಯಿಂದ ಹಿಂದಿರುಗಿ ಬಂದ ಸೌಭಾಗ್ಯ, ನಮ್ಮ ಮಗುವಿನ ಬೆಳವಣಿಗೆ, ಚಟುವಟಿಕೆಗಳಲ್ಲಿ ಉತ್ಸಾಹದಿಂದ ಭಾಗಿಯಾದಳು. Zippy ಸೌಭಾಗ್ಯ ಅವರ FM ನಾದಾರ್ಚನೆ ಬಾನುಲಿ ಕೇಂದ್ರ, ಮೈಸೂರು, ಇದರ ಉದ್ಘಾಟನೆ ಅತ್ಯಂತ ಸಡಗರ, ಸಂಭ್ರಮಗಳಿಂದ ನಡೆಯಿತು. ಶಂಕರು-ಸೌಭಾಗ್ಯ Wedding Anniversary, ಸುನು, ಪೂರ್ಣಮಾ ಹುಟ್ಟಿದ ಹಬ್ಬಗಳು, ಅಧಿಕಮಾಸದ ಆಚರಣೆ, ನವರಾತ್ರಿಯ ಸಂಭ್ರಮ, ಕಾರ್ತೀಕ ಮಾಸದ ಶಿವಾರಾಧನೆ, ಈ ತರಹಾ, ಕರೋನಾ ತಲ್ಲಣದಿಂದ ಹೊರಗೆ ಹೋಗಲಾರದೆ ಇದ್ದ ಸಮಯದಲ್ಲೂ, ನಮಗೆಲ್ಲಾ ಇಂತಹಾ ಚಟುವಟಿಕೆಗಳಿಂದ ಸತ್ಕಾಲಕ್ಷೇಪ ಮಾಡುವ ಅವಕಾಶ ದೊರೆತದ್ದು, ಆ ಜಗದಂಬೆಯ ಕೃಪೆಯಲ್ಲದೇ ಇನ್ನೇನು? ಅವಳಲ್ಲದೇ ನಮಗಿನ್ಯಾರು ಗತಿ? ಏನಂತೀರ?

"ಗತೀಸ್ತ್ವಂ, ಗತೀಸ್ತ್ವಂ ತ್ವಮೇಕಾ ಭವಾನಿ"

## 6. DARLINGS

ಕಪ್ಪೆಯೊಂದು ನದೀ ತೀರದಲ್ಲಿ ಆರಾಮವಾಗಿ ವಿಶ್ರಾಂತಿ ಪಡೆಯುತ್ತಿತ್ತು. ಪ್ರವಾಹದಲ್ಲಿ ಸಿಕ್ಕಿಹಾಕಿಕೊಂಡಿರುವ ಚೇಳು ತನ್ನನ್ನ ಪಾರುಮಾಡು ಎಂದು ಕಪ್ಪೆಯನ್ನು ಕೇಳಿತು. ಕಪ್ಪೆ ಕೇಳಿತು, "ನೀನು ನನ್ನ ಕುಟುಕಿದರೇ" ಅಂತ. ಚೇಳು "ನಿನ್ನನ್ನ ನಾ ಕಚ್ಚಿದರೆ ನೀನೂ ನಾನೂ ಇಬ್ಬರೂ ಪ್ರವಾಹದಲ್ಲಿ ಮುಳುಗಿ ಹೋಗ್ತೀವಿ. ನನ್ನನ್ನು ನಾನು ಏಕೆ ಮುಳುಗಿಸಿಕೊಳ್ಳಲಿ?" ಎಂದು ಉತ್ತರಿಸಿತು. ಕಪ್ಪೆಗೆ ಈ ಉತ್ತರ ಸರಿಯೆಂದೆನಿಸಿ ಸಹಾಯ ಮಾಡಲು ತೀರ್ಮಾನಿಸಿತು. ಕಪ್ಪೆ ಚೇಳನ್ನು ಬೆನ್ನ ಮೇಲೆ ಕೂಡಿಸಿಕೊಂಡು ನದಿಯ ಪ್ರವಾಹವನ್ನು ದಾಟಲು ಶುರು ಮಾಡಿತು. ನದಿಯ ಮಧ್ಯಕ್ಕೆ ತಲುಪಿದ ತಕ್ಷಣ ಚೇಳು ಕಪ್ಪೆಯನ್ನು ಕುಟುಕಿತು. ಕಪ್ಪೆ "ಯಾಕೆ ಹೀಗೆ ಮಾಡಿದೆ" ಎಂದು ಅಮಾಯಕವಾಗಿ ಕೇಳಿತು. ಚೇಳು ಹೇಳಿತು, "ನಾನೊಂದು ಚೇಳು. ಕುಟುಕುವುದೇ ನನ್ನ ಸ್ವಭಾವ" ಎಂದು. "Some men are like scorpions, They never Change"

ಇದು, Darlings ಸಿನಿಮಾದಲ್ಲಿ ತಾಯಿ ಮಗಳಿಗೆ ಹೇಳುವ ನೀತಿಕಥೆ. Darlings ಸಿನಿಮಾದಲ್ಲಿ ಗಂಡನ ಹಿಂಸಾಚಾರ, ಚಟ, ಪುಸಲಾಯಿಸುವಿಕೆ ಇಂತಾದುವುಗಳಿಂದ ಹೆಂಡತಿಗೆ ಆಗುವ ನೋವು, ಕಷ್ಟ, ಮತ್ತೆ ಮತ್ತೆ ಜೀವನ ಮುಂದುವರೆಸಲು ಸನ್ನದ್ಧವಾಗುವ ರೀತಿ, ಇದನ್ನೆಲ್ಲಾ ನೆರೆಯಲ್ಲಿಯೇ ಇರುವ ಹೆಂಡತಿಯ ತಾಯಿ ಕಂಡು, ಆಕೆ ಪಡುವ ಸಂಕಟ, ಕಳಕಳಿ, ಅವಳು ಕೊಡುವ ಸಲಹೆ ಎಲ್ಲದರ Presentation ವಾಸ್ತವಕ್ಕೆ ಹತ್ತಿರ ಇರೋದು ಮಾತ್ರವಲ್ಲ, ತುಂಬಾ ಜನ ಅನುಭವಿಸುತ್ತಾ ಇರುವ Problem. ಆಶಾವಾದಿಯಾದ ಹೆಂಡತಿ, ಗಂಡ ಬದಲಾಗುತ್ತಾನೆಂದು ನಂಬುವುದು, ಅವನಿಂದ ಒಂದಲ್ಲ ಒಂದು ದಿನ Respect ಸಿಕ್ಕತ್ತೆ ಅಂತ ಕಾಯೋದು, ಕೊನೆಯಲ್ಲಿ ಅವಳು ತೊಗೊಳೋ ತೀರ್ಮಾನ ಎಲ್ಲರನ್ನೂ ಒಂದು ನಿಮಿಷ ಈ ವಿಷಯದ ಬಗ್ಗೆ ಯೋಚಿಸುವಂತೆ ಮಾಡುತ್ತದೆ. Men ಅನ್ನೋದನ್ನ People ಅಂತ Change ಮಾಡಬಹುದು.

ಈಗ ಇನ್ನೊಂದು ಕಥೆ. ಹಲವು ಉದ್ಯೋಗಗಳನ್ನು ಮಾಡಿ, ಯಶಸ್ಸು ಕಾಣದೆ ನಿರಾಶೆಗೊಳಗಾದ ಒಬ್ಬ ವ್ಯಕ್ತಿಯನ್ನು ತೆನಾಲಿರಾಮನು ಮಾವುತನ ಮನೆಯಂಗಳಕ್ಕೆ ಕರೆತರುತ್ತಾನೆ. ಆನೆಯನ್ನ ಒಂದು ಸಣ್ಣ ಹಗ್ಗದಲ್ಲಿ ಕಟ್ಟಿರುವುದನ್ನು ನೋಡಿ, ಈ ವ್ಯಕ್ತಿ "ಆನೆಗಳು ಹಗ್ಗವನ್ನು ಕಡಿದುಕೊಂಡು ಹೋಗುವುದಿಲ್ಲವೇ" ಎಂದು ಮಾವುತನನ್ನು ಕೇಳಿದಾಗ, ಮಾವುತ "ಈ ಆನೆಗಳು ಮರಿಯಾಗಿದ್ದಾಗ ಹೀಗೆ ಸಣ್ಣ ಹಗ್ಗದಲ್ಲಿ ಕಟ್ಟಿ ಹಾಕಿದ್ದೆ. ಆಗ ಅದನ್ನು ಬಿಡಿಸಿಕೊಳ್ಳಲು ಸಾಧ್ಯವಾಗದೆ ತಮ್ಮ ಪ್ರಯತ್ನವನ್ನು ಬಿಟ್ಟವು. ಈಗಂತೂ ಪ್ರಯತ್ನಿಸುವ ಗೋಜಿಗೇ ಹೋಗದೇ ಹೀಗೇ ಉಳಿದಿವೆ" ಎಂದು ಉತ್ತರಿಸಿದ. ಆಗ ತೆನಾಲಿರಾಮ ಆ ವ್ಯಕ್ತಿಗೆ ತಿಳಿಸುತ್ತಾನೆ, "ಸಮಯ ಬದಲಾದಂತೆ ನಮ್ಮ ಮನಃಸ್ಥಿತಿಯನ್ನು ಬದಲಾಯಿಸದಿದ್ದರೇ ಈ ಆನೆಗಳಂತೆ ನಾವೂ ಕಟ್ಟಿಹಾಕಲ್ಪಡುತ್ತೇವೆ" ಎಂದು.

**Moral of the stories**

ನಾವಂತೂ ಚೇಳಿನಂತೆ ಎಂದೂ ಆಗಲೇಬಾರದು. ಇನ್ನೊಬ್ಬರಿಗೆ ಕುಟುಕಲೇಬಾರದು. ಸಮಯಕ್ಕೆ ತಕ್ಕಂತೆ ನಮಗೆ ಕಟ್ಟಿರೋ ಹಗ್ಗ ಚಿಕ್ಕದಾಗಿದೆ, ನಾವು ಈಗ ಅದನ್ನು ಬಿಚ್ಚಿಕೊಳ್ಳುವ ಸ್ಥಿತಿಯಲ್ಲಿ ಇದ್ದೇವೆ ಅಂತ Realise ಮಾಡಿಕೊಳ್ಳಬೇಕು. ಸ್ವತಂತ್ರ ಅನ್ನೋದು ನಮಗೆ ನಾವು ಹೋರಾಡಿ, ನಾವೇ ಗಳಿಸಬೇಕಾದ ವಸ್ತು. ಬೇರೆಯವರು Generous ಆಗಿ ನಮಗೆ ಕೊಟ್ಟುಬಿಡಲ್ಲ. British ನವರ ಜೊತೆ ಹೋರಾಡಿದ ಮೇಲಲ್ಲವೇ ಸ್ವತಂತ್ರ ಸಿಕ್ಕಿದ್ದು. ನಮ್ಮ Life story ನಾವೇ ಬರೀತಿರೋವಾಗ Page ನಲ್ಲಿ Margin ಎಷ್ಟು ಬೇಕೋ ಅಷ್ಟು ಬಿಡಬೇಕಾಗಲಿ, Page ಪೂರಾ Margin ಆದರೆ, story ಗೆ ಜಾಗವೆಲ್ಲಿ? ಏನಂತೀರ?

ನಾದಾರ್ಚನೆಯ ಸದಸ್ಯರಾದ ವಸಂತಾರವರು ಬರೆದ ಲೇಖನಗಳಲ್ಲಿ ನವಿರಾದ ಮಾಧುರ್ಯ, ಪ್ರೀತಿ ತುಂಬಿದ್ದು, ಅವು ಅವರ ಮನದಾಳದ ಮಾತುಗಳಾಗಿವೆ. ಅವರ ಹಾಡು ಮತ್ತು ಮಾತಿನಂತೆ, ಅವರ ಲೇಖನಿಯಿಂದ ಹೊರಹೊಮ್ಮಿದ ಈ ಬರಹಗಳೂ ಮೃದು, ಮಧುರ.

1. ದುಗುಡದಿಂದ ದೂರ

ಹಲವಾರು ವರ್ಷಗಳಿಂದ ನಡೆಯುತ್ತಿರುವ, ನಾದಾರ್ಚನೆ ಎಂಬ ಈ ಸಂಗೀತ ಸಂಜೆಯ ಬಗ್ಗೆ, “ದುಗುಡದಿಂದ ದೂರ” ಎನ್ನುವ ಶೀರ್ಷಿಕೆಯ ಅಡಿಯಲ್ಲಿ, ಮನದಾಳದ ಮಾತನ್ನು ನಿಮ್ಮ ಮುಂದೆ ಪ್ರಸ್ತುತ ಪಡಿಸಲು ಇಷ್ಟಪಡುತ್ತೇನೆ.

ಹೊಸವರುಷ 2020 ಕಾಲಿಟ್ಟಿತು ಸಂಭ್ರಮದಿಂದಲೇ
ಸ್ವಾಗತಿಸಿದೆವು ನಾವದನ್ನು ಹರುಷದಿಂದಲೇ
ಕಳೆದೆವು ಮೊದಲೆರಡು ತಿಂಗಳು ಸಡಗರದಿಂದಲೇ
ಅಲ್ಲಿ, ಇಲ್ಲಿ, ದೇವಸ್ಥಾನ, ಸಮಾರಂಭ ಅಂತ ಓಡಾಡುತ್ತಲೇ
ಗುಸು ಗುಸು ಪಿಸು ಪಿಸು ಅಂತೆ ಕಂತೆಗಳ ಸುದ್ದಿ ಬಂತು
ತೆರೆದ ಬಾಹುಗಳಿಂದ ಅಪ್ಪಿ ಮೃತ್ಯುವೆಡೆ ಕರೆದೊಯ್ಯುವ ಮಹಾ ಹೆಮ್ಮಾರಿ ಕರೊನ ಅಂತು
ನೋಡು ನೋಡುತ್ತಲೇ ಪ್ರಪಂಚದ ಎಲ್ಲಾ ದೇಶಗಳಿಗೆ ಹಬ್ಬಿತು ವಿಷಜಂತು
ಕಣ್ಣಿಗೇ ಕಾಣದ ಮಾಯಾವಿ ವಿಷಾಣುವಿನ ವಿರುದ್ಧ ಹೋರಾಟದ ಭ್ರಾಂತು
ದೂರದ ದೇಶದಲ್ಲಿರುವ ಹೆತ್ತೊಡಲಿನ ಕ್ಷೇಮಕ್ಕಾಗಿ ಪರಿತಪಿಸಿತು ಈ ಜೀವ
ಹೊಸಯುಗದ ಆವಿಷ್ಕಾರದ ಉಪಕರಣದಿಂದ ಮನಸ್ಸಿನ ದುಗುಡ
ಹೊರಗೋಡಿಸಿದ ದೂರವಾಣಿಯ ದೇವ
ಉಪದೇಶ ಅಂದುಕೊಳ್ಳದೇ ಪ್ರಬುದ್ಧರಾದ ಮಕ್ಕಳು ಅರ್ಥಮಾಡಿಕೊಂಡರು ಮನಸ್ಸಿನ ಈ ಭಾವ
ಆದರೂ ಅಸಹಾಯಕತೆಯ ಪರಿಸ್ಥಿತಿಯ ಚಡಪಡಿಕೆಯ ಆಗರವಾಯಿತು ಹೃದಯದ ಹಾವ ಭಾವ
ಒಮ್ಮೆಲೇ ಬಂದಿತು ಹಿಂದೆಂದೂ ಕಂಡರಿಯದ ರೀತಿ ರಿವಾಜುಗಳ ಕೋಟಲೆ
ಹೊರಗೆ ಓಡಾಡುವ ಹಾಗಿಲ್ಲ, ಜನರ ಸಂಪರ್ಕವಿಲ್ಲ ಎನ್ನುವ ಕಾನೂನಿನ ಕಟ್ಟಲೆ
ಕೆಮ್ಮುವ ಹಾಗಿಲ್ಲ ಸೀನುವ ಹಾಗಿಲ್ಲ ಬಂದಿಗಳಾದೆವು ವಾರ ಅಂತ ಕೊನೆಗೆ ತಿಂಗಳುಗಟ್ಟಲೆ
ಕಾಲ ಕಳೆಯಲು ಹಚ್ಚಿದೆವು ದೂರವಾಣಿ ಸಂಪರ್ಕ ಬಂಧು ಮಿತ್ರರಿಗೆ ಗಂಟೆಗಟ್ಟಲೆ
ಯಾಂತ್ರಿಕ ಜೀವನ ಊಟ ನಿದ್ದೆಗೆ ಬರ ಇಲ್ಲ ಆದರೂ ಚಿತ್ತಶಾಂತಿಗೆ ದಾರಿ ಹುಡುಕುತ್ತಿತ್ತು ಮನಸ್ಸೆಲ್ಲಾ

ಕರೆ ಬಂತು ದುಗುಡ ದೂರ ಇಟ್ಟು ಪ್ರತಿಸಂಜೆ ಹಾಡು ಹೇಳಲು
ನನ್ನಂತೆ ನೊಂದಿದ್ದ ಲತಾ ಮತ್ತು ಸಂಗಾತಿಗಳಿಂದ
ಕರೋನಾದ ಕಪ್ಪು ಛಾಯೆಯಲ್ಲಿ ಮಿನುಗಿಸಿದರು ಲತಾ ಮತ್ತು ಸುನೀತ ಹಾಡಿನ ಸೊಗಡಿನ ಮುನ್ನುಡಿ
ಗುನು ಗುನಿಸಿದರು ಬಾವ, ಸಂಧ್ಯ, ಪೂರ್ಣಿಮಾ ಸಂತೋಷದ ಹಾಡುಗಳ ಚರಣವ ಒಂದುಗೂಡಿ
ಸಮಾಧಾನದ ಭಾವದಿಂದ ಬರೆದಳು ಮುದದಿಂದ ಹಾಡಿದಳು ವಸಂತ
ಸಮ ಮನಸ್ಸಿನವರ ಜೊತೆಗೂಡಿ ಈ ಹಿನ್ನುಡಿ.

**2.** ಶಿಕ್ಷಕರ ದಿನಾಚರಣೆ

"ಗುರುಭ್ಯೋ ನಮಃ". ಅಕ್ಕ ಲತನಿಗೂ, ಶ್ರೀಧರ ಬಾವನವರಿಗೂ, ಸ್ನೇಹಿತೆ ಸಂಧ್ಯಾಳಿಗೂ, ತಂಗಿ ಪೂರ್ಣಿಮಾಳಿಗೂ ಶಿಕ್ಷಕರ ದಿನಾಚರಣೆಯ ಶುಭಾಶಯಗಳು. ಪ್ರತಿಯೊಬ್ಬರೂ ತಮಗೆ ಜನ್ಮ ಕೊಟ್ಟ ತಂದೆ ತಾಯಿಗೆ ಮಾತೃ ದೇವೋಭವ, ಪಿತೃ ದೇವೋಭವ ಎಂದು ನಮಿಸಿ ಆಚಾರ್ಯ ದೇವೋಭವ ಅಂತ ತಮಗೆ ವಿದ್ಯೆ ಕಲಿಸಿದ ಎಲ್ಲಾ ಗುರುಗಳನ್ನೂ ಸ್ಮರಿಸಿ ವಂದಿಸುವುದು ನಮಗೆಲ್ಲರಿಗೂ ಹಿರಿಯರಿಂದ ತಿಳಿದು ಬಂದಂತಹಾ ಮೂಲ ಸಂಸ್ಕಾರ. ಮನುಷ್ಯ ಎಷ್ಟೇ ಚತುರ ಚಾಣಾಕ್ಷ ಬುದ್ಧಿವಂತನಿರಲಿ, ಈ ಭವಸಾಗರ ಎಂಬ ಸಂಸಾರದ ಜೀವನವನ್ನು ಯಶಸ್ವಿಯಾಗಿ ಸಾರ್ಥಕಗೊಳಿಸಲು ಗುರು ಎಂಬ ದೋಣಿಯ ಮಾರ್ಗದರ್ಶನ ಮತ್ತು ಆಸರೆಯ ಅವಶ್ಯಕತೆಯು ಅಗತ್ಯವಾಗಿ ಇದೆ.

"ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ"

ಎಂಬ ದಾಸವರೇಣ್ಯರ ಅರ್ಥಪೂರ್ಣ ಹಾಡು ನಿಜಕ್ಕೂ ಬಲು ಚೆನ್ನ. ಮನೆಯೇ ಮೊದಲ ಪಾಠಶಾಲೆ, ತಾಯಿಯೇ ಮೊದಲ ಗುರುವು ಅಂತ ಇದ್ದರೂ ತಾಯಿ ಮಗು ಇಬ್ಬರ ನಡುವೆ ಮನೆಯಲ್ಲಿ ಕಲಿಯುವ ವಿದ್ಯೆಗಷ್ಟೇ ಸೀಮಿತವಾಗಿರದೇ ಮಗುವು ಬೆಳೆಯುತ್ತಾ ಹೋದಂತೆ ವಿಶಾಲವಾದ ಪ್ರಪಂಚಕ್ಕೆ ಕಾಲಿಟ್ಟಾಗ, ಗುರುವು ತನ್ನಲ್ಲಿರುವ ವಿದ್ಯೆ, ಬುದ್ಧಿ, ಆಟ, ಪಾಠ, ವಿವೇಕ, ವಿವೇಚನೆ, ಶಿಸ್ತು, ಸಂಯಮತೆ ಹೀಗೆ ಹಲವಾರು ವಿಷಯಗಳನ್ನು ವಿಚಾರಗಳನ್ನು ಹಂತ ಹಂತವಾಗಿ ಶಿಷ್ಯನಿಗೆ ಪೂರ್ತಿಯಾಗಿ ನಿರ್ವಂಚನೆಯಿಂದ ಧಾರೆ ಎರೆಯುತ್ತಾನೆ. ಶಿಲ್ಪಿಯು ಒಂದು ಕಲ್ಲುಬಂಡೆಯನ್ನು ಸಾವಿರ ಉಳಿಪೆಟ್ಟಿನಿಂದ ಸುಂದರ ಮೂರ್ತಿಯನ್ನಾಗಿ ಮಾಡುವ ತರಹ ಗುರುವಿನಿಂದ ಕಲಿತ ಪಾಠದಿಂದ ಶಿಷ್ಯನು ಈ ಪ್ರಪಂಚದಲ್ಲಿ ಧೈರ್ಯ, ಸ್ಥೈರ್ಯ, ವಿಶ್ವಾಸದಿಂದ ಜೀವನವನ್ನು ನಡೆಸುವ ಸಾಮರ್ಥ್ಯ ಹೊಂದುವ ಸತ್ಪ್ರಜೆಯಾಗುತ್ತಾನೆ. ಸಮರ್ಥನಾದ ಶಿಷ್ಯನು ಗುರುವಿನ ಸಹಾಯ, ಸಹಕಾರ ಹಾಗೂ ಮಾರ್ಗದರ್ಶನದಿಂದ ಪುಟವಿಟ್ಟ ಚಿನ್ನದಂತಾಗುತ್ತಾನೆ.

ಅವನ ಈ ಸರ್ವತೋಮುಖ ಅಭಿವೃದ್ಧಿಯನ್ನು ಕಂಡು ಸಂತೋಷಿಸುವ ತಂದೆ ತಾಯಿಯರಂತೆಯೇ ಗುರುವೂ ಸಹಾ ತನ್ನ ಶಿಷ್ಯನ ಸಾಮರ್ಥ್ಯ, ಯಶಸ್ಸು ಕಂಡು ಆನಂದ ಮತ್ತು ಹೆಮ್ಮೆ ಪಡುತ್ತಾನೆ. ವರ್ಷಕ್ಕೊಮ್ಮೆ ಆಚರಿಸುವ ಈ ಶಿಕ್ಷಕರ ದಿನಾಚರಣೆ ಎಲ್ಲಾ ಗುರುಗಳನ್ನೂ ಸ್ಮರಿಸಿ, ಶುಭಾಶಯ ಕೋರುವ ಸುಸಂದರ್ಭ. ಒಂದು ದಿನಕ್ಕೆ ಸೀಮಿತವಾಗಿರದೆ ದಿನಾ ಬೆಳಗ್ಗೆ ತಂದೆ ತಾಯಿ ಗುರುಗಳನ್ನು ನೆನೆದು, ಕೃತಜ್ಞತೆಯ ಭಾವ ಹೊಂದುವುದು ಭಾವನಾತ್ಮಕವಾದ ವಿಷಯ. ಈ ಮೇಲ್ಪಂಕ್ತಿ ಹಾಕಿಕೊಟ್ಟ ಭಾರತೀಯ ಪರಂಪರೆಗೆ ಬೇರೇನೂ ಸಾಟಿಯಿಲ್ಲ, ನನ್ನ ಎಲ್ಲಾ ಗುರುಗಳಿಗೂ ಹೃತ್ಪೂರ್ವಕವಾದ ವಂದನೆಗಳು.

3. ಬದಲಾವಣೆ

ಸಂಜೆಯಾಗುತ್ತಲೇ ಶಿಸ್ತಿನ ಸಿಪಾಯಿಯಂತೆ ದೇವರಿಗೆ ದೀಪ ಬೆಳಗಿಸಿ ನಾದಾರ್ಚನೆಯ ಕರೆಗಾಗಿ ಜೀವ ಕಾತರಿಸುತ್ತಿರುತ್ತದೆ. ಮಧ್ಯಾಹ್ನದಿಂದಲೇ ಶುರುವಾಗುತ್ತದೆ ಆ ದಿನದ ಹಾಡಿನ ಹಾಡುಗಾರಿಕೆ. ಹಾಗೇ ಮನಸ್ಸು ಅದೇ ಹಾಡನ್ನ ಮೆಲುಕು ಹಾಕುತ್ತಾ ಇರುತ್ತದೆ. ಕೇಳಿರುವ ಹಾಡಾದರೂ ಮತ್ತೇ ಅದನ್ನೇ ಹೇಳಿ ಕೇಳಿ ಪ್ರಶಂಸೆ ಪಡೆದು, ಮನಸ್ಸು ಸಂತೋಷ ಪಡುತ್ತಲಿರುತ್ತದೆ. ಮಧ್ಯೆ ಮಧ್ಯೆ ಹಳೆಯ ಸವಿ ಘಟನೆಗಳು ಮನಸ್ಸಿನ ನೆನಪಿನಂಗಳಕ್ಕೆ ಬಂದಾಗ ಇತರರೊಡನೆ ಅದನ್ನು ಹಂಚಿಕೊಂಡು ಸವಿದಾಗ ಮನಸ್ಸು ಆನಂದದಿಂದ ತೇಲಾಡುತ್ತಾ ಇರುತ್ತದೆ.

ಹೌದು, ಬೇಕಾಗಿತ್ತು, ಬದಲಾವಣೆ ಬೇಕಾಗಿತ್ತು.

ಹೀಗೆ ಮುಂದುವರೆದ ನಮ್ಮ ಹಾಡುಗಾರಿಕೆ ಸಮಾರಂಭದಲ್ಲಿ ಚಿಂತೆಯಲ್ಲೂ ಚಿಂತನೆಗಳ ಹೊಳೆ ಹರಿಯಲಾರಂಭಿಸಿತು. ಮದುವೆಯಲ್ಲಿ ಶುರುವಾದ ಬುದ್ಧಿವಾದ, ಮಾತೃತ್ವದ ತತ್ವದಿಂದ ವಿವೇಕದ ತನಕ ಬೆಳೆಯಿತು. ಮೌನ ಮುರಿದು ಹರಿದು ಬಂದ ಮಾತಿನ ಬಾಣವನ್ನು ಎಲ್ಲರೂ ಆಲಿಸಿದರು. ಮೂಕ ಮೌನದಿಂದ ಅರಿತರು ಇದೆಲ್ಲದರ ಗೂಡಾರ್ಥ ಭಾವಾರ್ಥಗಳನ್ನು ಮುದದಿಂದ. ಹೊರಬಂದಿತು ಎಲ್ಲರ ಅಭಿಪ್ರಾಯ ಈ ಸಂವಾದದಿಂದ. ಹಾಯೆನಿಸಿತು ಮನಸ್ಸಿಗೆ, ಹಾಗೆ ಹಗುರಾಯಿತು ಮನಸ್ಸು, ಕಟ್ಟಿದ್ದ ಭಾವನೆಗಳ ಕಾರ್ಮೋಡದಿಂದ ಸುರಿದ ಮಳೆಯಿಂದ.

ಹೌದು, ಬೇಕಾಗಿತ್ತು, ಈ ಬದಲಾವಣೆ ಬೇಕಾಗಿತ್ತು.

ಸುಮಾರು ಮೂರು ನಾಲ್ಕು ದಶಕಗಳಿಂದ ನಮ್ಮನ್ನು ನಾವು ನಾನಾ ಕಾರಣಗಳಿಂದ ದಿನದ ಇಪ್ಪತ್ನಾಲ್ಕು ಗಂಟೆಯೂ ಹಲವಾರು ರೀತಿಯಲ್ಲಿ ತೊಡಗಿಸಿಕೊಂಡಿದ್ದೆವು. ಒಮ್ಮಿಂದೊಮ್ಮೆಗೇ ಬಂದ ಕರೋನ, ನಿವೃತ್ತಿ, ಮಕ್ಕಳ ಜವಾಬ್ದಾರಿಯ ಕೆಲಸ ಇಲ್ಲದಿರುವುದು, ಈ ಎಲ್ಲದರ ಇಲ್ಲದ ಒತ್ತಡ ನಮ್ಮನ್ನು ಶೂನ್ಯವಾದ ತ್ರಿಶಂಕು ಸ್ಥಾನದಲ್ಲಿ ನಿಲ್ಲಿಸಿತ್ತು. ಒಮ್ಮೆಲೇ ಸಿಕ್ಕ ಬಿಡುವಿನ ವಿಶ್ರಾಂತಿ ನಮ್ಮ ಚಿತ್ತ ಶಾಂತಿಯನ್ನು ಕೆಡಿಸಿತ್ತು.

ಮುಸ್ಸಂಜೆಯ ಕರ್ತವ್ಯವೆಲ್ಲಾ ಕಳೆದು ಮುಂದೇನು ಎಂಬ ಬೃಹದಾಕಾರದ ಪ್ರಶ್ನೆಯ ವಿಚಾರಕ್ಕೆ ಬೇಕಾಗಿತ್ತು, ಒಂದು ಮಹತ್ತರವಾದ ಬದಲಾವಣೆ ಬೇಕಾಗಿತ್ತು.

ಹೌದು, ಉತ್ತಮ ಮಾರ್ಗದರ್ಶನ ತೋರುವ ಒಂದು ಬದಲಾವಣೆಯ ಅವಶ್ಯಕತೆ ಇತ್ತು. ಸಿಕ್ಕಿತು ಕಡೆಗೂ ಸಿಕ್ಕಿತು. ನಮ್ಮ ಪೂರ್ವ ಜನ್ಮದ ಸುಕೃತದ ಫಲವೋ, ಅದೃಷ್ಟವೋ, ನಮಗೆ ನಿರ್ದಿಷ್ಟವಾದ ಗುರಿ ತಲುಪಿಸುವ ಒಂದು ದಿವ್ಯ ಚೇತನದ ಆಸರೆ ದೊರಕಿತು. ವೈವಿಧ್ಯತೆ ತುಂಬಿದ ಕಾರ್ಯಕ್ರಮಗಳಿಂದ, ಸಮಯ ಪ್ರಜ್ಞೆಯಿಂದ, ತನ್ನ ಮಾತಿನಿಂದ, ಕೃತಿಯ ಸ್ಪೂರ್ತಿಯಿಂದ, ಆತ್ಮಸ್ಥೈರ್ಯ ನೀಡಿ, ಆತ್ಮ ವಿಶ್ವಾಸ ಕೊಟ್ಟು, ಸಮಾಧಾನದ ನುಡಿಗಳನ್ನಾಡಿ, ನಮಗೇ ಗೊತ್ತಿಲ್ಲದಿರುವ, ಸುಪ್ತವಾಗಿ ಅಡಗಿದ್ದ ಕಿಂಚಿತ್ ಪ್ರತಿಭೆಯನ್ನು ನಯವಾಗಿ ಎಬ್ಬಿಸಿ, ಅದನ್ನು ಹೊರಹೊಮ್ಮಲು ಅವಕಾಶ ಕೊಟ್ಟು, ತಾಳ್ಮೆಯಿಂದ ಆಲಿಸಿ, ನಾವೂ ನಮ್ಮ ಮೇಲೆ ಅಭಿಮಾನ ಪಡುವಂತೆ ಮಾಡಿ, ನಮಗಾಗಿ, ನಮ್ಮ ಸಂತೋಷಕ್ಕಾಗಿ, ನಮ್ಮ ಇಷ್ಟದ ಪ್ರಕಾರ ಇರುವ ಹಾಗೆ ನಮ್ಮತನವನ್ನು ತೋರಿಸಿ ಮೆರೆಯುವಂತೆ ಮಾಡಿ, ಆತ್ಮಾಭಿಮಾನದಿಂದ ಧೈರ್ಯವಾಗಿ ಮುಂಬರುವ ದಿನಗಳನ್ನು ಕಳೆಯಲು ಆಧ್ಯಾತ್ಮಿಕತೆಯ ಬೆಳಕಿನ ದಾರಿಯನ್ನು ತೋರಿ, ಅಸಹಾಯಕರಾಗಿ ಕುಳಿತ ನಮ್ಮನ್ನು ಸಾರ್ಥಕತೆಯ ಹಾದಿಯತ್ತ ಕರೆದೊಯ್ದು ಈ ಸಂಗೀತ ಸಂಜೆ ಕಾರ್ಯಕ್ರಮದಿಂದ ನಮ್ಮ ದುಗುಡ ದುಮ್ಮಾನಗಳನ್ನು ದೂರ ಸರಿಸಿ, ಬದುಕಿನ ಮಹತ್ತರವಾದ ಮೌಲ್ಯಗಳೊಂದಿಗೆ ಜೀವನ ಮುಂದುವರೆಸಲು ತನ್ನ ತೆರೆದ ಬಾಹುಗಳಿಂದ ನಮಗೆಲ್ಲರಿಗೂ ದಾರಿ ದೀಪವಾಗಿರುವ, ನಮ್ಮನ್ನು ಸನ್ಮಾರ್ಗದತ್ತ ಕರೆದುಕೊಂಡು ಹೋಗುತ್ತಿರುವ ಲತಾ,

ಹೌದು, ನನ್ನಕ್ಕ ಲತಾ, ನನ್ನ ಗುರುವಾದ ಲತಾಳಿಂದ ಸಿಕ್ಕಿತು, ಈ ಬದಲಾವಣೆ ಸಿಕ್ಕಿತು.

4. ಸುನೀತಾ **Birthday**

ಇಂದು ನಮ್ಮ ಸುನೀತಾಳ ಹುಟ್ಟಿದ ಹಬ್ಬ. ಗುರುತ್ವಾಕರ್ಷಣೆಯ ಸಿದ್ಧಾಂತದಂತೆ ಅವಳೂ ನಾನೂ ಒಬ್ಬರಿಗೊಬ್ಬರು Connect ಆಗಿರುವುದಂತೂ ನಿಜ. ಅವಳಿಗಾಗಿ ಮನಸ್ಸಿನಲ್ಲಿ ಸುಪ್ತವಾಗಿದ್ದ ಭಾವನೆಗಳನ್ನು ಉಪಯೋಗಿಸಿ ಒಂದು ಕವನ ರಚಿಸಲು ಮನಸ್ಸಾಗಿದೆ. ಇಲ್ಲಿ ಭಾವನೆಗಳ ಶ್ರೇಷ್ಠತೆಯ ಮುಂದೆ ಉಪಯೋಗಿಸಿರುವ ಪದಗಳ ಮಟ್ಟ ಕಮ್ಮಿಯಾಗಿರಬಹುದು. ಕ್ಷಮೆ ಇರಲಿ.

ಮಲ್ಲಿಗೆ ಹೂವಿನಂಥ ಮನಸ್ಸಿನವಳು
ಮಗುವಿನಂಥ ನಿಷ್ಕಲ್ಮಶ ಹೃದಯದವಳು
ತಂದೆ ತಾಯಿ ಹಿರಿಯರನ್ನು ಗೌರವಿಸುವಳು
ಅಕ್ಕ ಬಾವ ಅಂದರೆ ಹೆಮ್ಮೆ ಪಡುವಳು

ಪ್ರೀತಿ ಮಮತೆಯ ತಮ್ಮ ಎಂದರೆ ಅಭಿಮಾನ ಪಡುವಳು
ಇವರ ಮಕ್ಕಳ ಕಂಡರೆ ಬಹಳ ಅಕ್ಕರೆ ತೋರುವಳು
ಕೋಪವೆಂದರೇನು ಎಂದು ಅರಿಯದವಳು
ಪ್ರೀತಿ ವಿಶ್ವಾಸ ಆದರಗಳಿಗೆ ಅಗ್ರಗಣ್ಯಳು
ಉಡುಗೆ ತೊಡುಗೆ ನಡೆ ನುಡಿಯಲಿ ಸರಳತೆ ತೋರುವಳು
ತುಂಬು ಹೃದಯದ ಇವಳು ಎಲ್ಲರ ಪ್ರೀತಿಪಾತ್ರಳು
ವಿದ್ಯೆಯಲ್ಲಿ ಸಾಕ್ಷಾತ್ ಸರಸ್ವತಿಯೇ ಇವಳು
ಬಂಧು ಬಾಂಧವರ ಇಷ್ಟಾರ್ಥ ಪೂರೈಸುವಳು
ಅವರ ಸಂತೋಷವ ನೋಡಿ ತಾನು ಸುಖಿಸುವಳು
ಇಷ್ಟಾರ್ಥ ಪೂರೈಸಿದ ಧನ್ಯತೆಯಲಿ ತಾನು ಮೆರೆಯುವಳು
ವೀಣೆ ನುಡಿಸುವ ಹವ್ಯಾಸ ಇರುವವಳು
ಸುಶ್ರಾವ್ಯವಾಗಿ ಹಾಡುವ ಆಶುಕವಯಿತ್ರಿ ಇವಳು
ಇವಳು ನೋಡದ ಸಿನಿಮಾ ಧಾರಾವಾಹಿಗಳಿಲ್ಲ
ಯಾವುದೇ ಕ್ರಿಕೆಟ್ ಆಟವ ನೋಡುವುದನ್ನು ತಪ್ಪಿಸೋಲ್ಲ
ಸಿಹಿ ತಿನಿಸಿಗಾಗಿ ಆಸೆ ಪಡದ ಪತಿವ್ರತೆ ಇವಳು
ಆದ್ರೆ ಮಕ್ಕಳ ಮನಸ್ಸಿನ ಇವಳು Cake chocolate ತಿನ್ನುವಳು
ಚಕ್ಕುಲಿ ಕೋಡುಬಳೆ ಮುಚ್ಚೋರೆ ತಿನ್ನಲು ಇಷ್ಟಪಡುವಳು
ಉಪ್ಪೇರಿ ತಿನ್ನುತ್ತಾ ಕಾದಂಬರಿ ಓದುತ್ತಾ ಪ್ರಪಂಚವನ್ನೇ ಮರೆಯುವಳು
ವಿದ್ಯೆ ಹುದ್ದೆಯಲ್ಲಿ ಅಗ್ರಸ್ಥಾನ ಪಡೆದಿರುವಳು
ಸರಸ್ವತಿ ಲಕ್ಷ್ಮಿ ಕಟಾಕ್ಷದಿಂದ ಹಾರೈಸಲ್ಪಟ್ಟವಳು
ತುಂಬಿದ ಕೊಡ, ಎಲೆಮರೆ ಕಾಯಿಯ ಹಾಗೆ ಬದುಕುತ್ತಿರುವವಳು
ಕಿರಿಯರಿಗೆ ಸಹಚರರಿಗೆ ಒಳ್ಳೆಯ ಮಾದರಿ ಇವಳು
ಇದ್ಯಾವುದೂ ಉತ್ಪ್ರೇಕ್ಷೆಯಲ್ಲ ನೆಚ್ಚಿನ ಸರಸ್ವತಿಯೇ
ನಮ್ಮ ಹೃದಯಾಳದ ಮಾತು ನಗುನಗುತ ಬಾಳು ಗೆಳತಿಯೇ
ಮನಸ್ಸಿನ ಇಷ್ಟಾರ್ಥ ಪೂರೈಸಲಿ ಆ ದುರ್ಗೆ ನಿನಗೆ

ಹುಟ್ಟಿದ ಈ ಶುಭದಿನದಂದು ಸುಖವಾಗಿರು ಎಂದು ಹಾರೈಸುವೆವು ನಿನಗೆ

**5. ಮಂಗಳಗೌರಿ ಪೂಜೆ**

ಪ್ರಕೃತಿಯೆಂಬ ತೋಟದಿಂದ ವಿಧ ವಿಧ ಹೂಗಳ ಮಂಗಳಗೌರಿ ಪೂಜೆಗೆ ತರುವಾ ಬಾರೇ ಓ ಸಖೀ।

ಜಗಜ್ಜನನಿಯ ಪಾದಕೆ ಇಂದು ಸೃಷ್ಟಿಯ ತೋಟದಿಂದ

ಸುಗಂಧ ಸೂಸುವ ಬಗೆ ಬಗೆ ಪರಿಮಳದ

ಹೂಗಳ ತಂದು ತಾಯಿ ಗೌರಿಗೆ ಅರ್ಪಿಸುವೆನು ಇಂದು।

ಹಸಿರು ಗಿಡಗಳಲಿ ನಸುನಗುತಿರುವ ಸುವಾಸನೆ

ಸೂಸುವ ಹೂವಿನ ತೋಟದಿಂದ

ಮಲ್ಲಿಗೆ ಜಾಜಿ ಮರ್ಲೆ ಹೂಗಳ ಕೊಯ್ದು

ಹಾರವ ಮಾಡಿ ಶಿವೆಗರ್ಪಿಸುವ ಇಂದು।

ಚಂಪಕ ನಾಸಿಕೆಗೆ ಸಂಪಿಗೆ ಹೂಗಳರ್ಚನೆಯು

ಪಾರಿಜಾತ ಹೂ ಆರಿಸಿ ಹಾರವು

ಕೇದಿಗೆ ಹೂವನು ತುರುಬಿನೊಳ್ ಇರಿಸಿ

ಸಂತೋಷಿಸುವೆ ಸುಗಂಧರಾಜದಿಂದಲಂಕರಿಸಿ।

ಹಂಸಯುಕ್ತ ಸರೋವರದಲ್ಲಿರುವ ನಸುಗೆಂಪು

ಮೊಗ್ಗಿನ ತಾವರೆಯನು ಹಾಗೂ ಬಿಳಿಯ ನೈದಿಲೆಯನು ಕಿತ್ತು

ಜಗದಂಬೆಗೆ ಅರ್ಪಿತ ಎನುವ ಬಾರೆ।

ಮರುಗ ದವನ ಪನ್ನೀರು ಪತ್ರೆಗಳು

ಅರ್ಧನಾರೀಶ್ವರಿಗೆ ತುಳಸಿ ಬಿಲ್ವ ಪತ್ರೆಗಳನು

ಬಗೆ ಬಗೆ ರೋಜಾ ಸೇವಂತಿಗೆ ಹೂಗಳನು

ಕೊಂಡೊಯ್ಯುವ ಬಾರೆ ಗೌರಿ ಪೂಜೆಗೆ।

ಕನಕಾಂಬರ ನೀಲಾಂಬರ ರುದ್ರಾಕ್ಷಿ ಮಾಲೆಯು ದೇವಿಯ ಅಲಂಕಾರಕೆ

ಸೃಷ್ಟಿಗೊಡೆಯಳೆ ನೀನಿತ್ತ ಹೂಗಳ ನಿನಗರ್ಪಿಸಿ

ಬೇಡುವೆ ಸುಖ ಸೌಭಾಗ್ಯ ನೀಡೆನುತಾ।

ನಾದಾರ್ಚನೆಯ ಸದಸ್ಯರಾದ ಸುನೀತಾರವರು, ಕೆಲವು ಚಿತ್ರಗೀತೆಗಳ ಸಾಹಿತ್ಯವನ್ನು ಸಂದರ್ಭಕ್ಕೆ ಅನುಸಾರವಾಗಿ ಸುಮ್ಮನೆ ತಮಾಷೆಗೆ ಬದಲಿಸಿದ್ದಾರೆ. ಸ್ವಲ್ಪ ಉದ್ಧಟತನ ಎನಿಸಿದರೆ ಕ್ಷಮೆ ಇರಲಿ.

**1.** ನಿದ್ದೆ ಬಂದಿಲ್ಲ

ಒಮ್ಮೆ ನಾದಾರ್ಚನೆಯ ಸದಸ್ಯರಾದ ಸಂಧ್ಯಾರವರು, ನಾಳೆ ಎಲ್ಲರೂ ನಿದ್ದೆ ಬಗ್ಗೆ ಮಾತನಾಡಬೇಕೆಂದು Home work ಕೊಟ್ಟಿದ್ದರು. ಮಾತನಾಡಲು ಏನೂ ತೋಚದೆ, ಬರೆದ ಹಾಡು ಇದು.

ಚಿತ್ರಗೀತೆ – "ಕೃಷ್ಣನ್ **Marriage Story**" ಸಿನಿಮಾದ "ನಿದ್ದೆ ಬಂದಿಲ್ಲಾ" ಹಾಡು.

ನಿದ್ದೆ ಬಂದಿಲ್ಲಾ ನಂಗೆ ನಿದ್ದೆ ಬಂದಿಲ್ಲಾ
ರಾತ್ರಿ ಎಲ್ಲಾ ಇದನ್ನೇ ಯೋಚ್ಸಿ ನಿದ್ದೆ ಬಂದಿಲ್ಲಾ
ನಿದ್ದೆ ಬಂದಿಲ್ಲಾ ನಂಗೆ ನಿದ್ದೆ ಬಂದಿಲ್ಲಾ
ನಾಳೆ ಏನು ಹೇಳೋದಂತ ಚಿಂತೆ ಬಂತಲ್ಲಾ
ಸಂಧ್ಯ ಬೇರೆ ನಿದ್ದೆ ಬಗ್ಗೆ ಮಾತಾಡಿ ಅಂದ್ಲಲ್ಲಾ
ಹುಚ್ಚು ಮನಸ್ಸು ಕಣ್ಣು ಮುಚ್ಚಲಿಲ್ಲಾ
ರೆಪ್ಪೆ ನಡುವೆ ಕೇಕೆ ಹಾಕಿತಲ್ಲಾ
ಏನೇ ಆದ್ರೂ ಬೇರೆ ದಾರಿ ಇಲ್ಲವೇ ಇಲ್ಲ
ಎಲ್ಲಾರೂ ತುಂಬಾ ಚೆನ್ನಾಗಿ ಮಾತಾಡ್ತಾರಲ್ಲಾ
ಅಕ್ಕಾ, ವಸು, ಪೂರ್ಣೆ ಜಾಣ ಮಾತುಗಾರರೆಲ್ಲಾ
ಯೋಚ್ಸಿ ಯೋಚ್ಸಿ ಏನೂ ಹೊಳೀದೆ ನಿದ್ದೆ ಬಂತಲ್ಲಾ
ರಾಮ ರಾಮ ಏನು ಮಾಡ್ಲಿ ಈಗ ನಾನು
ನಿದ್ದೆ ಬಗ್ಗೆ ಏನು ಹೇಳ್ಲಿ ದೇವ್ರೆ ನಾನು
ಹಾಳು ನಿದ್ದೆ ರಾತ್ರಿ ಬರದೆ ಬೆಳಗ್ಗೆ ಬಂತಲ್ಲಾ
ಬೇಗ ಬೇಗ ಅಡುಗೆ ಬೇರೆ ಮುಗಿಸ್ಬೇಕಲ್ಲಾ
ಏನು ಮಾಡ್ಲಿ Office car ಉ ಬಂದೇ ಬಿಡ್ತಲ್ಲಾ
ನಿದ್ದೆ ಬಂದಿಲ್ಲಾ ನಂಗೆ ನಿದ್ದೆ ಬಂದಿಲ್ಲಾ

2. ಮಳೆ

ನಾದಾರ್ಚನೆಯ ಸದಸ್ಯರಾದ ಸಂಧ್ಯಾರವರು, "ದಿನಕ್ಕೊಂದು ಪದ" ಅಂತ ಕಾರ್ಯಕ್ರಮ ಮಾಡಿದ್ದರು.ಅದರ ಪ್ರಕಾರ, ಆ ದಿನದ ಎಲ್ಲಾ ಹಾಡುಗಳ ಸಾಲುಗಳಲ್ಲಿ ಅವರು ಹೇಳಿದ ಪದ ಇರುವಂತೆ ಹಾಡುಗಳನ್ನು ಆಯ್ಕೆ ಮಾಡಿಕೊಳ್ಳಬೇಕಿತ್ತು. ಮಳೆ ಎನ್ನುವ ಪದಕ್ಕೆ ಬರೆದ ಹಾಡು ಇದು.

ಚಿತ್ರಗೀತೆ – "ಬಣ್ಣದ ಗೆಜ್ಜೆ" ಚಿತ್ರದ "ಸ್ವಾತಿ ಮುತ್ತಿನ ಮಳೆ ಹನಿಯೇ" ಹಾಡು.

ಸ್ವಾತಿ ಮುತ್ತಿನ ಮಳೆ ಹನಿಯೇ
ಬೇಗ ಬೇಗನೆ ಧರೆಗಿಳಿಯೇ
ಈಗ ನಾನು ಮನೆಯಲಿ ಇರುವೆ ಬೆಚ್ಚಗೆ ಹಾಯಾಗಿ
ಬಿಸಿ ಬಿಸಿ ತಿಂಡಿ ರೆಡಿಯಾಗುಂಟು ತಿನ್ನಲು ಸವಿಯಾಗಿ
ಮಳೆಯ ಸುಳಿವೇ ಇರದೆ ಆಫೀಸಿಗೆ ಹೋದಾಗ
ಕೊಡೆಯೂ ಸಹ ಇಲ್ಲದಾಗ
ಮನೆಗೆ ಹೊರಡುವ ಹೊತ್ತಿನಲಿ ಧೋ ಎಂದು ನೀ ಸುರಿವೆ
ಬೆಂಗಳೂರಿನ ರೋಡುಗಳು ಕೆರೆಯಂತೆ ಆದಾಗ
ಟ್ರಾಫಿಕ್ ಸಹ ನಿಂತಾಗ
ನೀ ಬಲು ಸಂಭ್ರಮದಿಂದ ನಮ್ಮನು ತೋಯಿಸುವೆ
ಆ ಗುಡುಗಿನ ಆರ್ಭಟದಿ ಮನೆಯ ಕರೆಂಟು ಮಾಯ
ಜೊತೆ ಟಿವಿ ಸಿಗ್ನಲ್ ಮಾಯ
ಕಡೆಗುಳಿದಾ ಕೆಲಸವಿದೇ ನಾವ್ ಹಾಡುವ ಸವಿಗಾನ

**3. ಅಧಿಕಮಾಸ**

ಅಧಿಕಮಾಸದ ಆಚರಣೆಯ ಸಮಯದಲ್ಲಿ ಒಂದು ವಿಶೇಷ ಕಾರ್ಯಕ್ರಮವನ್ನು ನಾದಾರ್ಚನೆ ತಂಡವು ಹಮ್ಮಿಕೊಂಡಿತ್ತು. ಅದಕ್ಕೆ ಬರೆದ ಪುಟ್ಟ ಹಾಡು.

ಚಿತ್ರಗೀತೆ – "ಮಾಯಾಬಜಾರ್" ಚಿತ್ರದ "ವಿವಾಹ ಭೋಜನವಿದು" ಹಾಡು.

ಅಧಿಕಮಾಸ ಬಂದಿತಲ್ಲ ಸಂಭ್ರಮ ತಂದಿತಲ್ಲ
33 ನಾಣ್ಯ ಹುಡುಕೋ ಕೆಲಸ ಬಂದಿತಲ್ಲಾ --- ಅಹಹಾ

33 ಹೂಬತ್ತಿಗಳು Perfect Circle ಆದವಲ್ಲಾ

ಅಂಥ 33 ಉಂಡೆಗಳು, ಅಬ್ಬಬ್ಬ ಎಂಥ ದೃಶ್ಯ

ಅಧಿಕಮಾಸ ಬಂದಿತಲ್ಲ ಸಂಭ್ರಮ ತಂದಿತಲ್ಲ, 33 ಚಾಕೊಲೇಟುಗಳು ಆಫೀಸು ಸೇರಿದುವಲ್ಲಾ

33 ಬೆಲ್ಲದ ಅಚ್ಚು 33 ಖರ್ಜೂರಗಳು

33 ಗೋಡಂಬಿಗಳು ಅಹಹ್ಹ ಹೊರಟವಲ್ಲಾ

ಅಧಿಕಮಾಸ ಬಂದಿತಲ್ಲ ಸಂಭ್ರಮ ತಂದಿತಲ್ಲ, 33 ಶ್ಲೋಕಗಳನು ನಾವೆಲ್ಲ ಹಾಡಿದೆವಲ್ಲಾ

33 ದೀಪಗಳು 33 ಮಲ್ಲಿಗೆ ಹೂಗಳು

33 ದೀಪದಾರುತಿ ನಮ್ಮ ಕೃಷ್ಣಗೆ ಬೆಳಗಿತಲ್ಲಾ

ಅಧಿಕಮಾಸ ಬಂದಿತಲ್ಲ ಸಂಭ್ರಮ ತಂದಿತಲ್ಲ, 33 ರಂಗೋಲಿಗಳಿಂದ ಭಗವದನುಗ್ರಹ ಸಿಕ್ಕಿತಲ್ಲಾ

ಎರಡು ಸಾವಿರದ ನೋಟು 33 ಬಂದಿತಲ್ಲ

ಅದರ ಸದುಪಯೋಗದ ಕಾರ್ಯ ಪ್ರಾರಂಭವಾಯಿತಲ್ಲಾ

ಅಧಿಕಮಾಸ ಬಂದಿತಲ್ಲ ಸಂಭ್ರಮ ತಂದಿತಲ್ಲ, 33 ದೇವರನಾಮ ಹೇಳೋ ಸಮಯ ಬಂದಿತಲ್ಲಾ

4. ಅಕ್ಕ- ಬಾವ

ಲತಾ ಶ್ರೀಧರ್ Marriage Anniversary ಸಂದರ್ಭದಲ್ಲಿ ನಾದಾರ್ಚನೆ ತಂಡದ ಸದಸ್ಯರು ನಡೆಸಿದ ಕಾರ್ಯಕ್ರಮಕ್ಕೆ ಬರೆದ ಹಾಡು.

ಚಿತ್ರಗೀತೆ – “ದೇವತಾ ಮನುಷ್ಯ” ಚಿತ್ರದ “ನಿನ್ನಂಥ ಅಪ್ಪ ಇಲ್ಲ” ಹಾಡು.

ನಿಮ್ಮಂಥ ಜೋಡಿ ಇಲ್ಲಾ ನಿಮ್ಮಿಬ್ರ ಮಾತೇ ಬೆಲ್ಲ

ನಿಮ್ಮ ಪ್ರೀತಿ ಅಚಲ, ನಿಮ್ಮ ಕದನ ಅಮರ

ಎಲ್ರ ಬಗ್ಗೆ ತುಡಿವ ನಿಮ್ಮ ಮನವು ಎಂದೂ ಮಧುರ

ನೀವು ಹಾಡಲು, ಹೊಸದನ್ನು ಕಲಿಯಲು ಎಲ್ಲರಲ್ಲೂ ಬಂದಿತು ಕಲಿಯುವ ಹಾಡುವ ಸಡಗರ

ನಿಮ್ಮಿಬ್ರ ದೈವಭಕ್ತಿ ಸಹಕಾರಕ್ಕೆ ನಾವು ಸೋತೆವು

ಸಂತೋಷವೆಂದರೆ ಉಲ್ಲಾಸವೆಂದರೆ ಸಂಗೀತವೆಲ್ಲವೂ ನಿಮ್ಜೊತೆ ಇದ್ದರೆ

ಕೇಕು ಎಂದರೆ ಆಂಬೊಡೆ ಎಂದರೆ ಒಬ್ಬಟ್ಟು ಎಂದರೆ ನಿಮ್ಮದೇ ನೆನಪು ನಮಗೆ

ನಿಮ್ಮಿಬ್ರ ಸಂತೋಷ ಹೀಗೇ ಇರಲೆಂದು ನಾವು ಬಯಸುವೆವು

### 5. Super Sandhya

ನಾದಾರ್ಚನೆಯ ಸದಸ್ಯರಾದ ಸಂಧ್ಯಾರವರ ಹುಟ್ಟುಹಬ್ಬದ ಆಚರಣೆಯ ಕಾರ್ಯಕ್ರಮಕ್ಕೆ ಬರೆದ ಹಾಡು.

ಚಿತ್ರಗೀತೆ – "ಮಾಯಾಬಜಾರ್" ಚಿತ್ರದ "ಅಹಾ ನನ್ನ ಮದುವೆಯಂತೆ" ಹಾಡು.

ಆಹಾ ನಮ್ಮ ಸೂಪರ್ ಸಂಧ್ಯಾ

ಓಹೋ ನಮ್ಮ ಸಂಧ್ಯಾ ಸೂಪರ್

ಇವಳೇ ನಮ್ಮ ಸುಂದರ ಸಂಜೆಯ

ಮೊದಲಿಗಳಾಗಿ ಹಾಡುವ ಸಂಧ್ಯಾ  ಅ ಹಾ ಹಾ

ಇವಳ ಮಾತು ಚಂದ ಉಂಟು

ಇವಳ ನೆನಪು ಬಹಳ ಉಂಟು

ಇವಳಿಗೆ ಗೊತ್ತು ಹಾಡು ನೂರೆಂಟು

ಅಕ್ಷರದೊಂದಿಗೆ ಇವಳ ನಂಟು  ಓ ಹೊ ಹೊ

ಇವಳು ಬರೆದಳು ಭಾಂದವ್ಯ

ಬುದ್ಧಿಮಾತು ವಿಧೇಯತೆ

ನಮನ ವಿವೇಕ ಮೌನ

ಹೊಗೆ ವಂದನೆ ಅಭಿನಂದನೆ

You tube, Internet ಬೇಕಾಗಿಲ್ಲ

WhatsApp ಅಂತೂ ಬೇಡವೇ ಬೇಡ

ಆದರೂ ಇರುವುದು ನಾಲಿಗೆ ತುದಿಯಲಿ

ಯಾವುದೇ ಅಕ್ಷರ ಪದಗಳ ಹಾಡು

ಸಂಧ್ಯ ಮೇಡಂ ಭಾರೀ Strict ಉ

ಬರುವುದು Home Work ಪದಗಳ ರೂಪದಿ

ಕೊಡುವುದು ನಮ್ಮ ತಲೆಗೆ ಬುದ್ಧಿಗೆ

ಯೋಚಿಸಿ ಹುಡುಕುವ ಕಸರತ್ತು

ಆಹಾ ನಮ್ಮ ಸೂಪರ್ ಸಂಧ್ಯಾ

ಓಹೋ ನಮ್ಮ ಸಂಧ್ಯಾ ಸೂಪರ್

ನಮ್ಮಯ ಭಾಗ್ಯ ಈ ಚತುರೆಯ

ಸ್ನೇಹ ತುಂಬಿದ ಪ್ರೀತಿಯ ಪರಿಚಯ

**6. ಪೂರ್ಣಿಮಾ Birthday**

ನಾದಾರ್ಚನೆಯ ಸದಸ್ಯರಾದ ಪೂರ್ಣಿಮಾರವರ ಹುಟ್ಟುಹಬ್ಬಕ್ಕೆ ಬರೆದ ಹಾಡುಗಳು.

ಚಿತ್ರಗೀತೆ – "ಮೇಯರ್ ಮುತ್ತಣ್ಣ" ಚಿತ್ರದ "ಹಳ್ಳಿಯಾದರೇನು ಶಿವಾ" ಹಾಡು.

ಹಳ್ಳಿಯಾದರೇನು ಶಿವಾ ಮೈಸೂರಾದರೇನು ಶಿವಾ

ಜಗವೆಲ್ಲ ಮೇಡಮ್ ಶಿವಾ ಪೂರ್ಣಿಗೆಲ್ಲಾ ಅವರೇ ಶಿವಾ

ಡಾಕ್ಟರೇಟು ಸಿಕ್ಕರೇನು ಮದುವೆಯು ಆದರೇನು

ಮಕ್ಕಳ ತಾಯಿಯಾದರೂ ಕಾರಿನ ಒಡತಿಯಾದರೂ

ಮೇಡಮ್ ಗಾಗಿ ಎಲ್ಲಾ ಅವರಿಂದಲೇ ಎಲ್ಲಾ

ಪೂರ್ಣಿಯ ಮನಸಿನ ತುಂಬಾ ಓ

ಅವಳ ಮೇಡಮ್ ಶಿವಾ ಜಗವೆಲ್ಲಾ ಮೇಡಮ್ ಶಿವಾ

ಹಬ್ಬಗಳಾದರೇನು ದಸರಾ ಆದರೇನು

ಮೇಡಮ್ ಮಕ್ಕಳು ಬಂದಾಗ ಅವರ ಮನೆಯೇ ಸ್ವರ್ಗ ಅವಳಿಗೆ

ಮೆಡಮ್ ತಂಟೆಗೆ ಬಂದ್ರೆ ಅವರ ಗಂಡ ಆದರೇನು

ಪೂರ್ಣಿಯ ಮಾತಿನ ಬಾಣಕೆ ಓ

ತತ್ತರಿಸಿ ಹೋದರಲ್ಲವೇ ಓ ಜಗವೆಲ್ಲಾ ಮೇಡಮ್ ಶಿವಾ

**7. Mathematics**

ಪೂರ್ಣಿಮಾರವರಿಗಾಗಿ, ಅಗಾಧವಾದ ವಿಷಯವಾದ Mathematics ಬಗ್ಗೆ ಒಂದು ಹಾಡು ಬರೆಯುವ ಕಿರು ಪ್ರಯತ್ನ.

ಚಿತ್ರಗೀತೆ – "ಪ್ರೇಮದ ಕಾಣಿಕೆ" ಚಿತ್ರದ "ಬಾನಿಗೊಂದು ಎಲ್ಲೆ ಎಲ್ಲಿದೆ" ಹಾಡು.

ಗಣಿತಕ್ಕೊಂದು ಎಲ್ಲೆ ಎಲ್ಲಿದೆ, ಅದರ ವ್ಯಾಪ್ತಿಗೆಲ್ಲಿ ಕೊನೆಯಿದೆ

ಆರ್ಯಭಟ ರಾಮಾನುಜರು, ಭಾರತದ ಗಣಿತಜ್ಞರು

Arithmetic Algebra ನೋಡಬನ್ನಿರಿ

Calculus Geometry ಕಲಿತು ನಲಿಯಿರಿ

ಗಣಿತ ನಿಯಮ ಮೀರಿ ಇಲ್ಲಿ ಏನು ಸಾಗದು

Number Theory ಇಲ್ಲದಲ್ಲಿ ಏನೂ ನಡೆಯದು

Problem ಆಗಲಿ, Solution ಆಗಲಿ ಅದೇನೆ ಆದರೂ ಗಣಿತ ಕಾರಣ

Trigonometry Topology Set Theory ಗಳು

Analysis Equations Graph Theory ಗಳು

Statistics Probability Game Theory ಗಳು

Cryptography Differential Equation ಗಳು

Zero ಆಗಲಿ Infinity ಆಗಲಿ ಅವೆಲ್ಲವೂ ಸಹಾ ಗಣಿತದಲ್ಲಿವೆ

**8. ಲತಾ Birthday**

ನಾದಾರ್ಚನೆ ತಂಡದ ನಾಯಕಿಯಾದ, ನಮ್ಮೆಲ್ಲರ ಅಚ್ಚುಮೆಚ್ಚಿನ ಲತಾರವರ ಹುಟ್ಟುಹಬ್ಬಕ್ಕೆ ಬರೆದ ಹಾಡು.

ಚಿತ್ರಗೀತೆ – "ನಾಗರಹಾವು" ಚಿತ್ರದ "ಕನ್ನಡನಾಡಿನ ವೀರ ರಮಣಿಯ" ಹಾಡು.

ನಾದಾರ್ಚನೆಯ ಪ್ರೀತಿಯ ಸ್ಥಾಪಕಿ

ಅರ್ಚನ ಅಪ್ಪಿಯ ನೆಚ್ಚಿನ ತಾಯಿಯ,

ನಗಿಸಲು ನಾನು ಹಾಡುವೆ

ತಂದೆ ತಾಯಿಯ ಮುದ್ದಿನ ಕುವರಿ

ಎಳೆತನದಿಂದಲೂ ರಾಜಕುಮಾರಿ

ತೆಲುಗಿನ ನಾಡಲಿ ವಿದ್ಯೆಯ ಕಲಿತು

ಬಂದಳು ಬೇಗ ಕಾಲೇಜು ತನಕ

ಅಜ್ಜಿ ಮನೆಯಲಿ ಓದಲು, ಬಂದಳು ಕನ್ನಡ ನಾಡಿಗೆ

ಮುಗಿಯಿತು ಕಲಿಕೆ ಗಂಗೋತ್ರಿಯಲಿ

ಸಿಕ್ಕಿತು ಸಿರಿಯು ಪಕ್ಕದ ಮನೆಯಲಿ

ಆರಂಭವಾಯಿತು ಜೀವನ ಚಕ್ರ

ತಾಯಿಯಾಗಿ ಅಧ್ಯಾಪಕಿಯಾಗಿ

ನೆಚ್ಚಿನ ಗಣಿತದ ಪಾಠದಲಿ, ಯುವರಾಜಾ ಕಾಲೇಜಿನಲಿ

ಬೆಳೆಯಿತು ವರ್ಚಸ್ಸು ಕುಟುಂಬದಲಿ

ನಡೆದಳು ಸಾಧನೆಯ ಮಾರ್ಗದಲಿ

ಪಡೆದಳು PhD ಗಣಿತದಲಿ

ನೆಚ್ಚಿನ ಗುರುವಾದಳು ಶಿಷ್ಯರಲಿ

ಕಾರಣವಾದಳು ಮಕ್ಕಳಿಬ್ಬರ, ಸರ್ವತೋಮುಖ ಅಭಿವೃದ್ಧಿಯಲಿ

ಪೂಜಿಸಿದಳು ಜಗದಂಬೆಯನು

ಕಲಿತಳು ದೇವೀ ಸಪ್ತಶತಿಯನು

ಸುಂದರವಾಗಿ ಎಲ್ಲಾ ವ್ರತಗಳ

ನಡೆಸಿದಳು ಬಲು ತೃಪ್ತಿಯಿಂದ

ಶೃಂಗೇರಿ ಶಾರದೆ ದಯೆಯಿಂದ, ವೇಂಕಟರಮಣನ ಕೃಪೆಯಿಂದ

ಸಂಚರಿಸಿದಳು ಪ್ರಪಂಚವೆಲ್ಲಾ

ಸಿಂಗಪೂರಿನಿಂದ ಅಮೆರಿಕಾವರೆಗೆ

ದುಬಾಯಿ ಯೂರೋಪುಗಳನು ಬಿಡದೆ

ಕಂಡಳು ಭಾರತದ ಮೂಲೆ ಮೂಲೆಯನು

ಬೆಟ್ಟ ಗುಡ್ಡಗಳ ಹತ್ತಿದಳು, ದೇವರ ಸೇವೆ ಮಾಡಿದಳು

ಚಿತ್ರಕಲೆಯನು ಅಭ್ಯಸಿಸಿದಳು

ಸುಶ್ರಾವ್ಯವಾಗಿ ಹಾಡಿದಳು

ರುಚಿರುಚಿಯಾದ ಭಕ್ಷ್ಯಗಳನ್ನು

ತಯಾರಿಸಿದಳು ಎಲ್ಲರಿಗಾಗಿ

ಕರೋನಾದ ಈ ಕಾಟದಿಂದ ನಮ್ಮೆಲ್ಲರ ಕಾಪಾಡಿದಳು

**9. ವಸಂತ Birthday**

**ನಾದಾರ್ಚನೆ ಸದಸ್ಯರಾದ ವಸಂತಾರವರ ಹುಟ್ಟುಹಬ್ಬಕ್ಕೆ ಹೇಳಿದ ಹಾಡು.**

ಚಿತ್ರಗೀತೆ – "ವಸಂತಲಕ್ಷ್ಮಿ" ಚಿತ್ರದ "ಹೆಣ್ಣುಗಳೆಂದು ಅಬಲೆಯರಲ್ಲ" ಹಾಡು.

ಹೆಣ್ಣುಗಳೆಂದೂ ಅಬಲೆಯರಲ್ಲ ಧೈರ್ಯ ತುಂಬಿರಲು
ಬಾಳಲಿ ಎಂದೂ ಸೋಲಲಿಲ್ಲ ವಸಂತ ಲಕ್ಷ್ಮಿಯು
ಮೂರು ಗಂಡುಗಳಿದ್ದರು ಕೂಡ ಮನೆಯ ಹಿರಿತನ ಉಂಟು
ಸಮಯದಲ್ಲಿ ಸಾಹಸ ಶೌರ್ಯ ತೋರಿಸಿದ್ದೂ ಉಂಟು
ಇದನು ಅರಿತ ಹಾ, ಛಾಯಾ ಆದ ಹಾ, ಛಾಯಾಚಿತ್ರ ಮನೆಯ ಒಳಗೆ
ಯಾರು ನಂಬೋರು ಇದನು
ಹಿರಿಯರ ಸೇವೆ ಕಿರಿಯರ ಸ್ನೇಹ ಎಲ್ಲ ಉಂಟು ಇಲ್ಲಿ
ಕೆಲಸದಿ ಜಾಣ್ಮೆ ಕರುಣೆ ತಾಳ್ಮೆ ಪ್ರೀತಿ ಉಂಟು ಇಲ್ಲಿ
ಇವಳ ಹಾಗೆ ಹಾ, ಯಾರೂ ಇಲ್ಲ ಹಾ, ನಾದಾರ್ಚನೆಯ ಕಣ್ಮಣಿ ಇವಳು
ಎಂದು ಅರಿತಾಗ ಗೆಲುವೇ

**10. ಅಪ್ಪಿಮುದ್ದು Birthday**

ನಾದಾರ್ಚನೆಯ ಪುಟಾಣಿ ಸದಸ್ಯೆಯಾದ ಅಪರ್ಣಾ ಅವರ ಜನುಮದಿನದ ಸಂದರ್ಭದಲ್ಲಿ ಸಂಧ್ಯಾರವರು ನಡೆಸಿದ "Lighting our lives since 1982" ಕಾರ್ಯಕ್ರಮದಲ್ಲಿ ಹಾಡಿದ ಪುಟ್ಟ ಹಾಡು.

ಚಿತ್ರಗೀತೆ – "ಬೆಳ್ಳಿಮೋಡ" ಚಿತ್ರದ "ಮುದ್ದಿನ ಗಿಣಿಯೆ ಬಾರೋ" ಹಾಡು.

ಮುದ್ದಿನ ಅಪ್ಪಿ ಬಾರೋ ಮುತ್ತನು ತರುವೆ ಬಾರೋ
ಏರೋಪ್ಲೇನ್ ಏರಿ ಹಾರಿ ಬಂದು ಕೇರಮ್ ಆಟ ಆಡೋ
ನೀ ಅಜ್ಜಿಯೊಡನೆ ಆಡೋ

ಊರಿಂದ ಮಾಮ ಬರ್ತಾನೆ ಅತ್ತೆ Cousins ತರ್ತಾನೆ
ಓಡೋಡಿ ಬಂದು ಪುಟಾಣಿ ಅಪ್ಪಿಗೆ ದೊಡ್ಡ ಬುಕ್ಕು ತರ್ತಾನೆ
ನಿನ್ನ ಕೆಲಸ ಕಲಿಕೆ ನೋಡಿ ನಿನ್ನೊಡನೆ ಮಾತನಾಡಿ ನಿನಗೊಂದು ಕಥೆಯ ಹೇಳಿ
ಅಪ್ಪಿಯಂಥ ಕೂಸಿಲ್ಲ ಎನ್ನುತಾನೆ ನಮ್ಮ ಅಪ್ಪಿಯಂಥ ಕೂಸಿಲ್ಲ ಎನ್ನುತಾನೆ

ಅಮ್ಮ ಒಬ್ಬಟ್ ಮಾಡ್ತಾರೆ ಅಪ್ಪ ರೊಟ್ಟಿ ಮಾಡ್ತಾರೆ

ಅಜ್ಜಿ ತಾತ ನಿನಗಾಗಿ ತಿಂಡಿ ಪೂಜೆ ಎಲ್ಲಾ ಮಾಡ್ತಾರೆ

ನಿನಗಾಗಿ ನಿನ್ನ ತಾಯಿ ಇಲ್ಲಿ ಕಾಯುತಿರುವಳಲ್ಲ ಅದಕಿಂತ ಬೇರೆ ಇಲ್ಲಾ

ತಾಯಿಗಿಂತ ಮಿಗಿಲಾದ ದೇವರಿಲ್ಲ, ನಿನ್ನ ತಾಯಿಗಿಂತ ಮಿಗಿಲಾದ ದೇವರಿಲ್ಲ

**11. ಬಾವ Birthday**

ಶ್ರೀಧರ್ ಅವರು ಯಾವಾಗಲೂ ಒಂದು ತೆಲುಗು ಹಾಡು ಹೇಳ್ತಾರೆ. ಅದೇ ಹಾಡಿನ ಸಾಲುಗಳನ್ನು ಅವರ ಹುಟ್ಟುಹಬ್ಬದ ಪ್ರಯುಕ್ತ ಸ್ವಲ್ಪ ಬದಲಾಯಿಸಿದ್ದೇನೆ.

ಚಿತ್ರಗೀತೆ – "ದೇವತ" ತೆಲುಗು ಚಿತ್ರದ "ಆಲಯಾನ ವೆಲಸಿನ" ಹಾಡು.

ಆಲಯಾನ ವೆಲಸಿನ ಆ ದೇವುನಿ ರೀತಿ (ದೇವಾಲಯದಲ್ಲಿರುವ ಆ ದೇವನ ರೀತಿ)

ಬಾವಗಾರೇ ಈ ಇಂಟಿಕಿ ಜೀವನ ಜ್ಯೋತಿ (ಬಾವಾನೇ ಈ ಮನೆಯ ಜೀವನ ಜ್ಯೋತಿ)

ಅಕ್ಕಗಾರ್ನಿ ಮುರಿಪಿಂಚೇ ಸಹೃದಯ ಸ್ನೇಹಂ (ಅಕ್ಕನಿಗಾಗಿ ಮುಡುಪಿಟ್ಟ ಸಹೃದಯ ಸ್ನೇಹ)

ಜೀವಿತಮೇ ಅಂದಾಲ ನವ್ವುಲ ಗಾನಂ (ಜೀವನವೇ ಸುಂದರವಾದ ನಗುವ ಗಾನ)

ಕಷ್ಟ ಸುಖಾಲಲೋ ತೋಡುನೀಡಗಾ (ಕಷ್ಟ ಸುಖಗಳಲಿ ಜೊತೆಜೊತೆಯಲಿ)

ತಲ್ಲಿನಿ ಮರಪಿಂಚೇ ಆತ್ಮೀಯ ಆದರಣ (ತಾಯಿಯನೂ ಮರೆಸುವ ಆತ್ಮೀಯತೆಯಲಿ)

ಬಾವಗಾರೇ ಅಕ್ಕಗಾರಿ ಮಧುರಭಾವನ (ಬಾವಾನೇ ಅಕ್ಕಯ್ಯನ ಮಧುರಭಾವನ)

ಸೇವಲತೋ ಅತ್ತಮಾಮ ಸಂತಸಿಂಚಗಾ (ಸೇವೆಗಳಿಂದ ಹಿರಿಯರೆಲ್ಲ ಸಂತಸ ಪಡಲು)

ಅಂದರಿನೀ ಆದರಿಂಚು ಮಂಚಿಮನಿಷಿಗಾ (ಎಲ್ಲರನ್ನೂ ಆದರಿಸುವ ಮನಸ್ಸುಳ್ಳವರು)

ಪಿಲ್ಲಲ್ನಿ ಪ್ರೇಮಗಾ ಪೆಂಚೇ ತಂಡ್ರಿಗಾ (ಮಕ್ಕಳನ್ನು ಪ್ರೀತಿಯಿಂದ ಕಾಣುವ ತಂದೆಯು)

ಅತಡೇ ಗೃಹಸೀಮನು ಕಾಚೇ ದೇವುಡಿಗಾ (ಅವರನ್ನು ಗೃಹವನ್ನು ಕಾಪಾಡುವ ದೇವರಾಗಿ)

ಸೃಷ್ಟಿಂಚೆನು ಆ ದೇವುಡು ತನಕು ಮಾರುಗಾ (ಸೃಷ್ಟಿಸಿದನು ಭಗವಂತ ತನಗೆ ಬದಲಾಗಿ)

P.S: Sorry for the mediocre translation

ನಾದಾರ್ಚನೆಯ ಸದಸ್ಯರಾದ ಅರ್ಚನಾರವರು ತಮ್ಮ ಮಧುರವಾದ ಧ್ವನಿಯಲ್ಲಿ ಹಾಡಲು ಪ್ರಾರಂಭಿಸಿದರೆ ನಮ್ಮೆಲ್ಲರಿಗೂ "ಸ್ವರ್ಗಕ್ಕೆ ಮೂರೇ ಗೇಣು". ಎಲ್ಲರ ಅಚ್ಚುಮೆಚ್ಚಿನ ಅರ್ಚು ಅತ್ಯಂತ ಕ್ಲಿಷ್ಟವಾದ ಹಾಡುಗಳನ್ನೂ ಸಹಾ ಸ್ವಲ್ಪವೇ ಸಮಯದಲ್ಲಿ ಕಲಿತು ಹಾಡಬಲ್ಲ ಜಾಣೆ. ನಾದಾರ್ಚನೆಯ ಕಾರ್ಯಕ್ರಮಗಳಿಗೆ ನಾವೆಲ್ಲರೂ ಸೇರಲು ನಮಗೆ "Free Conference call" App ಹೇಗೆ ಉಪಯೋಗಿಸಬೇಕೆಂದು ತಿಳಿಸಿ, ಅದಕ್ಕೆ ಹಣ ತುಂಬಿ, Program ಗಳನ್ನು Record ಮಾಡಲು ಅನುಕೂಲ ಮಾಡಿಕೊಟ್ಟವರು. ಅವರ ಮಾತುಗಳು ಸರಳ, ಸುಂದರ, ಸುಲಲಿತ ಮತ್ತು ಆತ್ಮೀಯತೆಯ ಆಗರ.

**1.ನೆನಪಿನ ದೋಣಿಯಲಿ**

"ಶ್ರೀ ಗಣೇಶ ಶಾರದಾ ಗುರುಭ್ಯೋ ನಮಃ". ಎರಡುಸಾವಿರದ ಇಪ್ಪತ್ತು. ಈ ವರ್ಷ ಮುಗಿಯಲು ಉಳಿದಿರುವ ಕೆಲವೇ ದಿನಗಳಲ್ಲಿ, ಗಂಟೆಗಳಲ್ಲಿ, ಮನಸ್ಸೆಂಬ ಸಾಗರದಲ್ಲಿ, ನೆನಪಿನ ದೋಣಿಯಲಿ, ಮಸ್ತಿಷ್ಕವೆಂಬ Computer ನ Memory ಇಂದ ನನ್ನ ಬಾಲ್ಯದ ದಿನಗಳನ್ನ ಮೆಲುಕು ಹಾಕುವಂಥಾ ಅವಕಾಶ ಸಿಕ್ಕಿದೆ. ಇಪ್ಪತ್ತು, ಇಪ್ಪತ್ತೊಂದು ವರ್ಷಗಳಿಂದ ಮನೆಯಿಂದ ದೂರವಿದ್ದರೂ, ಅದು ಒಮ್ಮೊಮ್ಮೆ ಇಪ್ಪತ್ತು, ಇಪ್ಪತ್ತೊಂದು ದಿನಗಳೋ, ತಿಂಗಳುಗಳೋ ಮಾತ್ರ ಕಳೆದಿದೆ ಅನ್ನಿಸತ್ತೆ. "If you ignore the past, you jeopardise the future" ಅಂತ ಎಲ್ಲೋ ಒಂದುಕಡೆ ಓದಿದ್ದೆ. ನಾದಾರ್ಚನೆ ಎಂಬ ಈ ಬೆಸುಗೆ ದೇಶ ಕಾಲಗಳ ಹದ್ದುಗಳನ್ನು ದಾಟಿ, ನಮ್ಮ ಮತಿ, ಧೃತಿಗಳನ್ನು ಪ್ರಚೋದಿಸುವುದು ಮಾನವ ಪ್ರಯತ್ನಕ್ಕೆ ದೈವರಕ್ಷೆ ಎನ್ನಬೇಕು.

"ಪ್ರಥಮದಲ್ಲಿ ನಮಿಪೆ ನಿನ್ನ ಭೂತ ಗಣಪತಿ, ಸಕಲ ವೇದ ಶಾಸ್ತ್ರಕೆಲ್ಲ ನೀನೆ ಅಧಿಪತಿ,
ಶಿವಾ ಮಹಾದೇವನಾ ಮೋಹಸಂತತಿ, ನಿರ್ವಿಕಾರ ನಿತ್ಯಾನಂದ ಆತ್ಮಸಂಚರ,
ಸಕಲ ದೇವ ಸಕಲ ಋಷಿವರಾದಿ ಸ್ತುತಿವರ, ಹರಾ ಮುರಾ ಪರಾತ್ಪರಾ ಸದಾ ನಮೋಸ್ತುತೇ".

ಕನಸುಗಳು ಇಂದಿಗೂ ಕೂಡ **1304**, 1498/6, ಕೃಷ್ಣಮೂರ್ತಿಪುರಂ ನಲ್ಲಿ, ಬೆಂಗಳೂರಿನ ನಾಗಸಂದ್ರ ಸರ್ಕಲ್ ನಲ್ಲಿ, ಪಾಲ್ಟಂಚದಲ್ಲಿ ಬರುತ್ವೇ ಹೊರತು, ನಾವು ಈಗಿರುವ ಮನೆಗಳಲ್ಲಿ ಅಲ್ಲ. ಬೇರೊಂದು ದೇಶದಲ್ಲಿ ಮನೆ, ಮಕ್ಕಳು, ಕೆಲಸ, ಸಾಮಾಜಿಕ ಜವಾಬ್ದಾರಿಗಳು ಹೆಚ್ಚಾದರೂ ಮೂಲಭೂತವಾಗಿ ನಾನು ಮಗುವಾಗಿದ್ದಾಗ ಹೇಗಿದ್ನೋ ಹಂಗೇ ಇದೀನಿ ಅನ್ನಿಸತ್ತೆ. ಇಂದಿಗೂ ಎಲ್ಲರೂ **1980-90**ರ ದಶಕದಲ್ಲಿ ಹೇಗಿದ್ದರೋ ಹಾಗೇ ಇದಾರೆ ಅನ್ನಿಸತ್ತೆ. ವರ್ಷಗಳು ಕಳೆದರೂ, ಬೇರೆ ಬೇರೆ ಬದಲಾವಣೆಗಳು ಆದರೂ, ಎಷ್ಟು ಸರ್ತಿ ಮನೆಗೆ ವಾಪಸ್ಸು ಬಂದರೂ, ಮನಸ್ಸು ಹಿಂದಿನ ದಿನಗಳನ್ನ ನೆನಪಿಸಿಕೊಳ್ಳೋದು ಯಾಕೆ ಅನ್ನುವ ಪ್ರಶ್ನೆ ನನ್ನನ್ನು ಆಗಾಗ ಕಾಡ್ತಾ ಇತ್ತು. ಆದರೆ ಈ ವರ್ಷ ಆ Question ಗೆ ಕೂಡಾ ಉತ್ತರ ಸಿಕ್ಕಿದೆ. ನನ್ನ

ಜೀವನದ ಆ ಸಮಯ, ಈ ದಿನದ ನನ್ನನ್ನು ಸೃಷ್ಟಿಸಿದೆ ಅನ್ನಿಸತ್ತೆ. ಪ್ರತಿಯೊಂದು ಕ್ಷಣವೂ ನನ್ನ ಜೀವನದ ಅಸ್ತಿತ್ವದ ಒಂದು ಅಂಗವಾಗಿ, ಶ್ರೀರಕ್ಷೆಯಾಗಿ, ದಾರಿ ದೀಪವಾಗಿ, ದಾರಿಯೇ ಆಗಿ ಕಾಯುತ್ತಾ ಕಾಪಾಡುತ್ತಾ ಇದೆ ಅನ್ನಿಸತ್ತೆ. ಈ ನೆನಪುಗಳೇ ನನ್ನ ಆಸ್ತಿ, ನನ್ನ ಆತ್ಮವಿಶ್ವಾಸ.

ನನ್ನ Earliest Memory ಎಲ್ಲಿ ಅಂತ ಯೋಚನೆ ಮಾಡಿ ನೋಡಿದೆ. 1304 ಮನೆಯಲ್ಲಿ ಅಜ್ಜಿ, ತಾತ, ಅಮ್ಮ, ಅಪ್ಪ, ಶಂಕರ, ಸಂಧ್ಯ, 1498/6 ಮನೆಯಲ್ಲಿ ಸುನೀತಾ, ಅಜ್ಜಿ, ನರಸಿಂಹ, ಅಜ್ಜಿತಾತ, Family ಅಂದ್ರೆ ಎಲ್ಲಾರೂ ಒಟ್ಟಿಗೆ ನೆನಪಿಗೆ ಬರ್ತಾರೆ. ತಾಯಿ ಮೊದಲ ಗುರು, ಹೌದು. ಅಮ್ಮನ ಒಪ್ಪಿಗೆ, ಮೆಚ್ಚುಗೆ ಎಲ್ಲಕ್ಕಿಂತಾ ಅತ್ಯಮೂಲ್ಯ. ಅಪ್ಪನ ಪ್ರೀತಿ, ವಿಶ್ವಾಸ Unconditional. ಅದರ ಜೊತೆಗೆ ನೆನಪಿಗೆ ಬರೋದು ಅಜ್ಜಿ ಕಥೆಗಳು, ಸುನೀತನ ಜೊತೆ ಸೊಳ್ಳೆ ಪರದೇಲಿ ಸೇರಿ ಕೆಲವು ಕ್ಷಣಗಳ Extra ನಿದ್ದೆ, ಅಜ್ಜಿ ತಾತನ ಶ್ಲೋಕಗಳು, ತಾತನ ಊಟದ ತಟ್ಟೇಲಿ ಪಾಲು, ಶಂಕರನ ರೂಮಿನ ಎದುರು Gramophone ಹಾಡಿಗೆ Dance ಮಾಡೋದು, ಇದೆಲ್ಲಾ ಜ್ಞಾಪಕಕ್ಕೆ ಬರತ್ತೆ.

ಮೊದಲ ಶಾಲೆ ಭಗಿನೀ ಸೇವಾ ಸಮಾಜ. ಅಜ್ಜಿ ಮನೆ ಎದುರಿಗೇ ಇದ್ದಿದ್ದರಿಂದ ಶಾಲೆ, ಮನೆ ಅನ್ನೋ ವ್ಯತ್ಯಾಸ ಕಡಿಮೇನೇ ಆಯ್ತೇನೋ ಅನ್ನಿಸತ್ತೆ. ಸಂಧ್ಯ, ಸುನೀತ, ನಾನು, ಅಪ್ಪಿ ಎಲ್ಲರಿಗೂ ಬುನಾದಿಯಾದ ಈ ಶಾಲೆಯ ಪ್ರಾರ್ಥನೆ ಈಗಲೂ ನನ್ನ ದಿನಗಳನ್ನ ಬೆಳಗತ್ತೆ. "ರಘುಪತಿ ರಾಘವ ರಾಜಾರಾಂ ಪತಿತ ಪಾವನ ಸೀತಾರಾಂ" ಅಂತ ಹಾಡ್ತಿದ್ವಿ. ಸೀತಾ ಎಂದಾಗ, ಸೀತಮ್ಮ ಅಜ್ಜಿ ಕಥೆಗಳು, ಭಾಗವತ, ಭಾರತ ವಾಚನ ಕಿವಿಯಲ್ಲಿ, ಕಣ್ಣಲ್ಲಿ ಕಟ್ಟಿದಂತಿದೆ. ನಮ್ಮ ಜೊತೆ T.V ನೋಡಿ, ಹಿಂದಿ ಕಲಿಸಿ, ಕಥೆ ಆಟ ಎಲ್ಲದರಲ್ಲೂ ಸಂಗಾತಿಯಾದ ಅಜ್ಜಿಯ ನೆನಪು ಅತ್ಯಮೂಲ್ಯವಾದದ್ದು. ನಾಗರಾಜ ತಾತನ ಬೀರು, ಪ್ರೀತಿಯಿಂದ ಕೊಡೋ ಬಿಸ್ಕತ್ತು, ಅವರ ಟೋಪಿ, ಕೋಟು, ಛತ್ರಿ ಎಲ್ಲಾ ನೆನಪಾಗಿ, ಇಂದಿಗೂ ಅವರಿಗಾಗಿ ಹುಡುಕೋ ಹಂಗೆ ಮನಸ್ಸಿಗೆ ಬರತ್ತೆ.

ಚಿಕ್ಕಂದಿನಿಂದ ಅಮ್ಮ ಅಪ್ಪನ ಪ್ರೀತಿ, ನಿಸ್ವಾರ್ಥ ಪರಿಶ್ರಮ, ಎಷ್ಟು ಜ್ಞಾಪಕಕ್ಕೆ ಬರತ್ತೋ ಅಷ್ಟೇ ಧೃಡವಾಗಿ ನೆನಪಿಗೆ ಬರೋದು ಅವರಿಬ್ಬರ ಬಂಧುಪ್ರೀತಿ ಕೂಡಾ. ನನ್ನ ಮತ್ತು ಅಪ್ಪಿಯ ಮೇಲೆ ಇಟ್ಟ ಪ್ರೀತಿಗೆ ಸಮನಾಗಿ, ಮಿಗಿಲಾಗಿ, ಅವರಿಬ್ಬರೂ ತಂದೆ, ತಾಯಿಯರಲ್ಲಿ, ಒಡಹುಟ್ಟಿದವರಲ್ಲಿ ಇಟ್ಟಿದ್ದ ಪ್ರೀತಿ, ಗೌರವ, ಆತ್ಮೀಯತೆ ನಿಷ್ಕಲ್ಮಶ ಅನ್ನೋದು ಚಿಕ್ಕಂದಿನಿಂದ ತಿಳಿದಿತ್ತು. ಇಬ್ಬರೂ ತಮ್ಮ ವಯಸ್ಸಿಗೆ ಮೀರಿದ ಜವಾಬ್ದಾರಿಗಳನ್ನ ಹೊತ್ತಿದ್ದರೇನೋ ಅನ್ನಿಸತ್ತೆ. ನನ್ನ, ಅಪ್ಪಿನ ಬೆಳೆಸೋದು ಅದರಲ್ಲಿ ಒಂದು ಭಾಗವಾದರೂ, ಅದನ್ನು ತಮ್ಮ ಮನಸ್ಸಿನ ಆಳದಿಂದ, ನಿರ್ವಂಚನೆಯಿಂದ ಮಾಡುತ್ತಿದ್ದರು. ಈಗಲೂ, ಇವತ್ತಿಗೂ ಮಾಡ್ತಾ ಇದ್ದಾರೆ. ಎಲ್ಲಾ ತಂದೆ ತಾಯಿಯರೂ ಮಾಡೋದೇ ಅಂತ ಇತರರು ಹೇಳಬಹುದು. ಆದರೆ, ನಮ್ಮ ಕುಟುಂಬದಲ್ಲಿ ಎಲ್ಲರೂ

ಅದನ್ನ ಒಬ್ಬರಿಂದ ಒಬ್ಬರು ಕಲೀತಾ ಇರ್ತಾರೆ ಅಂತ ಅನ್ನಿಸತ್ತೆ. ಯಾಕೆ ಅಂದ್ರೆ “We have all seen otherwise” ಅಲ್ವಾ? ಬೇರೆಯವರ ಮಾತು ನಮಗ್ಯಾಕೆ ಅಲ್ವಾ, ತೀರ, ಅದನ್ನ ಬಿಟ್ಬಿಡಣ.

ನಾಲ್ಕನೇ ವರ್ಷದಲ್ಲಿ Dance Class ಗೆ ಸೇರಿಸಿದ್ರೆ, ಅಲ್ಲಿ ಬರೀ Exercise, Steps ಹೇಳಿಕೊಡ್ತಾ ಇದಾರೆ, ನಾನು ಹೋಗಲ್ಲ ಎಂದಿದ್ದವಳು ನಾನು. ಪಟ್ಟುಬಿಡದ ವಿಕ್ರಮಾರ್ಕನಂತೆ ಅಮ್ಮ ಮತ್ತೆ ನನ್ನನ್ನ ಸೇರಿಸಿ, ಏಳನೇ ವರ್ಷದ ಹೊತ್ತಿಗೆ, ಶ್ರೀನಿವಾಸ ಕೃಪಾ ಸಭೆಯಲ್ಲಿ ಸಂಗೀತ ಕಛೇರಿ, ಜಗನ್ಮೋಹನ ಪ್ಯಾಲೆಸ್ ನಲ್ಲಿ ತುಳಸಿ ಮೇಡಮ್ ಜೊತೆ Dance drama ಎಲ್ಲದರಲ್ಲೂ ಪಾಲ್ಗೊಳ್ಳೋ ಸ್ಥಿತಿಗೆ ತಂದರು. ನೀನು Great ಕಣೇ ಅಂತೀರೇನೋ, ಒಂದು ನಿಮಿಷ ತಡ್ಕೊಳ್ಳಿ, ಅದು 99% Family Effort. ಎಲ್ಲೋ 1% ನಂದು ಅಷ್ಟೆ. Actually, ಅದೂ Doubt ಉ. ಸಂಗೀತ, ನೃತ್ಯ ಕೇವಲ ನನಗೆ ಮಾತ್ರ ಅಲ್ಲದೆ ಎಲ್ಲರಿಗೂ ಹವ್ಯಾಸ ಆಯ್ತೇನೋ ಅಂತ ಅನ್ನಿಸತ್ತೆ. ಬೆಳಗ್ಗೆ Dance Practice ಮಾಡೋದು, ತಾತನ ರೂಮ್ ಹಿಂಬಾಗದಲ್ಲಿ, ಶಂಕರನ ರೂಮ್ ಎದುರಿಗೆ, ಹೀಗೆ ಎಲ್ಲಾರ ಎದುರಿಗೆ ಅಭ್ಯಾಸ ಮಾಡಿ, Stage Fear ಅಂದ್ರೆ ಏನು ಅಂತ ತಿಳೀಲೇಇಲ್ಲ. ನಿನ್ನ ಸಂಗೀತ ದೈವದತ್ತವಾದದ್ದು, ಯಾರಾದರೂ ಹಾಡು ಅಂದ್ರೆ Style ಹೊಡೀಬಾರ್ದು, ಇಲ್ಲ ಅನ್ನಬಾರದು ಅಂತ ಅಮ್ಮ ಹೇಳಿದ ಮಾತು ಇನ್ನೂ ನನ್ನ ಬಿಟ್ಟಿಲ್ಲ. ನನ್ನ ಕಲೆಗೆ, ಕಾಳಿದಾಸನಿಗೆ ಆ ದೇವಿ ಇದ್ದಂತೆ, ನನ್ನ ಇಡೀ Family ಒಂದೊಂದು ದೇವರ ರೂಪದಲ್ಲಿ, ಅನುಗ್ರಹಿಸಿದ್ದಾರೆ. “ಮಾತಾ ಚ ಪಾರ್ವತೀ ದೇವಿ ಪಿತಾ ದೇವೋ ಮಹೇಶ್ವರಃ” ಇಲ್ಲಿ ತನಕ original song, “ಭಾಂದವಾಃ ಸರ್ವದೇವಾಶ್ಚ ಸಾರ್ಥಕಮ್ ಮಮ ಜೀವನಮ್”.

ಮನೇಲಿ Practice ಮಾಡಕ್ಕೆ, Discipline ಗೆ ಅಮ್ಮ ಬುನಾದಿ ಆದ್ರೆ, ಪ್ರೀತಿಯಿಂದ ದಿನಾ Class ಗೆ ಕರ್ಕೊಂಡು ಹೋಗಕ್ಕೆ ಅಪ್ಪ. ಅಜ್ಜಿ ತಾತಂದಿರ ಹೆಮ್ಮೆ ತುಂಬಿದ ಕಣ್ಣುಗಳೇ ಸ್ಫೂರ್ತಿ. ಕೃಷ್ಣನ ವೇಷ ತಯಾರಿಸಕ್ಕೆ ಸಂಧ್ಯ ಸುನೀತ ಸಹಾಯ ಮಾಡಿದ್ರೆ, ಶಂಕರನ ಕೈಯ್ಯಲ್ಲಿ ನನ್ನ Pictures. ಎಲ್ಲಾ Program ಗಳಿಗೂ ನರಸಿಂಹ ಮಾಮನ Cycle Bar ಮೇಲೆ ಸವಾರಿ To and Fro. ಈಗ ಹೇಳಿ, ನಾನು ಮಾಡಿದ Dance, ನಾನು ಹೇಳಿದ ಹಾಡು ಹೆಚ್ಚು ಅನ್ನಿಸತ್ತಾ? “ಕೇಳೇ ಯಶೋದೆ ನಿನ್ನ ಮಗನ ಲೂಟಿಯ” ಅಂತ ನಾನು Stage ಮೇಲೆ ಕೃಷ್ಣ ಆಗಕ್ಕೆ ಎಷ್ಟು ಜನದ Effort ಇತ್ತು ಅಂತ ನನಗೆ ಈಗಲೂ ನೆನಪಿದೆ.

ಮೊದಲ Music Teacher ಜಯಾ ಮೇಡಮ್ ಮನೇಲಿ ಕಲಿತ ಮೊದಲನೇ ಹಾಡನ್ನ Patient ಆಗಿ ಕೇಳಿದ ಎಲ್ಲರಿಗೂ ನಮಸ್ಕಾರ. “ಕೇಳನೋ ಹರಿ ತಾಳನೋ, ತಾಳ ಮೇಳಗಳಿದ್ದು ಪ್ರೇಮವಿಲ್ಲದ ಗಾನ, ಕೇಳನೋ ಹರಿ ತಾಳನೋ”. ಈ ಹಾಡನ್ನ ನಾನು ಕೇಳಲಾರದ ರಾಗದಲ್ಲಿ ಬೇಕಾದಷ್ಟು ದಿನ ಹೇಳಿದೀನಿ Mostly. ಆದರೆ ನನ್ನ ಪ್ರೀತಿಯಿಂದ ನೋಡಿದ ನಿಮಗೆಲ್ಲಾ ನಾನು ಚಿರಋಣಿ. ಯಾಕೆ ಅಂದ್ರೆ, ಒಂದು ಹಾಡು

ಅದರ ರೂಪದಲ್ಲಿ ಬರಕ್ಕೆ ಎಷ್ಟು ದಿನ ತೊಗೊಳತ್ತೆ, ಎಷ್ಟು ಕಷ್ಟ ಅಂತ ಈಗ ನನಗೆ ಮಕ್ಕಳಿಗೆ ಹೇಳಿಕೊಟ್ಟಾಗ ಅರ್ಥ ಆಗತ್ತೆ. So, ಖಂಡಿತಾ ಮೊದಲಲ್ಲಿ, ಕಲಿಯುವಾಗ ಹಾಡ್ತಿದ್ದದ್ದು ಚೆನ್ನಾಗಿರಲಿಲ್ಲ ಅಂತ ಈಗ ಗೊತ್ತಾಗತ್ತೆ.

ಇನ್ನೊಂದು ವಿಶಿಷ್ಟ ನೆನಪು, ಬೆಂಗಳೂರಿಗೆ ಹೋಗೋದು. ಸ್ವಲ್ಪ ವರ್ಷಗಳು ಅವೆಲ್ಲಾ ನೆನಪುಗಳು, Cotton pet ಮನೇಲಿ. Bus Stand ನಲ್ಲಿ ಇಳಿದು, ನರಸಿಂಹ, ಸುನೀತ, ಅಮ್ಮ ಜೊತೆ Autorickshaw ದಲ್ಲಿ Cotton Pet Main Road ನಲ್ಲಿ ಇಳಿದು, ಗಲ್ಲಿ ಒಳಗಡೆ ರಂಗಾಆಂಟಿ ಮನೆಗೆ ಕಾಲಿಟ್ಟ ತಕ್ಷಣ, ಅಂಗಳದಲ್ಲಿ, ಬಲಗಡೆ ಬಾವಿ, ಎಡಗಡೆ ದೊಡ್ಡ ಬಾವ ಅಕ್ಕ ಮನೆ, ಮೆಟ್ಟಲು ಹತ್ತಿದ ತಕ್ಷಣ ದೊಡ್ಡ ಹಾಲು, ಬಲದಲ್ಲಿ ಅಡಿಗೆಮನೆ, ಹಿಂದಿನ ರೂಮ್ ನಲ್ಲಿ ನಾವು ಬಂದಿದೀವಿ ಅಂತ ಸಂತಸ ಸಂಭ್ರಮದಿಂದ ಎಲ್ಲಾ ಸೇರೋದು. ರವಿ ಅಂಕಲ್ ಜೊತೆ ಅಟ್ಟದ ಮೇಲಕ್ಕೆ ಏಣಿ ಹಿಡಿದು ಹತ್ತಿದರೆ ಏನೋ ಒಂದು ಮಜ. Shopping ಇಲ್ಲ, Phone ಇಲ್ಲ, T.V ಬೇಡ, Cubbon Park ಎಲ್ಲಾ ಇನ್ನೂ ಸುಮಾರು ದಿವಸ ಆದಮೇಲೆ, ಆದರೂ ಒಂದು ಕ್ಷಣನೂ ಬೋರ್ ಅನ್ನೋ ಮಾತೇ ಇಲ್ಲ. ವಸಂತ, ಮಾಲ, ರವಿ, ರಮೇಶ, ಜನಾರ್ಧನ ಎಲ್ಲಾರ ಜೊತೆ ಇದ್ದಿದ್ದು, ಬಾವೀಲಿ ಆಮೆ ಗೋಸ್ಕರ ಬಗ್ಗಿ ನೋಡಿದ್ದು, ಎಲ್ಲಾ ಇನ್ನೂ ಕಣ್ಣಿಗೆ ಕಟ್ಟಿದಂತಿದೆ. ಹೇಗೆ ಅಂತ ಆಶ್ಚರ್ಯನೂ ಆಗಲ್ಲ ಯಾಕೆ ಅಂದ್ರೆ ಇದು, ನಮ್ಮ Family, ನಮ್ಮ ಜನ. ಆ ನೆನಪಿಗೆ ಇನ್ನೊಂದು ಹಾಡು ಕೂಡಾ ಜ್ಞಾಪಕ ಬರತ್ತೆ. “ಕಾಶೀಗೆ ಹೋದ ನಂಬಾವ ಕಬ್ಬಿಣದ್ ದೋಣೀಲಿ, ರಾಶಿ ರಾಶಿ ಗಂಗೆ ತರಕ್ಕೆ ಸೊಳ್ಳೆ ಪರ್ದೇಲಿ” ಅಂತ ಅಪ್ಪಂಗೋಸ್ಕರ ಹಾಡ್ತಾ ಇದ್ದದ್ದು, ವಸಂತ ಮಾಲಾ ಇವರ ಸುಮಧುರ ಸಂಗೀತ ಕೇಳಿದ್ದು ಇನ್ನೂ ಕಿವೀಲಿ ಕೇಳ್ತಾ ಇದೆ.

ಮತ್ತೊಂದು ವಿಶಿಷ್ಟ ನೆನಪು, ಪಾಲ್ವಂಚದಲ್ಲಿ ಅಜ್ಜಿ ತಾತ ಮನೇಗೆ ಹೋಗ್ತಾ ಇದ್ದಿದ್ದು. ಮೈಸೂರಿಂದ ಬೆಂಗಳೂರು, ಮದ್ರಾಸು, ಆಮೇಲೆ ಹೌರಾ ಮೈಲ್ ನಲ್ಲಿ ಕೂತು ವಿಜಯವಾಡ, ನಂತರ ಬಸ್ಸಲ್ಲಿ ಖಮ್ಮಂ, ಕೊತ್ತಗೂಡೆಂ, Finally ಪಾಲ್ವಂಚಗೆ ತಲುಪಿದ್ರೆ, ತಾತ ಅಲ್ಲಿ Driver ಲಕ್ಷ್ಮೀ ನಾರಾಯಣ, ಗೌಸು ಅವರೆಲ್ಲಾ ಕರ್ಕೊಂಡು ಜೀಪಲ್ಲಿ ಬಂದು ಕಾಯ್ತಾ ನಿಂತಿದ್ರೆ ಭಲೇ ಖುಷಿ. ದೊಡ್ಡ ಅಂಗಳದ Quarters ನಲ್ಲಿ, ನವಾರುಪಟ್ಟೆ ಮಂಚದ ಮೇಲೆ ಆಂಧ್ರ ಬಿಸಿಲಿನಲ್ಲಿ Enjoy ಮಾಡಿದ್ದೇ ಮಾಡಿದ್ದು. ಈಗ ಅದೇ ತರಾ ಇನ್ನೊಂದು ದಿನ ಸಿಕ್ಕಿದ್ರೆ ನನ್ಕೈಲಿ ತಡೆಯಕ್ಕೆ ಆಗತ್ತೋ ಇಲ್ಲವೋ ಗೊತ್ತಿಲ್ಲ. ಅವಾಗ ತೆಲುಗು ಚೂರೂ ಬರದೇ ಇದ್ರೂ “ಓ ಕೆ ಕಾಲ್ ಅಂಡಿ” ಅಂತ ದಿನಾ Rotary Phone ನಲ್ಲಿ ತಾತನ ಬದಲು ನಾವು ಉತ್ತರ ಕೊಟ್ಕೊಂಡು, ತಾತನ ಹಾಗೆ ನಾನೂ ಇಂಜಿನಿಯರ್ ಆಗಬೇಕು ಅನ್ನೋ ಹೆಮ್ಮೆಯಲ್ಲಿ ಬೇಸಿಗೆ ಕಳೀತಾ ಇತ್ತು. Bonus, Telugu cinema Knowledge. ಭಾಷೆ ಬರದೇ ಇದ್ರೂ “ವಿವಾಹ ಭೋಜನಂಬು” ಇಂದ ಹಿಡಿದು, “ಸಾಗರ ಸಂಗಮಮೇ ಒಕ ಯೋಗಂ” ಅಂತ ಹಾಡುಗಳನ್ನ ಕಲಿಯೋದೇ ಅಲ್ಲದೆ ಆಂಧ್ರಪ್ರಭ, ಆಂಧ್ರಜ್ಯೋತಿ, ವಿಪುಲ, ಚತುರ

ಎಲ್ಲಾತರಲ್ಲೂ Gossip column, ಯದ್ದನಪೂಡಿ ಸುಲೋಚನಾ ರಾಣಿ Novels ಹೆಸರುಗಳು, ಆ ಪುಸ್ತಕಗಳ Covers ಎಲ್ಲಾ ಇನ್ನೂ ಕಣ್ಣಿಗೆ ಕಟ್ಟಿದ ಹಾಗೇ ಇದೆ. ಪದ್ದು ಅಜ್ಜಿ ಜೊತೆ ಬಿಸಿ ಬಿಸಿ ಸಾರನ್ನ ತಿನ್ನೋದು, ಅಂಗಡಿಯಿಂದ ಮಲ್ಲಿಗೆ ಮೊಗ್ಗು ತಂದು ಪೋಣಿಸೋದು, ಮೈಸೂರಿಗೆ ಬಂದ ಮೇಲೆ ತಾತನ ಜೊತೆ ಸೈಕಲ್ ಕಲಿತು, Railway Station ವರೆಗೂ ಹೋಗೋದು, "ದಾಸನ ಮಾಡಿಕೊ ಎನ್ನ, ಸ್ವಾಮೀ ಸಾಸಿರ ನಾಮದ ವೇಂಕಟರಮಣ" ಅಂತ ತಾತನ ಧ್ವನಿಯಲ್ಲಿ ಕೇಳಿದ್ದು, ಇಂದು ಅಜ್ಜಿ ಜೊತೆ ದಪ್ಪ ಅಕ್ಷರಗಳಲ್ಲಿ ಸ್ತೋತ್ರಗಳನ್ನು ಬರೆದಿದ್ದು, ಈ ನೆನಪುಗಳು ಮುತ್ತಿನ ಮಾಲೆಯಂತೆ ಸುಂದರವಾಗಿ ನನ್ನ ತಲೆಯಲ್ಲಿ ಕೂತಿವೆ. "Father we Thank Thee for the light" ಅಂತ ಅಜ್ಜಿ ಹೇಳಿಕೊಟ್ಟ ಹಾಡು, ಈ ಇಂಗ್ಲೀಶ್ ದೇಶದಲ್ಲೂ ನಾನು ಇಷ್ಟು ಸುಂದರವಾದ ಹಾಡು ಕೇಳಿಲ್ಲ ಅನ್ನಿಸತ್ತೆ.

ಸುನಾ, ಸುನೀತಾ, ಸರಸ್ವತಿ, ಎಸ್.ಸರಸ್ವತಿ.ಬಿ.ಇ. ಕೆಲವು Relationship ಗಳಿಗೆ ಹೆಸರು Satisfy ಮಾಡಕ್ಕಾಗಲ್ಲ. ಚಿಕ್ಕಮ್ಮ ಅನ್ನೋ ಪದನ ಎಷ್ಟು ಅರ್ಥಬದ್ಧವಾಗಿ ರಚಿಸಿದಾರೆ ಅಂತ ಅವಳ ಜೊತೆ ಇದ್ದು ಅರ್ಥ ಮಾಡಿಕೊಂಡಿದೀನಿ. ಬೆಳಗ್ಗಿಂದ ಸಂಜೆ ತನಕ Office ಗೆ ಹೋದರೂ ನಮ್ಮನ್ನೆಲ್ಲಾ ಪ್ರೀತಿಯಿಂದ ನೋಡ್ಕೊಂದಿರೋದು, ಅದಕ್ಕಿಂತ ಮುಂಚೆ Engineering ಓದೋ ಕಾಲದಲ್ಲಿ ಹತ್ತು ಹನ್ನೊಂದು ಗಂಟೆಗೆ Saturday Morning Class ಮುಗಿಸಿಕೊಂಡು ಬಂದಾಗ, ಅವಳಿನ್ನೂ ಮಲಗಿದ್ರೆ, ನಾನೂ ಅವಳ ಜೊತೆ ಇನ್ನೂ ಸ್ವಲ್ಪ ಹೊತ್ತು ಮಲಗಿ, ಅವಳನ್ನ ಎಬ್ಬಿಸೋದರಲ್ಲಿ ಇರೋ ಮಜ ಇನ್ನೂ ಬೇರೆ ಇಲ್ಲ. ಶ್ರೀರಂಗಪಟ್ಟಣದಲ್ಲಿ ತ್ಯಾಗರಾಜರ ಆರಾಧನೆಗೆ ಪಂಚವೀಣೆ ನುಡಿಸಿದಾಗ ಜೊತೆಗೆ ಹೋಗಿದ್ದು ಸಂಗೀತ ಕಛೇರಿಯ ಮೊದಲ ನೆನಪು. ನರಸಿಂಹ ಮಾಮ, ನಾನು ಇಬ್ಬರೂ ಇಸ್ರೋ ಎದುರಲ್ಲಿ ಕಾಯ್ತಾ ನಿಂತಿದ್ವಿ ಅವಳ Interview ಮುಗಿಯೋ ತನಕ. ವಸಂತ ಮಾಲನಂತೆ ಅವಳೂ ಬೆಂಗಳೂರಿಗೆ ಹೋದಾಗ, First Time ಏನೋ Vacuum Feel ಆಯ್ತು. ಆದರೆ, ಪ್ರತೀಸಲ S.Saraswathy,B.E ಅಂತ Inland Letter ಮೇಲೆ ಬರೆದಾಗ, ನನ್ನ Letter ನಿನ್ನ ಹತ್ತಿರ ಬರತ್ತೆ ಅನ್ನೋದೇ Excitement. ಪುಟ್ಟು ಅಭಿನ ಕಮಲಾ ರಾಮನ್ ಆಸ್ಪತ್ರೆಲಿ ಮೊದಲು ನೋಡಿದಾಗ, ಬೇರೆ ಎಲ್ಲರೂ, ಓ ಈಗ ಇನ್ನೊಂದು ಮಗು ಬಂತು, ನಿನಗೆ ಅವಳ ಹತ್ತಿರ ಇನ್ನ Time ಇರಲ್ಲ ಅಂತ ಹೇಳಿದ್ರೂ, ಆ Jealousy ಎಲ್ಲಾ ಮಂಗಮಾಯ ಆಗೋಹಾಗೆ ಆ ಮಗು ಮೇಲೆ ಪ್ರೀತಿ ಬಂತು. ಅವಳು ನನ್ನ ಮೇಲೆ ಇಟ್ಟ ಪ್ರೀತಿ ಎಷ್ಟು ಅಪಾರವಾದದ್ದು ಅಂದ್ರೆ ಅಭಿಗೆ, ಅಂಕಲ್ ಗೆ ಎಲ್ಲರಿಗೂ ನನ್ನ ಮೇಲೆ ಅಷ್ಟೇ ವಿಶ್ವಾಸ ಬರೋಹಾಗಾಯಿತು. ನನ್ನ ಮೊದಲ ಕೆಲಸ, ಮೊದಲ ಸಂಬಳ ಎಲ್ಲವೂ ಅವಳ ಜೊತೆ. ISRO ಬಗ್ಗೆ ಹೇಳುವಾಗ ಅವಳ Enthusiasm, ನನಗೆ ದೋಸೆ ಮಾಡಕ್ಕೆ ಹೇಳಿಕೊಟ್ಟದ್ದು, ಎಲ್ಲಾ ನೆನಪಿನಲ್ಲಿ ಹಸಿರಾಗಿದೆ. ಅಭಿ,ಅಪ್ಪಿ ಮತ್ತೆ ನನ್ನ ಜೊತೆ ಆಟ ಆಡ್ತಾ ಇದ್ದಿದ್ದು,

ಪ್ರೀತಿಯಿಂದ ಎಲ್ಲರೂ ಒಟ್ಟಿಗೆ ಇರ್ತಾ ಇದ್ದಿದ್ದು, ಎಲ್ಲಾ ಸುಂದರ ನೆನಪುಗಳು. Shared memories for EVER, ಅಲ್ವಾ? ಅದೇ Important.

ನನ್ನ ಚಿಕ್ಕಂದಿನ ನೆನಪುಗಳು ಕಣ್ಣಿಗೆ ಕಟ್ಟಿದ ಹಾಗೆ ಇರಕ್ಕೆ ಶಂಕರನೂ ಕಾರಣ. ನನ್ನ First Photo ಗಳು, First English ಹಾಡುಗಳು, Gramophone ನಲ್ಲಿ, First Time ಯಾರೋ Foreigner ನ Meet ಮಾಡೋದು ಎಲ್ಲಾ ಶಂಕರನಿಂದ. ಆಗಿನ ಕಾಲಕ್ಕೆ Germany ಇಂದ ಬಂದಿದ್ದ Dr Judith perera ಹತ್ತಿರ Orthodontic appointment ಗೋಸ್ಕರ ನನ್ನ ಶನಿವಾರ ಬೆಳಗ್ಗೆ ಕರ್ಕೊಂಡು ಹೋಗಿ, ಅಲ್ಲೇ ಕಾದು, ವಾಪಸ್ ಮನೇಗೆ ಕರ್ಕೊಂಡು ಬರ್ತಾ ಇದ್ದಿದ್ದು ಇನ್ನೂ ಜ್ಞಾಪಕ ಇದೆ. ಎಲ್ಲಾ ಹುಟ್ಟಿದ ಹಬ್ಬದ Preparations, Arrangements, Zoo visits ಎಲ್ಲಾ ಶಂಕರ ಜೊತೆ, Dance, music practise ಅವರ ರೂಮ್ ಎದುರು. ವನಿತಾ ಸದನಕ್ಕೆ ಸೌಭಾಗ್ಯ ಆಂಟಿನ Meet ಮಾಡಕ್ಕೆ ನನ್ನ ಕರ್ಕೊಂಡು ಹೋಗೋದು, ಅವರು ನನ್ನ ಮೇಲೆ ಇಟ್ಟ ಪ್ರೀತಿ, ನಂಬಿಕೆಗೆ ನಿದರ್ಶನ. ಹಾಗಂತ ನನ್ನೇನೂ ಸುಮ್ಮನೆ ಬಿಡ್ತಾ ಇರಲಿಲ್ಲ, ರೇಗಿಸ್ತಾ ಇದ್ರು ಅವಾಗವಾಗ. ಒಮ್ಮೆ ಅವರು ರೇಗಿಸಿದಾಗ ನಾನು ಅವರ ಕೈ ಜಿಗುಟಿ, ಚಿಕ್ಕದಾಗಿ ನೀಲಿ ಕಟ್ಟಿದರೆ, ಪಾಪ ಯಾರಿಗೂ ಹೇಳದೆ, ಪ್ರೀತಿಯಿಂದ ಸರಿದಾರಿ ತೋರಿಸಿ, ನನ್ನ ದೃಷ್ಟಿಯಲ್ಲಿ ಇನ್ನೂ Special ಆದವರು ಶಂಕರ. ನನಗಾಗಿ ತನ್ನ Foreign ಸ್ನೇಹಿತರಿಂದ Special Gifts ತರಿಸಿ ಕೊಡ್ತಾ ಇದ್ದರು. ಯಾವಾಗಲೂ ನನ್ನ Talent ನ Enhance ಮಾಡಿ, Supportive ಆಗಿ ಇರ್ತಾ ಇದ್ರು. ಇವತ್ತಿಗೂ ಅವರು ನನ್ನ Role Model ಹೌದು.

ಸಂಧ್ಯ ಅಜ್ಜಿನ ಯಾವಾಗಲೂ "ನನ್ನ ಯಾಕೆ ಹುಟ್ಟಿಸಿದೆ" ಅಂತ ಕೇಳಿದರೆ, ನಾನು ಅಂದ್ಕೋತಾ ಇದ್ದೆ, ಸಂಧ್ಯ ಇಲ್ಲದೆ ಹೇಗಿರತ್ತೆ? ಅಯ್ಯೋ ಯಾಕೆ ಹಿಂಗೆ ಕೇಳ್ತಾ ಇದಾಳೆ ಅಂತ. ಚೆಲುವಾಂಬಾ ಶಿಶುವಿಹಾರದಲ್ಲಿ Teacher's Training ಇಂದ ಹಿಡಿದು, ಗಂಡು ನೋಡೋ ಶಾಸ್ತ್ರದ ತನಕ ಎಲ್ಲಕ್ಕೂ ಸಂಧ್ಯ ಜೊತೆ ಹೋಗಿದೀನಿ. ಗೀತ ಆಂಟಿ ಕೊಯಂಬತ್ತೂರ್ ನಿಂದ ಬಂದಾಗಲೂ, ಎಳ್ಳು ಬಾಗಿನ ಕೊಡಕ್ಕೆ ಶ್ರೀಕಂಠರಾವ್ ಮನೇಗೆ ಹೋದಾಗಲೂ, ಇಲ್ಲಿಂದ ಇಲ್ಲೀತನಕ ನೋವು ಬರ್ತಾ ಇದೆ ಅಂತ ಪುಟ್ಟಮ್ಮ ಚಮ್ಮೀ ಮನೆಗೆ ಹೋದಾಗಲೂ ಎಲ್ಲಾ ಕಡೆ ಸಂಧ್ಯ ಜೊತೆ ಹೋಗಿದೀನಿ. ಅವಳ ಗುಂಡಾದ Hand writing, ಏನೇ ಆದರೂ ಅಣ್ಣಂದಿರ Support ಗಾಗಿ ಬರೋ Courage, ಇವತ್ತಿಗೂ ನನಗೆ Inspiration.

ನಾನು Middle school ಗೆ ಬರೋ ಹೊತ್ತಿಗೆ ನರಸಿಂಹ ಮಾಮನ Influence ಜಾಸ್ತಿ ಆಗ್ತಾ ಬಂತು ದಿನೇ ದಿನೇ. ಒಳ್ಳೆ ಓದು, ಬರಹ, Good score, ಎಲ್ಲಾದಕ್ಕಿಂತ ಮುಖ್ಯವಾಗಿ, ಅಮ್ಮನಿಂದ ಸೈ ಎನಿಸಿಕೊಂಡ ವ್ಯಕ್ತಿತ್ವ ಅವನದು. ಅಮ್ಮನಿಗೆ ಅಪ್ಪನಿಗೆ complete ಆಗಿ Education ಬಗ್ಗೆ Moral Support ಕೊಡ್ತಾ ಇದ್ದಿದ್ದು ಮಾಮ. ಮೊದಲನೇ ಸತಿ, ನಾಲ್ಕನೇ ತರಗತಿಯಲ್ಲಿದ್ದಾಗ, Second Rank ಬಂದಿದ್ದೆ. Mostly ಅದೇ

Last time ಅನ್ನಿಸತ್ತೆ. ಅಮ್ಮನ ಹತ್ತಿರ ಚೆನ್ನಾಗಿ ಬೈಸಿಕೊಂಡಿದ್ದೆ. ಮೆಟ್ಟಿಲ ಮೇಲೆ ನನ್ನ ಪಕ್ಕ ಕೂತ್ಕೊಂಡು, ಯಾಕೆ ಅಮ್ಮಂಗೆ ಬೇಜಾರಾಗಿದೆ ಅಂತ ನನಗೆ ಅರ್ಥ ಆಗೋ ಹಾಗೆ ಹೇಳಿದ್ದು ನರಸಿಂಹ ಮಾಮ. ನನ್ನ ಪರೀಕ್ಷೆ Preparationಗೆ, Paper presentationಗೆ ಎಲ್ಲಾತಕ್ಕೂ ಯಾವತ್ತೂ ಸಹಾಯ ಮಾಡೋದೊಂದೇ ಅಲ್ಲ Inspiration ಕೂಡಾ. ನಮ್ಮ Practise ಎಲ್ಲಾ Perfect ಆಗಿದ್ಯಾ ಅಂತ ನೋಡ್ಕೋತಾ ಇದ್ದ. ನಮ್ಮ ಪ್ರಯತ್ನ ಇದ್ದರೆ ಮಾತ್ರ, ದೇವರು ನಮಗೆ ಸಹಾಯ ಮಾಡೋದು ಅಂತ ಕಾಯಾ ವಾಚಾ ಮನಸಾ ಹೇಳಿಕೊಟ್ಟದ್ದು ಮಾಮ. ಇಂದಿಗೂ ಎಲ್ಲಾ ರೀತಿಯಲ್ಲೂ ನನಗೆ Inspiration.


ನನ್ನ ನೆನಪಿನಂಗಳದ ತುಂಬಾ ವ್ಯಾಪಿಸಿಕೊಂಡಿರೋದು, ನನ್ನ ಹೃದಯದ, ನನ್ನ ಅಸ್ಥಿತ್ವದ ಅವಿಭಾಜ್ಯ ಅಂಗ ನನ್ನ ತಂಗಿ ಅಪ್ಪಿ. ನನ್ನ ಎಲ್ಲಾ ಕನಸುಗಳು, ನೆನಪುಗಳು ಅವಳ ಸುತ್ತ ಮುತ್ತನೇ ಬೆಸೆದಿವೆ. ಅವಳಿಗೆ ಅಕ್ಕ ಆದ ಮೇಲೆ, ನಾನು ಎಲ್ಲರಿಗೂ ಅಕ್ಕ ಆದೆ. ಮೊದಲನೇ ಸಲ ರಾಜರಾಜೇಶ್ವರಿ ಕ್ಲಿನಿಕ್ ನಲ್ಲಿ ಕೆಂಪಾದ ಮುದ್ದಾದ ಅವಳನ್ನ ನೋಡಿದ ಕ್ಷಣದಿಂದ ನನ್ನ ಜೀವನಾನೇ ಬದಲಾಯಿತು ಅಂತ ಕಾಣಿಸತ್ತೆ. ಭಗಿನೀ ಸೇವಾ ಸಮಾಜದಲ್ಲಿ ರಮಾ ಮೇಡಮ್ ಕ್ಲಾಸ್ ನಲ್ಲಿ ದಿನ ಪೂರ್ತಿ ನಿದ್ದೆ ಮಾಡ್ಕೊಂಡು, ನಾಕು ಗಂಟೆಗೆ ಎದ್ದಾಗ, ಅಕ್ಕಾ ಅಂತ ಕೂಗಿದ್ರೆ, ಎರಡನೇ ಕ್ಲಾಸ್ ನಲ್ಲಿ ಇದ್ದ ನಾನು, Teacher permission ಕೇಳಿ ಓಡಿ ಹೋಗ್ತಾ ಇದ್ದೆ. ಎದುರು ಮನೆ ಮಂಜ ಪಾಪ ಅವಳನ್ನ ಎತ್ತಿಕೊಂಡರೆ ನನಗೆ ಇಷ್ಟ ಆಗ್ತಾ ಇರಲಿಲ್ಲ. ಅಪ್ಪಿ, ಕವಿತ, ಕಾಶಿ ಜೊತೆ ಆಟ, ಅಜ್ಜಿ ಹತ್ತಿರ ಸೀರೆ ಉಡಿಸಿಕೊಳ್ಳೋದು, ವಿಕ್ರಮ್ ಭೇತಾಳ್ ನೋಡೋದು, School day ನಲ್ಲಿ ಪುಣ್ಯಕೋಟಿ ಕರು ಆಗಿದ್ದು ಎಲ್ಲಾ ನೆನ್ನೆ ತಾನೆ ನಡೆದ ಹಾಗೆ ಅನ್ನಿಸತ್ತೆ. Dance class examsಗೆ ಹೋಗೋದು, ಸಂಗೀತಕ್ಕೆ ಜೊತೇಲಿ ಹೋಗಿ, ದಾರೀಲಿ ಮಸಾಲೆ ಪುರಿ ತಿನ್ಕೊಂಡು ಬಂದು, ಮನೇಲಿ ಅಪ್ಪಿ ಊಟ ಮಾಡ್ದೇ ಇದ್ರೆ, ಅವಳ ಪಾಲಿನ ಊಟನೂ ನಾನೇ ಮಾಡಿದ್ದುಂಟು, ಅಮ್ಮನ ಕೈಲಿ ಬೈಸ್ಕೋ ಬಾರ್ದು ಅಂತ. ಕುವೆಂಪು ರಾಮಾಯಣ ದರ್ಶನ ಸ್ಪರ್ಧೆಯಲ್ಲಿ ಹಾಡು ಹೇಳಿ, ದೇಜಗೌ ಮೇಡಮ್ ನ ಅಳಿಸಿಬಿಟ್ಟು, ನಾವಿಬ್ಬರೂ side ಅಲ್ಲಿ ನಕ್ಕಿದ್ದುಂಟು, ಅವರು ಯಾಕೆ ಅಳ್ತಾ ಇದಾರೆ ಅಂತ ಅರ್ಥ ಆಗದೆ. “ಈ ಕಡಲ್ಗಿದು ....ತೃಣವಂತೆ” ಅಂತ ಕಷ್ಟವಾದ Verse ಗಳನ್ನ ಹೇಳಿಕೊಟ್ಟು, ಗೀತಾ ಆಂಟಿ ಪಾಠ ಹೇಳಿ ಕಳಿಸಿದ್ರೆ, ಸಂತೋಷವಾಗಿ ಜೊತೆಯಲ್ಲಿ ಹಾಡಿಕೊಂಡು, ಅಪ್ಪಿ Second ಬಂದ್ರೆ ನನಗೆ First, ಅಥವಾ ಅಪ್ಪಿ First ನಾನು Second, ಹೀಗೆ ಎಲ್ಲಾ ಬಹುಮಾನಗಳನ್ನೂ ನಾವೇ ಪಡೆದು ಬರ್ತಾ ಇದ್ವಿ. ಅದರಲ್ಲಿದ್ದ ಮಜಾ ಬೇರೇ ಎಲ್ಲೂ ಸಿಗಲ್ಲ ಅನ್ನಿಸತ್ತೆ.

As a Mathematician’s daughter, ಗಣಿತದ ಭಾಷೆಯಲ್ಲಿ ನನ್ನ ಜೀವನದ ಬಗ್ಗೆ ಹೇಳಬೇಕೆಂದರೆ, life is a complex equation of multiple variables ಅಂತ ಹೇಳಬಹುದು. ಪೂರ್ಣಿಮಾ ಜೊತೆ ಬಾಲ್ಯದಲ್ಲಿ

ನಾನು ಇಲ್ಲದೇ ಇರಬಹುದು. ನಮ್ಮ ಜೀವನದ ವಿಶೇಷ ಗಳಿಗೆಗಳಲ್ಲಿ ನಮ್ಮ ಜೊತೆ, ನನ್ನ ತಂಗಿಯಂತೆ, ನನ್ನ ಪುಟ್ಟ ಮಗುವಿನ ಬಾಲ್ಯ ಸಂಗಾತಿಯಂತೆ ಇರುವ ಪೂರ್ಣಿಮಾಳ ನಿಸ್ವಾರ್ಥ ಪ್ರೀತಿ, ವಿಶ್ವಾಸ, ನಂಬಿಕೆ ಅನನ್ಯವಾದದ್ದು. ಬಾಲ್ಯದಿಂದ ನಾವು ಕಲಿತ ರೀತಿ ನೀತಿಗಳೆಲ್ಲ ಅವಳಲ್ಲಿ ಸಹಜವಾಗಿ ಇವೆ. ನಮ್ಮ ಈ ಬಂಧ ಹೀಗೇ ಶಾಶ್ವತವಾಗಿರಲಿ ಅಂತ ದೇವರಲ್ಲಿ ಪ್ರಾರ್ಥಿಸುತ್ತೇನೆ.

So, coming back to my complex equation of multiple variables, ಪ್ರೀತಿ, ಕಲೆ, ವಿದ್ಯೆ, ಬುದ್ಧಿ, ನಡವಳಿಕೆ, ಮಾತುಕತೆ, ಎಲ್ಲಾ ನನ್ನ ಕುಟುಂಬದ ಸದಸ್ಯರ ಬಳುವಳಿ ನನಗೆ. ಸುಖ, ದುಃಖಗಳಲ್ಲಿ, ನೋವು ನಲಿವುಗಳಲ್ಲಿ ಜೊತೆಯಾಗಿರುವ ಈ ಕುಟುಂಬದ ಸದಸ್ಯರು ನನ್ನೊಂದಿಗೆ ಯಾವಾಗಲೂ ಇದಾರೆ ಅಂತನೇ ಅನ್ನಿಸತ್ತೆ. ವಿವಿಧ Circumstances ನಲ್ಲಿ ನಿಮ್ಮ ರೀತಿ, ನೀತಿಗಳು, ನನ್ನಲ್ಲಿ, ನನ್ನ ನಡುವಡಿಯಲ್ಲಿ ಪ್ರತಿಬಿಂಬಿಸತ್ತೇನೋ ಅನ್ನಿಸತ್ತೆ. ನಾನು ಅನ್ನೋ ಈ ಜೀವಿ 99% ನಿಮ್ಮೆಲ್ಲರಿಂದ ರೂಪುಗೊಂಡಿದೆ ಅನ್ನಿಸತ್ತೆ. ಇಂದಿನ ನೆನಪಿನ ಸುರುಳಿಯಲ್ಲಿ ಕೇವಲ ಒಂದು Glimpse ಅಷ್ಟೇ ಕೊಟ್ಟಿದೀನಿ, ಇನ್ನೂ ತುಂಬಾ ತುಂಬಾ ನೆನಪುಗಳಿವೆ. ಅದೆಲ್ಲಾ ಮತ್ತೊಮ್ಮೆ ನಿದಾನಕ್ಕೆ ಸಿಕ್ಕಾಗ ಮಾತಾಡಣ. ಕಡೇಗೆ ಈ ಹಾಡಿನಿಂದ ನನ್ನ ಭಾವನೆಗಳನ್ನ ವ್ಯಕ್ತ ಪಡಿಸಕ್ಕೆ ಇಷ್ಟ ಪಡ್ತೀನಿ.

"ಕರುಣಿಸೋ ರಂಗಾ ಕರುಣಿಸೋ, ಕರುಣಿಸೋ ರಂಗಾ ಕರುಣಿಸೋ, ಕೃಷ್ಣಾ ಕರುಣಿಸೋ, ರಂಗಾ ಕರುಣಿಸೋ, ಹಗಲು ಇರುಳು ನನ್ನ, ಹಗಲು ಇರುಳು ನನ್ನ, ನೆನಪು ಅಳಿಯದಂತೆ, ಕರುಣಿಸೋ ರಂಗಾ ಕರುಣಿಸೋ"



ನಾದಾರ್ಚನೆಯ ಸದಸ್ಯರಾದ, ನಮ್ಮ ನಾದಾರ್ಚನೆ ಬಾನುಲಿ ಕೇಂದ್ರದ ರೇಡಿಯೋ ಜಾಕಿ ಸೌಭಾಗ್ಯ ಅವರು, ನಮ್ಮ ಎಲ್ಲಾ ಕಾರ್ಯಕ್ರಮಗಳ ಪ್ರಾರಂಭದಲ್ಲಿ, ಅಂದಿನ ಕಾರ್ಯಕ್ರಮದ ವಿಶೇಷತೆಯ ಬಗ್ಗೆ ಬಹಳ ಸೊಗಸಾಗಿ ಪರಿಚಯಿಸುತ್ತಾರೆ. “ಕೇಳಿ, ಕೇಳ್ತಾ ಇರಿ, ಮಸ್ತ್ ಮಜಾ ಮಾಡಿ” ಎಂದು ಅವರು ಆರಂಭಿಸಿದರೆ, ನಾವೆಲ್ಲಾ Full ready ಆಗೋಗ್ತಿವಿ. ಅವರ ಲೇಖನಗಳು ಉಪಯುಕ್ತ ಮಾಹಿತಿಯುಳ್ಳವಾಗಿರುತ್ತವೆ.

**1.ಹನುಮ ಸ್ಮರಣೆ**

ಬುದ್ಧಿರ್ಬಲಂ ಯಶೋಧೈರ್ಯಂ ನಿರ್ಭಯತ್ವಂ ಅರೋಗತ।
ಅಜಾಡ್ಯಂ ವಾಕ್ಪಟುತ್ವಂ ಚ ಹನುಮತ್ ಸ್ಮರಣಾತ್ ಭವೇತ್॥

ಧೈರ್ಯ, ಶಕ್ತಿ, ಭಕ್ತಿಗಳಿಗೆ ಹೆಸರಾದ ಹನುಮಂತನು ಶಿವನ ಒಂದು ಶಕ್ತಿಯುತ ಅವತಾರ ಮತ್ತು ಶ್ರೀರಾಮನ ಪರಮ ಭಕ್ತ. ಹನುಮಾನ್ ಸ್ಮರಣೆಯಿಂದ ವಾಕ್ ಶಕ್ತಿ, ಧೈರ್ಯ, ಶೌರ್ಯ ಮತ್ತು ಆರೋಗ್ಯವನ್ನು ಹೊಂದುವುದರಲ್ಲಿ ಸಂಶಯವಿಲ್ಲ.

ಯತ್ರ ಯತ್ರ ರಘುನಾಥ ಕೀರ್ತನಂ ತತ್ರ ತತ್ರ ಕೃತಮಸ್ತಕಾಂಜಲಿಂ।
ಬಾಷ್ಪವಾರಿ ಪರಿಪೂರ್ಣಲೋಚನಂ ಮಾರುತೀಂ ನಮತರಾಕ್ಷಸಾಂತಕಮ್॥

ಎಲ್ಲೆಲ್ಲಿ ಶ್ರೀ ರಘುರಾಮನ ಕೀರ್ತನೆ ನಡೆಯುವುದೋ ಅಲ್ಲಲ್ಲಿ ಕೈಮುಗಿದು ಆಂಜನೇಯನು ಕುಳಿತಿರುತ್ತಾನೆ.
ರಾಕ್ಷಸಾಂತಕನಾದ ಮಾರುತಿಯು ಕಣ್ಣಲ್ಲಿ ಆನಂದದ ಕಂಬನಿ ತುಂಬಿಕೊಂಡಿರುತ್ತಾನೆ.

ಮನೋಜವಂ ಮಾರುತತುಲ್ಯವೇಗಂ। ಜಿತೇಂದ್ರಿಯಂ ಬುದ್ಧಿಮತಾಂ ವರಿಷ್ಠಂ।
ವಾತಾತ್ಮಜಂ ವಾನರಯೂತಮುಖ್ಯಂ। ಶ್ರೀರಾಮದೂತಂ ಶಿರಸಾ ನಮಾಮಿ॥

ಹನುಮಂತನು ಮನೋವೇಗ ಉಳ್ಳವನು. ಗಾಳಿಗೆ ಸಮನಾದ ವೇಗ ಉಳ್ಳವನು. ಜಿತೇಂದ್ರಿಯನೂ, ವಾಯುವಿನ ಮಗನೂ ಹಾಗೂ ಬುದ್ಧಿವಂತರಲ್ಲಿ ಶ್ರೇಷ್ಠನು. ಶ್ರೀರಾಮನು ಹನುಮನ ಹೃದಯದಲ್ಲಿ ವಾಸವಾಗಿದಾನೆಂದು ಪ್ರತೀತಿ.

“ಜೈ ಶ್ರೀರಾಮ್”. ಹನುಮಂತನ ಹೃದಯದಲ್ಲೇ ನೆಲೆಸಿರುವ ಶ್ರೀರಾಮ, ಸೀತಾ, ಲಕ್ಷ್ಮಣರ ಸ್ತುತಿಯಿಂದ ಹನುಮಂತನಿಗೆ ಪರಮ ಆನಂದ ಮತ್ತು ಸ್ವಾಮಿಯು ಸಂತೃಪ್ತನಾಗುತ್ತಾನೆ. ಸಕಲ ಕಾರ್ಯ ಸಿದ್ಧಿಗಾಗಿ, ಯಶಸ್ಸಿಗಾಗಿ, ಸಕಲ ಸಂಕಟ ನಿವಾರಣೆಗಾಗಿ ಹನುಮನ ಸ್ಮರಣೆ ಮಾಡಿದರೆ ಯಶಸ್ಸು ನಿಸ್ಸಂಶಯವಾಗಿ ದೊರಕುವುದು. ಹನುಮ ಸ್ವಾಮಿಗೆ ಅತ್ಯಂತ ಪ್ರಿಯವಾದದ್ದು ರಾಮನಾಮ ಸ್ಮರಣೆ. ಅದರಲ್ಲೂ ಸುಂದರಕಾಂಡ ಪಾರಾಯಣವು ಸ್ವಾಮಿಗೆ ಅತ್ಯಂತ ಪ್ರಿಯವಾದದ್ದು.

16ನೇ ಶತಮಾನದಲ್ಲಿ, ಅಕ್ಬರನ ರಾಜ್ಯಭಾರದಲ್ಲಿ, ಕಾರಾಗೃಹದಲ್ಲಿದ್ದಾಗ ಸಂತ ತುಳಸೀದಾಸರು ಭಕ್ತಿಯಿಂದ ರಚಿಸಿದ ದೋಹಾ "ಹನುಮಾನ್ ಚಾಲೀಸಾ". ತುಳಸೀದಾಸರು ಹನುಮಾನ್ ಚಾಲೀಸಾವನ್ನು ರಚಿಸಿದ ನಂತರ ಅಕ್ಬರನ ಅರಮನೆಯ ಮೇಲೆ ನೂರಾರು ವಾನರಗಳು ಆಕ್ರಮಣ ಮಾಡಿ, ಅಕ್ಬರನು ತುಳಸೀದಾಸರನ್ನು ಬಿಡುಗಡೆ ಮಾಡಿದನಂತೆ. ಹನುಮಾನ್ ಚಾಲೀಸಾ ಹನುಮನ ಪರಾಕ್ರಮವನ್ನಲ್ಲದೆ ವೈಜ್ಞಾನಿಕ ವಿಶೇಷಗಳನ್ನೂ ಹೊಂದಿದೆ. ಹನುಮಾನ್ ಚಾಲೀಸಾದ 18ನೇ ಶ್ಲೋಕದಲ್ಲಿ ಸೂರ್ಯ ಮತ್ತು ಭೂಮಿಯ ನಡುವಿನ ಅಂತರವನ್ನು ಯೋಜನೆಗಳ ಲೆಕ್ಕದಲ್ಲಿ ವಿವರಿಸಲಾಗಿದೆ. ಹನುಮಂತನು ಬಾಲ್ಯದಲ್ಲಿ ಸೂರ್ಯನನ್ನು ಒಂದು ಅಪೂರ್ವ ಫಲವೆಂದು ಭಾವಿಸಿ, ಆಕಾಶಕ್ಕೇ ನೆಗೆದು, ಅದನ್ನು ತಿನ್ನಲು ಪ್ರಯತ್ನಿಸಿದ್ದು ಬಹಳ ರೋಚಕವಾದ ಕಥೆ.

ಯುಗ ಸಹಸ್ರ ಯೋಜನ ಪರ ಭಾನೂ। ಲೀಲ್ಯೋ ತಾಹಿ ಮಧುರ ಫಲ ಜಾನೂ॥

ಈ ಶ್ಲೋಕದಲ್ಲಿ ಸೂರ್ಯನನ್ನು ಒಂದು ಹಣ್ಣು ಎಂದು ಭಾವಿಸಿ ಹನುಮಂತನು ಭೂಮಿಯಿಂದ ಯುಗ ಸಹಸ್ರ ಯೋಜನೆಗಳ ಅಂತರವನ್ನು ಹಾರಿ, ಸೂರ್ಯನನ್ನು ತಲುಪಿ, ಸೂರ್ಯನನ್ನು ನುಂಗಿದನೆಂದು ಹೇಳುತ್ತಾರೆ. ಇದರಲ್ಲಿ ಸೂರ್ಯ ಮತ್ತು ಭೂಮಿಯ ಅಂತರವನ್ನು 16ನೇ ಶತಮಾನದಲ್ಲೇ ಶ್ರೀರಾಮನ ಭಕ್ತರಾದ ಸಂತ ಗೋಸ್ವಾಮಿ ತುಳಸೀದಾಸರು ಹೇಳಿದ್ದಾರೆ. ಅದು ಹೇಗೆಂದರೆ, ಯುಗ = 12,000, ಸಹಸ್ರ = 1000, ಯೋಜನೆ = 8 ಮೈಲಿ, ಯುಗ ಸಹಸ್ರ ಯೋಜನ ಎಂದರೆ, ಸೂರ್ಯ ಮತ್ತು ಭೂಮಿಯ ಅಂತರ = 12000 X 1000 X 8, ಅಂದರೆ 96000000 ಮೈಲಿಗಳು ಅಥವಾ 153.6 ಮಿಲಿಯನ್ ಕಿಲೋಮೀಟರ್ ಗಳು. ತದನಂತರ 17ನೇ ಶತಮಾನದಲ್ಲಿ, Western Astronomers ಮತ್ತು Mathematicians ಪ್ರಕಾರ ಸೂರ್ಯ ಮತ್ತು ಭೂಮಿಯ ಅಂತರ 149.52 ಮಿಲಿಯನ್ ಕಿಲೋಮೀಟರ್ ಗಳು. ಇದು ಸಂತ ತುಳಸೀದಾಸರ ಲೆಕ್ಕಕ್ಕೆ ತುಂಬಾ ಹತ್ತಿರವಾಗಿರುವುದು ಒಂದು ಅಚ್ಚರಿಯೇ ಸರಿ.

ಅತ್ಯಂತ ಪರಾಕ್ರಮಿಯಾದ ಬಾಲಕ ಹನುಮಂತನು ತನ್ನ ಸಾಮರ್ಥ್ಯದಿಂದ ಸುಲಭವಾಗಿ ಭೂಮಿಯಿಂದ ಜಿಗಿದು, ಸೂರ್ಯನನ್ನು ಹಣ್ಣೆಂದು ತಿನ್ನಲು ಪ್ರಯತ್ನಿಸಿದ್ದು ಈ ಶ್ಲೋಕದಲ್ಲಿ ವಿವರಿಸಿದೆ. ಬಾಲ ಹನುಮನು ಸೂರ್ಯನನ್ನು ನುಂಗಿದಾಗ ಮೂರೂ ಲೋಕದಲ್ಲಿ ಕತ್ತಲೆ ಉಂಟಾಯಿತು ಮತ್ತು ಜಗತ್ತಿನಲ್ಲಿ ಯಾರೂ ಈ ಸಂಕಟವನ್ನು ದೂರ ಮಾಡಲಾಗಲಿಲ್ಲ. ಆಗ ದೇವತೆಗಳು ಪ್ರಾರ್ಥನೆ ಮಾಡಿ ಹನುಮಂತನನ್ನು ಪ್ರಾರ್ಥಿಸಿದಾಗ, ಸೂರ್ಯನನ್ನು ಮುಕ್ತಗೊಳಿಸಿ, ಎಲ್ಲರ ಸಂಕಟವನ್ನು ದೂರ ಮಾಡಿದ ಹನುಮಂತ. ಆದ್ದರಿಂದಲೇ ಹನುಮಂತನನ್ನು "ಸಂಕಟ ಮೋಚನ" ಎಂದು ಹೆಸರಿಸಿದ್ದಾರೆ.

ಹನುಮಂತ ಸ್ವಾಮಿಯ ಆಕಾರದ ಬಗ್ಗೆ ಹಲವಾರು ಕಲ್ಪನೆಗಳಿವೆ. ಸ್ವಾಮಿಯು ತನ್ನ ಸಾಮರ್ಥ್ಯದಿಂದ ತನ್ನ ಆಕಾರವನ್ನು ಅಣುವಿನ ಸೂಕ್ಷ್ಮರೂಪದಲ್ಲೂ ಮತ್ತು ಬ್ರಹ್ಮಾಂಡದಷ್ಟು ಬೃಹದಾಕಾರವಾಗಿಯೂ ಮಾರ್ಪಡಿಸಿಕೊಳ್ಳಬಲ್ಲರು. ಒಂದು ಕಲ್ಪನೆಯ ಪ್ರಕಾರ ಆಕಾಶ ಭೂಮಿಯನ್ನು ಒಂದು ಮಾಡಿ, ಅಲ್ಲಿಯವರೆಗೂ ತನ್ನ ಆಕಾರವನ್ನು ಬೆಳೆಸಿ, ಸೂರ್ಯ ಚಂದ್ರರನ್ನು ತನ್ನ ಕಣ್ಣುಗಳಾಗಿ ಮಾಡಿಕೊಂಡು ಪ್ರಕಾಶವನ್ನು ಬೀರುವ ಬಗ್ಗೆ ಒಂದು ಹಾಡು ಸಹ ಇದೆ. ಹನುಮಂತನನ್ನು ಪೂಜಿಸಿದವರು ಸಕಲ ಗ್ರಹಗಳ ದೋಷದಿಂದ ಮುಕ್ತಿ ಪಡೆಯುವರು ಎಂಬುದು ಇಂದ್ರಾದಿ ದೇವತೆಗಳು ಆತನ ಧೈರ್ಯ ಶೌರ್ಯಕ್ಕೆ ಮೆಚ್ಚಿ ಕೊಟ್ಟ ವರವಾಗಿದೆ.

ಕಾರ್ಯಸಿದ್ಧಿ ಹನುಮ, ಸಂಕಟನಿವಾರಣ ಹನುಮ, ಪಂಚಮುಖಿ ಮಾರುತಿ, ಆಂಜನೇಯ ಹೀಗೆ ಹಲವಾರು ನಾಮಗಳಿಂದ ಕರೆಸಿಕೊಳ್ಳುವ ಹನುಮಂತನ ಸ್ಮರಣೆ ಮಾತ್ರದಿಂದಲೇ ಸಜ್ಜನರು ತಮ್ಮ ಭಯ, ಅಂಜಿಕೆಗಳಿಂದ ಸಂಪೂರ್ಣವಾಗಿ ಮುಕ್ತರಾಗಬಹುದು. ಶ್ರೀರಾಮನ ಪರಮ ಭಕ್ತನಾದ ಹನುಮಂತನು, ರಾಮಮಂತ್ರದ ಜಪದ ಮೂಲಕ ರಾಮನನ್ನು ಆರಾಧಿಸುವವರನ್ನು ಎಂಥದೇ ಸಂಕಷ್ಟಗಳು ಬಂದರೂ ರಕ್ಷಿಸುವವನು. ಹನುಮಂತನನ್ನು ಒಲಿಸಿಕೊಳ್ಳಲು ರಾಮಮಂತ್ರದ ಜಪವೇ ಸುಲಭ ಮಾರ್ಗವು. ಹನುಮಂತನ ರೋಮ ರೋಮಗಳಲ್ಲಿಯೂ ರಾಮನಾಮವು ತುಂಬಿದೆ ಎಂದು ನಂಬಿಕೆ. ವಾಯುಪುತ್ರನಾದ ಹನುಮಂತನು ತನ್ನನ್ನು ಭಕ್ತಿಯಿಂದ ಸ್ತುತಿಸಿದವರಿಗೆ ಭವಭಯಹರಣವನ್ನು ಕರುಣಿಸುತ್ತಾನೆ. ಯಾವುದೇ ಕಷ್ಟಕ್ಕೆ ಸಿಲುಕಿರಲಿ, ಮಾನವ ಪ್ರಯತ್ನಕ್ಕೆ ಮೀರಿದಂತಹಾ ಪರಿಸ್ಥಿತಿಯಲ್ಲೂ ಹನುಮಂತನನ್ನು ಸ್ಮರಿಸಿ, ಹನುಮಾನ್ ಚಾಲೀಸಾ ಭಕ್ತಿಯಿಂದ ಪಠಿಸಿದರೆ, ಕಷ್ಟಗಳನ್ನು ನಿವಾರಿಸಿ, ಮನಸ್ಸಿಗೆ ನೆಮ್ಮದಿಯನ್ನು, ಕಾರ್ಯಸಾಫಲ್ಯತೆಯನ್ನೂ ಉಂಟುಮಾಡುತ್ತದೆ. ಪ್ರಪಂಚದಲ್ಲಿ ಇರುವ ಏಳು ಚಿರಂಜೀವಿಗಳಲ್ಲಿ ಹನುಮಾನ್ ಸ್ವಾಮಿಯೂ ಒಬ್ಬರು. ಶ್ರೀ ಆಂಜನೇಯ ಸ್ವಾಮಿಯು ಸರ್ವರಿಗೂ ಸನ್ಮಂಗಳವನ್ನುಂಟುಮಾಡಲಿ. ಸರ್ವೇ ಜನಾಃ ಸುಖಿನೋ ಭವಂತು। ಸಮಸ್ತ ಲೋಕೋ ಸುಖಿನೋ ಭವಂತು। ಲೋಕೋ ಸಮಸ್ತಾ ಸುಖಿನೋ ಭವಂತು।



**2.ದಶಾವತಾರ**

**ಹೊಸದಾಗಿ ನಿರ್ಮಾಣಗೊಂಡ ಬ್ರಹ್ಮಾಂಡದಲ್ಲಿ ಎಲ್ಲಾ ದೇವತೆಗಳ ಮೂಲ ಶಕ್ತಿಯಾದ ಆದಿಶಕ್ತಿಯಿಂದಲೇ ಬ್ರಹ್ಮ, ವಿಷ್ಣು, ಮಹೇಶ್ವರರು ರೂಪಗೊಂಡರು ಮತ್ತು ವಿನಾಶದ ಗುಣವುಳ್ಳ ರಾಕ್ಷಸರೂ ಕೂಡ ಸೃಷ್ಟಿಗೊಳ್ಳುತ್ತಾರೆ. ಬ್ರಹ್ಮಾಂಡ ಸೃಷ್ಟಿಯ ಆದಿ ಅಂತ್ಯದವರೆಗೂ ಬ್ರಹ್ಮ, ವಿಷ್ಣು, ಶಿವ (ತ್ರಿಮೂರ್ತಿಗಳು) ಸೃಷ್ಟಿ, ಸ್ಥಿತಿ, ಲಯದ ಕಾರ್ಯದಲ್ಲಿ ತೊಡಗಿದ್ದಾರೆ. ಮಾನವ ತನ್ನ ಕರ್ಮದಿಂದ ಹುಚ್ಚನಾಗಿ ಅಧರ್ಮದಲ್ಲಿ ತೊಡಗಿದ್ದಾಗ, ಅದನ್ನು ಅಂತ್ಯ ಮಾಡಲು ಮಹಾವಿಷ್ಣುವು ನಾನಾ ಅವತಾರಗಳನ್ನು ತಾಳಿ, ಭೂಮಿಯ ಮೇಲೆ ಅಧರ್ಮವನ್ನು ನಾಶಮಾಡಿ ಧರ್ಮವನ್ನು ಕಾಪಾಡುತ್ತಾನೆ.**

**ಯದಾಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ। ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ।**

**ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ।**

**ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ।**



**ಮಹಾವಿಷ್ಣುವು ಈ ರೀತಿಯಾಗಿ ದಶಾವತಾರಗಳಲ್ಲಿ ಅವತರಿಸಿದ್ದಾನೆ.**

**ಸತ್ಯಯುಗದಲ್ಲಿ – 3**

**ತ್ರೇತಾಯುಗದಲ್ಲಿ – 4**

**ದ್ವಾಪರಯುಗದಲ್ಲಿ – 2**

**ಕಲಿಯುಗದಲ್ಲಿ – 1**

**ಮೊದಲನೆಯ ಅವತಾರ: ಒಮ್ಮೆ ಮನು ತನ್ನ ಬೊಗಸೆಯಲ್ಲಿ ನೀರನ್ನು ಹಿಡಿದು ಸೂರ್ಯನಿಗೆ ಅರ್ಘ್ಯ ಕೊಡುವಾಗ, ಬೊಗಸೆಯಲ್ಲಿದ್ದ ನೀರಿನಲ್ಲಿ ಒಂದು ಮೀನು ಕಾಣಿಸಿ ಅದು ಹೇಳಿತಂತೆ. "ನೀನು ನಿನ್ನ ಸಕಲ ಪರಿವಾರದೊಂದಿಗೆ, ದವಸ ಧಾನ್ಯಗಳೊಂದಿಗೆ ಒಂದು ದೋಣಿಯಲ್ಲಿ ಸಿದ್ಧನಾಗು. ಇಲ್ಲಿ ಪ್ರಳಯವಾಗಲಿದೆ. ನಾನು ನಿನ್ನನ್ನು ಸುರಕ್ಷಿತ ಜಾಗಕ್ಕೆ ಕರೆದುಕೊಂಡು ಹೋಗುತ್ತೇನೆ" ಎಂದು. ಮನು ಮತ್ತು ಅವನ ಪರಿವಾರವನ್ನು ಹಿಮದಿಂದ ಆವರಿಸಿದ್ದ ಪ್ರದೇಶಕ್ಕೆ ದೋಣಿಯನ್ನು ಕರೆದೊಯ್ದು, ವೇದಗಳನ್ನು ಸಪ್ತಋಷಿಗಳಿಗೆ ಕೊಡುತ್ತಾನೆ. ವೇದಗಳನ್ನು ಅಪಹರಿಸಿದ್ದ ಹಯಗ್ರೀವ ಎಂಬ ರಾಕ್ಷಸನನ್ನು ಸಂಹರಿಸಿದ್ದು ಮಹಾವಿಷ್ಣು. ದಶಾವತಾರದ ಮೊದಲ ಅವತಾರವೇ ಮತ್ಸ್ಯಾವತಾರ.**

ಎರಡನೆಯ ಅವತಾರ: ಭೂಮಿ ಒಂದು ಅಗ್ನಿ ಗೋಲವಾಗಿತ್ತು. ಭೂಮಿಯ ಮೇಲೆ ಉಲ್ಕಾಪಾತವಾಗಿ ಅದರ ಫಲವಾಗಿ ಮಳೆಯಾಗಿ, ಭೂಮಿ ನೀರಿನಿಂದ ತುಂಬಿಕೊಂಡಿತು. ಆಗ ಉಗಮಿಸಿದ ಮೊದಲನೇ ಜೀವಿಯೇ ಮೀನು. ತದನಂತರ ನೀರು ಹಿಮವಾಗಿ ಪರಿವರ್ತನೆಗೊಂಡು, ಕ್ಷೀರಸಾಗರದಂತೆ ಕಾಣುತ್ತಿದ್ದ ಹಿಮದ ಸಾಗರವನ್ನು ಕರಗಿಸಲು, ಸಮುದ್ರ ಮಥನ ಆರಂಭವಾಯಿತು. ಮಂದಾರ ಪರ್ವತವನ್ನು ಸಮುದ್ರಕ್ಕೆ ತಂದು ಹಾಕಿ, ವಾಸುಕಿಯೆಂಬ ಮಹಾಸರ್ಪದಿಂದ ಸಮುದ್ರವನ್ನು ಕಡೆಯಲು ದೇವತೆಗಳು ಮತ್ತು ದಾನವರು ಒಟ್ಟಾಗಿ ಆರಂಭಿಸಿದರು. ಆಗ ಪರ್ವತವನ್ನು ತನ್ನ ಬೆನ್ನಮೇಲೆ ಎತ್ತಿದ್ದು ಮಹಾವಿಷ್ಣುವಿನ ಕೂರ್ಮಾವತಾರ. ಕೂರ್ಮ (ಆಮೆ) ನಾಲ್ಕು ಕಾಲುಗಳುಳ್ಳ ಜಲಚರ, ಭೂಮಿ ಮತ್ತು ನೀರು ಎರಡರಲ್ಲೂ ವಾಸಿಸಬಲ್ಲ ಜೀವಿ. ಮಹಾವಿಷ್ಣುವಿನ ಎರಡನೇ ಅವತಾರ ಕೂರ್ಮಾವತಾರ.

ಮೂರನೆಯ ಅವತಾರ: ಹಿರಣ್ಯಾಕ್ಷ ಎಂಬ ರಾಕ್ಷಸ ಭೂಮಿಯನ್ನು ಕಟ್ಟಿ ಪಾತಾಳದಲ್ಲಿ ಅಡಗಿಸುತ್ತಾನೆ. ಆಗ ಮಹಾವಿಷ್ಣುವು ವರಾಹ ಅವತಾರವನ್ನು ತಾಳಿ, ರಾಕ್ಷಸನನ್ನು ಸಂಹರಿಸಿ, ಭೂಮಿಯನ್ನು ಪಾತಾಳದಿಂದ ಮೇಲಕ್ಕೆ ಎತ್ತಿ ತಂದ. ಭೂಮಿಯ ಆಕಾರ ಗುಂಡಗಿದೆ ಎಂದು ಇದರಿಂದ ಅರ್ಥೈಸಿಕೊಳ್ಳಲಾಯಿತು. ಪಾತಾಳದಿಂದ ಮೇಲೆ ಬಂದ ಭೂಮಿಯ ಮೇಲೆ ಹೊಸ ಜೀವಿಗಳ ಸೃಷ್ಟಿ ಆರಂಭವಾಯಿತು. ದಶಾವತಾರದ ಮೂರನೆಯ ಅವತಾರ ವರಾಹಾವತಾರ.

ನಾಲ್ಕನೆಯ ಅವತಾರ: ಭೂಮಿಯ ಮೇಲೆ ಜೀವಸಂಕುಲದ ಸೃಷ್ಟಿಯಾದಮೇಲೆ, ಜೀವಿಗಳಿಗೆ ಅಪಾಯಗಳು ಎದುರಾಗಲು ಆರಂಭಿಸಿತು. ಆಗ ಮಹಾವಿಷ್ಣುವು, ಅರ್ಧ ಮನುಷ್ಯ, ಅರ್ಧ ಪ್ರಾಣಿಯ ರೂಪವಾದ ನರಸಿಂಹನ ಅವತಾರವನ್ನು ತಾಳಿ, ಭೂಮಿಯ ಮೇಲೆ ಅಧರ್ಮದ ಸಂಕೇತವಾಗಿದ್ದ ಹಿರಣ್ಯಕಶಿಪು ರಾಕ್ಷಸನನ್ನು ಸಂಹಾರ ಮಾಡಿ, ಧರ್ಮದ ಪ್ರತೀಕವಾದ ಪ್ರಹ್ಲಾದನನ್ನು ಕಾಪಾಡಿದನು. ಪ್ರಾಣಿಯ ರೂಪದಿಂದ ಮಾನವನ ಉಗಮದ ಪ್ರಕ್ರಿಯೆಯು ಆರಂಭವಾಯಿತು ಎಂದು ನರಸಿಂಹಾವತಾರವು ಸೂಚಿಸುತ್ತದೆ. ದಶಾವತಾರದ ನಾಲ್ಕನೆಯ ಅವತಾರ ನರಸಿಂಹಾವತಾರ.

ಐದನೆಯ ಅವತಾರ: ಬಾಗಿದ ಬೆನ್ನಿನಿಂದ ನಡೆಯುವ, ಕುಬ್ಜ ರೂಪದ ಮಾನವ, ಆಕಾಶದೆತ್ತರಕ್ಕೆ ಬೆಳೆದು ನಿಂತ ಮಹಾವಿಷ್ಣುವಿನ ಅವತಾರವೇ ವಾಮನಾವತಾರ. ಬಲಿ ಚಕ್ರವರ್ತಿಯು ವಾಮನನಿಗೆ ನೀಡಿದ ಮೂರು ಹೆಜ್ಜೆಗಳ ಭೂಮಿಯ ದಾನ ಪಡೆಯಲು, ವಾಮನ ಅವತಾರದ ಮಹಾವಿಷ್ಣುವು ಆಕಾಶದೆತ್ತರಕ್ಕೆ ಬೆಳೆದು ನಿಂತು, ಮೊದಲ ಹೆಜ್ಜೆಗೆ ಭೂಲೋಕ, ಎರಡನೇ ಹೆಜ್ಜೆಗೆ ಸ್ವರ್ಗಲೋಕವನ್ನು ಆವರಿಸಿ, ಮೂರನೆಯ ಹೆಜ್ಜೆಗೆ ಜಾಗವಿಲ್ಲದಾಗ, ಬಲಿ ಚಕ್ರವರ್ತಿಯು ತನ್ನ ತಲೆಯ ಮೇಲೆ ಜಾಗ ಕೊಡಬೇಕಾಯಿತು. ಬಲಿ ಚಕ್ರವರ್ತಿಯ ಅಹಂ ಅಡಗಿಸಲು ಮಹಾವಿಷ್ಣು ಮಾಡಿದ ಉಪಾಯವಿದು. ಸ್ವರ್ಗ ಲೋಕವನ್ನು ದೇವತೆಗಳಿಗೆ

ದಾನ ಮಾಡಿ, ತನಗೆ ಶರಣಾಗತನಾದ ಬಲಿ ಚಕ್ರವರ್ತಿಗೆ ಸಕಲವನ್ನೂ ಹಿಂದಕ್ಕೆ ಕೊಟ್ಟು, ಬಲಿ ಚಕ್ರವರ್ತಿಯನ್ನು ವಾಮನನು ಅನುಗ್ರಹಿಸಿದನೆಂದು ಪ್ರತೀತಿ. ಮಾನವನ ಉಗಮದಲ್ಲಿ ಕುಬ್ಜರೂಪದಿಂದ ನೇರವಾಗಿ ನಿಂತ ಮಾನವನ ಸ್ವರೂಪವನ್ನು ಈ ಅವತಾರವು ಸೂಚಿಸುತ್ತದೆ. ದಶಾವತಾರದ ಐದನೆಯ ಅವತಾರ ವಾಮನಾವತಾರ.

ಆರನೆಯ ಅವತಾರ: ಮಹಾವಿಷ್ಣುವಿನ ಆರನೆಯ ಅವತಾರ ಪರಶುರಾಮ. ಜಮದಗ್ನಿ ಋಷಿಯ ಮಗನಾಗಿ ಬ್ರಾಹ್ಮಣಕುಲದಲ್ಲಿ ಹುಟ್ಟಿದರೂ ಪರಶುರಾಮನು ಭೂಮಿಗೆ ಭಾರವಾಗಿ, ಕ್ಷತ್ರಿಯರು ಮಾಡುತ್ತಿದ್ದ ಯುದ್ಧಗಳಿಂದ ಉಂಟಾದ ಅಶಾಂತಿಯನ್ನು, ಸಂಕಷ್ಟಗಳನ್ನೂ ದೂರಮಾಡಲು, ತಾನು ಕ್ಷತ್ರಿಯ ಬ್ರಾಹ್ಮಣನಾಗಿ ಯುದ್ಧಕಲೆಯನ್ನು ಕಲಿತ ಮಹಾನುಭಾವ. ಶಿವನಿಂದ ವರವಾಗಿ ಪಡೆದ ಕೊಡಲಿಯನ್ನೇ ತನ್ನ ಆಯುಧವನ್ನಾಗಿ ಬಳಸಿಕೊಂಡು, 21 ಯುದ್ಧಗಳನ್ನು ಮಾಡಿ, ಕ್ಷತ್ರಿಯ ಕುಲವನ್ನೇ ಸಂಪೂರ್ಣ ನಾಶಮಾಡಲು ಪ್ರಯತ್ನಿಸಿದನು. ಕಾರ್ತವೀರ್ಯ ಮಹಾರಾಜನು ಜಮದಗ್ನಿ ಆಶ್ರಮದ ಕಾಮಧೇನು ಹಸುವನ್ನು ಋಷಿಗೆ ತಿಳಿಯದಂತೆ ಅಪಹರಿಸಿದಾಗ , ಜಮದಗ್ನಿಯು ರಾಜನನ್ನು ಕೊಂದು ಕಾಮಧೇನುವನ್ನು ಹಿಂದಕ್ಕೆ ತರುತ್ತಾನೆ. ಇದರಿಂದ ಕೋಪಗೊಂಡ ಕಾರ್ತವೀರ್ಯ ರಾಜನ ಮಗನು ಆಶ್ರಮಕ್ಕೆ ಬಂದು ಜಮದಗ್ನಿ ಋಷಿಯನ್ನು ಕೊಲ್ಲುತ್ತಾನೆ. ಹೀಗೆ ಧರ್ಮವನ್ನು, ಮತವನ್ನು ಕಾಪಾಡಬೇಕಾದ, ಬ್ರಾಹ್ಮಣರಿಗೆ ಯಾಗ ಹೋಮಗಳಿಗೆ ನೆರವು ನೀಡಬೇಕಾದ ರಾಜನೇ ಅಶಾಂತಿಯನ್ನು ಉಂಟುಮಾಡಿ ಋಷಿಮುನಿಗಳಿಗೆ ತೊಂದರೆ ಕೊಡುವುದನ್ನು ನೋಡಿ, ಪರಶುರಾಮನು ಅತಿ ಕ್ರೋಧದಿಂದ ಕ್ಷತ್ರಿಯ ಕುಲದ ನಾಶಕ್ಕೆ ಮುಂದಾದನು. ತಾನು ಯುದ್ಧದಲ್ಲಿ ಗೆದ್ದ ಭೂಮಿಯನ್ನೆಲ್ಲಾ ಋಷಿಮುನಿಗಳಿಗೆ ದಾನಮಾಡಿ, ಸಂಪತ್ತನ್ನೆಲ್ಲಾ ಬ್ರಾಹ್ಮಣರಿಗೆ, ಬಡವರಿಗೆ ಹಂಚಿ, ತಾನು ಹಿಮಾಲಯಕ್ಕೆ ತಪಸ್ಸು ಮಾಡಲು ಹೊರಟುಹೋದನು. ಮಹಾವಿಷ್ಣುವಿನ ದಶಾವತಾರಗಳಲ್ಲಿ ಚಿರಂಜೀವಿಯಾಗಿ ಉಳಿದಿರುವ ಏಕಮಾತ್ರ ಅವತಾರ ಪರಶುರಾಮನದು. ಪರಶುರಾಮನ ಅವತಾರವನ್ನು ಮಾನವನ ಉಗಮ ಮತ್ತು ವಿಕಾಸಕ್ಕೆ ಹೋಲಿಸಿದಾಗ, ಮಾನವ ಬೇಟೆಯಾಡಿ, ಒಂದು ಕಡೆಯಿಂದ ಇನ್ನೊಂದು ಕಡೆಗೆ ವಲಸೆ ಹೋಗುತ್ತಾ ಜೀವನ ಮಾಡುತ್ತಿದ್ದ ಎಂದು ತಿಳಿಯಬಹುದು. ದಶಾವತಾರದ ಆರನೆಯ ಅವತಾರ ಪರಶುರಾಮಾವತಾರ.

ಏಳನೆಯ ಅವತಾರ: ಶ್ರೀರಾಮ ಮಹಾವಿಷ್ಣುವಿನ ಏಳನೆಯ ಅವತಾರ. ತನ್ನ ಕೈಯ್ಯಲ್ಲಿ ಬಿಲ್ಲು ಬಾಣಗಳನ್ನು ಹಿಡಿದು, ಭೂಮಿಯ ಮೇಲಿನ ದುಷ್ಟ ಶಕ್ತಿಗಳನ್ನು ಸಂಹರಿಸಿ, ಶಿಷ್ಟರನ್ನು ರಕ್ಷಿಸಲು ಹೊರಟ ಒಬ್ಬ ನಾಗರೀಕ, ಪರಿಪೂರ್ಣ ಸುಂದರ ಮಾನವ ಶ್ರೀರಾಮ. ಶ್ರೀರಾಮನ ಜೀವನ ಚರಿತ್ರೆಯು ಒಂದು ಪವಿತ್ರ ಗ್ರಂಥ “ರಾಮಾಯಣ” ವಾಗಿ ಹೊರಹೊಮ್ಮಿದೆ. ರಾಮಾವತಾರದಲ್ಲಿ ಶ್ರೀರಾಮನನ್ನು ಒಬ್ಬ ವಿಧೇಯ

ಮಗನಾಗಿ, ಆದರ್ಶ ಪತಿಯಾಗಿ, ಒಬ್ಬ ಸತ್ಯವಂತ ಧರ್ಮ ಪರಿಪಾಲಕ ರಾಜನಾಗಿ, ಪ್ರಜಾಪ್ರಿಯನಾಗಿ, ಒಬ್ಬ ಪರಿಪೂರ್ಣ ವ್ಯಕ್ತಿಯಾಗಿ ಕಾಣಬಹುದು. ಶ್ರೀರಾಮನನ್ನು "ಪುರುಷೋತ್ತಮ" ಎಂದು ಕರೆಯುತ್ತಾರೆ. ಶ್ರೀರಾಮನ ಅವತಾರವನ್ನು ಮಾನವನ ವಿಕಾಸಕ್ಕೆ ಹೋಲಿಸಿದಾಗ, ಅನಾಗರೀಕತೆಯಿಂದ ನಾಗರೀಕತೆಯ ಕಡೆಗೆ ಹೊರಟ, ನೈತಿಕತೆಯ ಚೌಕಟ್ಟಿನಲ್ಲಿ ಬಾಳಿದ, ಬದುಕಿನಲ್ಲಿ ಆದರ್ಶಗಳನ್ನು, ಮೌಲ್ಯಗಳನ್ನು ಅಳವಡಿಸಿಕೊಂಡು, ಸಮಾಜಕ್ಕೆ ಬದ್ಧನಾದ ಒಬ್ಬ ಪರಿಪೂರ್ಣ ವ್ಯಕ್ತಿಯ ಚಿತ್ರವನ್ನು ಕಾಣಬಹುದು. ದಶಾವತಾರದ ಏಳನೆಯ ಅವತಾರ ಶ್ರೀರಾಮಾವತಾರ.

ಎಂಟನೆಯ ಅವತಾರ: ಕೃಷ್ಣಾವತಾರ ಮಹಾವಿಷ್ಣುವಿನ ಎಂಟನೆಯ ಅವತಾರ. ಶ್ರೀಕೃಷ್ಣ ಪರಮಾತ್ಮನ ಲೀಲೆಗಳನ್ನು ಅರಿಯದವರ್ಯಾರು? ಮಹಾಭಾರತ, ಭಾಗವತಗಳಲ್ಲಿ ಪರಮಾತ್ಮನ ಧರ್ಮಸಂಸ್ಥಾಪನೆ, ದುಷ್ಟಶಿಕ್ಷಣೆ, ಶಿಷ್ಟರಕ್ಷಣೆಯ ವಿಶೇಷಗಳನ್ನು ಮತ್ತು ಭಗವದ್ಗೀತೆಯ ಉಪದೇಶವನ್ನು ಕಾಣಬಹುದು. ಕೃಷ್ಣಾವತಾರದಲ್ಲಿ ಮಾನವನ ಉಗಮವನ್ನು ಗಮನಿಸಿದರೆ, ಮಾನವ ಜಾಣ್ಮೆ, ಬುದ್ಧಿವಂತಿಕೆ ಮತ್ತು ಚಾತುರ್ಯಗಳಿಂದ ಜಗತ್ತನ್ನು ಗೆಲ್ಲುವ ಸಾಮರ್ಥ್ಯವನ್ನು ಬೆಳೆಸಿಕೊಂಡಿರುವುದು ಕಂಡುಬರುತ್ತದೆ. ಇಡೀ ಜಗತ್ತನ್ನು ಮನುಷ್ಯತ್ವದ ಕಡೆಗೆ ಕರೆದೊಯ್ಯುವ ಪ್ರಯತ್ನವನ್ನು ಕೃಷ್ಣಾವತಾರದಲ್ಲಿ ಕಾಣಬಹುದು. ದಶಾವತಾರದ ಎಂಟನೆಯ ಅವತಾರ ಶ್ರೀಕೃಷ್ಣಾವತಾರ.

ಒಂಬತ್ತನೆಯ ಅವತಾರ: ಬುದ್ಧಾವತಾರ ಮಹಾವಿಷ್ಣುವಿನ ಒಂಬತ್ತನೆಯ ಅವತಾರ. ಮಾನವ ನಾಗರೀಕತೆ, ಜಾಣ್ಮೆ, ಚಾತುರ್ಯತೆ, ಮನುಷ್ಯತ್ವದ ಮೂಲಕ ಜಗತ್ತನ್ನು ಗೆಲ್ಲುವ ಛಲ, ಎಲ್ಲವನ್ನೂ ಸಾಧಿಸಿದ ನಂತರ, ಶಾಂತ ಮನಸ್ಸಿನಿಂದ ನನಗೆ ಇನ್ನೇನೂ ಬೇಡ ಎನ್ನುವ ವೈರಾಗ್ಯದ ಮನಸ್ಥಿತಿಗೆ ಬರುವುದನ್ನು ಬುದ್ಧಾವತಾರದಲ್ಲಿ ಕಾಣಬಹುದು. ರಾಜವೈಭೋಗಗಳನ್ನು ಬಿಟ್ಟು ಬಂದು ತಪಸ್ಸಿನಿಂದ ಬೌದ್ಧವೃಕ್ಷದ ಕೆಳಗೆ ಕೂತು ತಪಸ್ಸಿನಿಂದ ಜ್ಞಾನೋದಯವಾಗಿ, ಸಂಪೂರ್ಣ ವೈರಾಗ್ಯದ ಕಡೆ ಹೊರಟ ಬುದ್ಧನಿಂದ ಮನಃಶಾಂತಿಗೆ, ನೆಮ್ಮದಿಯ ಬದುಕಿಗೆ ನೀಡಿದ ಉಪದೇಶಗಳನ್ನು ಕಾಣಬಹುದು. ದಶಾವತಾರದ ಒಂಬತ್ತನೆಯ ಅವತಾರ ಬುದ್ಧಾವತಾರ.

ಹತ್ತನೆಯ ಅವತಾರ: ಮಹಾವಿಷ್ಣುವಿನ ಹತ್ತನೆಯ ಅವತಾರ ಕಲ್ಕಿ ಅವತಾರ. ಕಲ್ಕಿ ಪುರುಷ ಬಿಳಿಯ ಕುದುರೆಯ ಮೇಲೆ ಎರಡೂ ಕೈಗಳಲ್ಲಿ ಆಯುಧವನ್ನು ಹಿಡಿದು ಬರುತ್ತಾನೆ. ಕುದುರೆಗೆ ಬಿಳೀ ರೆಕ್ಕೆಗಳಿರುತ್ತವೆ. ಕುದುರೆಗೆ ರೆಕ್ಕೆ ಇರಲು ಸಾಧ್ಯವಿಲ್ಲ. ಆದರೆ ಅದು ರಾಕೆಟ್ ಗಳನ್ನು, ಕ್ಷಿಪಣಿಗಳನ್ನು ಸಾಂಕೇತಿಕವಾಗಿ ಸೂಚಿಸಿರಬಹುದು. ಇದು ಯುದ್ಧಪ್ರಿಯ ಮನುಷ್ಯನ ಮನಃಸ್ಥಿತಿಯನ್ನು ಹೇಳುವ ಪ್ರಯತ್ನ. ಆಧುನಿಕ ಶಸ್ತ್ರಾಸ್ತ್ರಗಳಿಂದ ತಂತ್ರಜ್ಞಾನವನ್ನು ಬಳಸಿಕೊಂಡು, ಮನುಷ್ಯ ಮನುಷ್ಯನ ಮೇಲೆಯೇ ಯುದ್ಧವನ್ನು

ಮಾಡುವ ಹಂಬಲವನ್ನು ಇದು ಸೂಚಿಸುತ್ತದೆ. ಇನ್ನೂ ಕಾದು ನೋಡಬೇಕಾದ ಯುದ್ಧಪ್ರಿಯನರ-ಕಲ್ಕಿ ಅವತಾರ. ಇದು ದಶಾವತಾರದ ಹತ್ತನೆಯ ಹಾಗೂ ಕಡೆಯ ಅವತಾರ ಕಲ್ಕ್ಯಾವತಾರ.

ಮಹಾವಿಷ್ಣುವಿನ ದಶಾವತಾರಗಳಲ್ಲಿ ಭೂ, ಬ್ರಹ್ಮಾಂಡದ ಸಕಲ ಜೀವ ಚರಾಚರಗಳ, ಮನುಜನ ಸೃಷ್ಟಿಯ ರಹಸ್ಯವನ್ನು ಮತ್ತು ಮನುಜನ ವಿಕಾಸವನ್ನು ಮಹಾಪುರುಷರ ಕಥೆಗಳನ್ನು ಸೇರಿಸಿ ವಿವರಿಸಲಾಗಿದೆ. ಮನುಕುಲದ ಉಗಮ ಮತ್ತು ವಿಕಾಸವನ್ನು ಹಂತ ಹಂತವಾಗಿ, ಜಲಚರದಿಂದ, ಪ್ರಾಣಿರೂಪದ ಮಾನವ, ಕುಬ್ಜ ಮಾನವ, ಅಲೆಮಾರಿ ಮಾನವ, ನಾಗರೀಕ ಮಾನವ, ಜಾಣ್ಮೆ ಚಾತುರ್ಯಯುಕ್ತ ಮಾನವ, ವೈರಾಗ್ಯದೆಡೆ ಮುಖ ಮಾಡಿದ ಮಾನವ ಕಡೆಗೆ ಯುದ್ಧಪ್ರಿಯ ಮಾನವನವರೆಗೂ ದಶಾವತಾರಗಳಲ್ಲಿ ಕಾಣಬಹುದಾಗಿದೆ. ಹೀಗೆ ಮಾನವ ವಿಕಾಸವನ್ನು ಅವಲೋಕಿಸಿದಾಗ ನಾವು ನಮ್ಮ ಜೀವನವನ್ನು ಹಂತ ಹಂತವಾಗಿ ಪರಿಪೂರ್ಣತೆಯ ಕಡೆಗೆ ಕೊಂಡೊಯ್ಯಲು ಅನುಸರಿಸಬೇಕಾದ ಮಾರ್ಗವನ್ನು ಮಹಾಪುರುಷರ ಜೀವನ ಚರಿತ್ರೆಯಿಂದ ಆಯ್ದುಕೊಳ್ಳಬಹುದಾಗಿದೆ.

ಮಹಾವಿಷ್ಣುವಿನ ದಶಾವತಾರದಿಂದ ಪ್ರೇರಿತರಾದ ನಾವೆಲ್ಲರೂ ನಮ್ಮ ನಮ್ಮ ಬದುಕಿನಲ್ಲಿ ನೈತಿಕ ಮೌಲ್ಯಗಳನ್ನು ಅಳವಡಿಸಿಕೊಂಡು, ಸಮಾಜಕ್ಕೆ ಬದ್ಧರಾಗಿ ಆದರ್ಶಪ್ರಾಯವಾದ ಜೀವನವನ್ನು ನಡೆಸೋಣ.

“ಓಂ ಶ್ರೀಮಹಾವಿಷ್ಣುವೇ ನಮಃ”



ನಾದಾರ್ಚನೆಯ ಪುಟಾಣಿ ಸದಸ್ಯೆ ಅಪರ್ಣಾ, ಅಂದರೆ ನಾವೆಲ್ಲಾ ಮುದ್ದಾಗಿ ಕರೆಯೋ ಅಪ್ಪಿ, ಎಲ್ಲರ ಕಣ್ಮಣಿ ಅಪ್ಪಿ, ಬರೆದಿರುವ English ಲೇಖನವನ್ನು ಇಲ್ಲಿ ಸೇರಿಸಿದ್ದೇನೆ. ಕರೋನಾ ಮಹಾಮಾರಿ ವಿಪರೀತವಾಗಿ ವಿಜೃಂಭಿಸಿದ್ದ ಕಾಲ ಅದು. ಎಷ್ಟೇ ಕೆಲಸವಿದ್ದರೂ, ಕಾರ್ ಡ್ರೈವ್ ಮಾಡ್ತಾ ಹೋಗ್ತಾಇದ್ದರೂ, ಸ್ವಲ್ಪ ಸಮಯಕ್ಕಾದರೂ ನಾದಾರ್ಚನೆ ತಂಡದ ಜೊತೆ ಸೇರಿ, ಮಾತನಾಡಿ, ಒಂದು ಪುಟ್ಟ ಹಾಡು ಹೇಳುವ ಅಪ್ಪಿ ನಮ್ಮೆಲ್ಲರ ಅಚ್ಚುಮೆಚ್ಚಿನ ಮಗು.

1.**War … Work …**

I am on call. It's 4:04 am now. Delivered a beautiful baby 20 minutes ago and




haven't had a chance to nap yet. Night shift starts at 6pm and ends at 7am. I usually take a quick nap even if it is for 30 minutes before I head to the night shift. It helps me focus my energy and keeps me going even if I have a busy shift. I tried yesterday and barely had a disturbed 35-minute nap. My alarm on my iPhone sounded loud at 5pm and suggested it's time to get ready to work. It's almost been 2 years since I have been working in the pandemic. Now more than ever it has started to feel like I am going to a war…

War is against an enemy force. As physicians and healthcare providers, it was always the illness we used to fight against and now the enemy force has more power with the COVID-19 alliance. This new synergy of the enemy force not only is worsening the illness but also has the ability to weaken our army of healthcare workers making the war a bit more dangerous than usual. Every week we have nurses, medical assistants, doctors and staff getting sick and not being able to work!



Just like a warrior — we have to wear our uniform( scrubs), protective gear (N95 and eye protection) and keep our weapons (medications and other treatment options) always ready. Gearing up to work never felt this way before! We worry what happens to those at home if we get taken down in this whole process. I can see the anxiety in the eyes of my colleagues with unvaccinated children and fragile older adults at home who always have to protect themselves as well as their family while still focusing 100% on the job.

Also- just like our soldiers, healthcare workers are always taken for granted. Isn't it their job to protect the rest of the clan? Politicians and media will temporarily portray healthcare force as super heros (which only lasts for a few days) and then everyone starts to criticize the science, the available medicine/ vaccines and what not. If the war needs to end — there must be oneness to fight against the enemy which may never happen given the current scenario in the world.

But I see why we do what we do! No one can pay us enough money to enter a room where there is a patient who is COVID positive and is breathing heavy in front of you while pushing to deliver a baby. We do what we have always wanted to do... "Heal and help". Also- we are so proud to have a community of providers who are likeminded. Being in war is more joy when you like the ones you fight the battle with. Grateful that I can fight this war and do some good to the greater cause of humanity. Thankful to have a job where I can help and heal others. But there comes a day when despite wearing all the personal protection equipment / taking precautions / getting vaccines — a fearful thought of "what if I get really sick from this?" crosses my mind. But by the time this thought crosses my mind- I would have already taken care of my patient to my best ability!!

